# ಕರ್ನಾಟಕ ಕಥಾಸರಿತ್ಸಾಗರ

ಸಿದ್ಧಾಂತಿ ಶಿವಶಂಕರ ಶಾಸ್ತ್ರಿ

ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡ

ಕರ್ನಾಟಕ ಕಥಾಸರಿತ್ಸಾಗರ :
ಸಿದ್ಧಾಂತಿ ಶಿವಶಂಕರ ಶಾಸ್ತ್ರಿ
ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡ

ಆರ್ಥಿಕ ನೆರವು : ಕರ್ನಾಟಕ ರಾಜ್ಯ ಸರಕಾರ

KARNAATAKA KATHAASARITSAAGARA : FIRST PART
of Mahakavi Somadeva in Kannada by
Siddhanti Shivashankara Shastri

Published in 1985 by
Siddhaling Pattanshetti
Secretary
Karnatak Vidyavardhak Sangha, Dharwad - 580 001

© Karnatak Vidyavardhak Sangha, Dharwad

Pages : 64 Copies : 5000

Printed at
Lalita Mudranalaya, Market, Dharwad - 580 001

# ಮೊದಲ ಮಾತು

ಕ್ರಿ. ಶ. ೧೮೯೦ ರಲ್ಲಿ ಸ್ಥಾಪಿತಗೊಂಡ ಕರ್ನಾಟಕ ವಿದ್ಯಾವರ್ಧಕ ಸಂಘವು ಕರ್ನಾಟಕದ ಅತ್ಯಂತ ಪ್ರಾಚೀನವಾದ, ಸಾಹಿತ್ಯಕ, ಮತ್ತು ಸಾಂಸ್ಕೃತಿಕ ಜೀವನದಲ್ಲಿ ಕನ್ನಡದ ಜನನಾಡಿಯನ್ನು ಮಿಡಿದ ತುಂಬ ಮಹತ್ವದ ಸಂಸ್ಥೆಯಾಗಿದೆ. ಕರ್ನಾಟಕದ ಅನೇಕ ಬರೆಹಗಾರರು ಕವಿಗಳು ಸಾಮಾಜಿಕ ಕಾರ್ಯಕರ್ತರು ಈ ಸಂಸ್ಥೆಯಿಂದ ಸ್ಫೂರ್ತಿ ಪಡೆದು, ಹೆಸರು ಪಡೆದು ನಾಡಿನ ತುಂಬ ತಮ್ಮ ಕಾರ್ಯಕ್ಷೇತ್ರವನ್ನು ವಿಸ್ತರಿಸಿ ಕೊಂಡಿದ್ದಾರೆ.

ತನ್ನ ಹುಟ್ಟಿನಾರಭ್ಯದಿಂದ ಕರ್ನಾಟಕ ವಿದ್ಯಾವರ್ಧಕ ಸಂಘವು ಕನ್ನಡ ಭಾಷೆ ಹಾಗೂ ಸಾಹಿತ್ಯದ ಬೆಳವಣಿಗೆಗಾಗಿ ಅವಿರತವಾಗಿ ಶ್ರಮಿಸುತ್ತ ಬಂದಿದೆ. ಹಲವಾರು ಬಗೆಯ ಕಾರ್ಯಕ್ರಮುಗಳನ್ನು ಹಮ್ಮಿಕೊಳ್ಳುವುದರೊಂದಿಗೆ ಧಾರವಾಡವನ್ನು ಕೇಂದ್ರ ವನ್ನಾಗಿ ಇಟ್ಟುಕೊಂಡು ಸಮಸ್ತ ಕರ್ನಾಟಕದ ಲೇಖಕರನ್ನು, ವಿಚಾರವಂತರನ್ನು ಒಂದುಗೂಡಿಸಿ ಬೆಳಕಿಗೆ ತರುವ ಕಾರ್ಯವನ್ನು ಸಂಘವು ಮೊದಲಿನಿಂದ ನಿಯಮಿತವಾಗಿ ಮಾಡುತ್ತ ಬಂದಿದೆ.

ಕನ್ನಡ ಬರೆಹಗಾರರ ಬಳಗವನ್ನು ಕಟ್ಟಿ ಅವರಿಂದ ವಿವಿಧ ವಿಷಯಗಳನ್ನು ಕುರಿತು ಗ್ರಂಥಗಳನ್ನು ಬರೆಸಿ ಅಥವಾ ಸ್ಪರ್ಧೆಗಳನ್ನು ಏರ್ಪಡಿಸಿ ಗ್ರಂಥರಚನೆಗೆ ಪ್ರೋತ್ಸಾಹ ನೀಡಿ ತನ್ಮೂಲಕ ಮೂಡಿಬಂದ ಕೃತಿಗಳನ್ನು ತುಂಬ ಪರಿಶ್ರಮದಿಂದ ಪ್ರಕಟಿಸಿ ಅವುಗಳನ್ನು ನಾಡಿನ ತುಂಬ ಹರಡಿದ್ದ ಕನ್ನಡಾಭಿಮಾನಿಗಳಿಗೆ ತಲುಪಿಸುವ ಮಹತ್ವದ ಚಾರಿತ್ರಿಕ ಹೊಣೆಗಾರಿಕೆಯನ್ನು ಸಹ ಸಂಘವು ನಿರ್ವಹಿಸಿಕೊಂಡು ಬಂದಿದೆ.

ಈ ನಿಟ್ಟಿನಲ್ಲಿ ಸಂಘವು ಸಾಹಿತ್ತಿಕ ಜಗತ್ತಿನಲ್ಲಿ ಬಹುಕಾಲ ಉಳಿಯುವಂಥ ನೂರಾರು ಪುಸ್ತಕಗಳನ್ನು ಪ್ರಕಟಿಸಿದ್ದು ಅವು ಸಂಘದ ಚರಿತ್ರೆಯಲ್ಲಿ ಉಳಿಯುವಂಥ ಕೃತಿಗಳು. ಈಚೆಗೆ ಕೆಲವು ವರ್ಷಗಳಿಂದ ಸಂಘದ ಪ್ರಕಾಶನ ವಿಭಾಗವು ನಾಡಿನಲ್ಲಿ ಬೆಳೆದು ಬಂದ ಪ್ರಕಾಶನದ ಪ್ರಸಾರದೊಂದಿಗೆ ಸ್ಪರ್ಧಾತ್ಮಕವಾಗಿ ಹೊಂದಿಕೊಂಡು ಹೋಗಲಾಗದೆ ಪುಸ್ತಕ ಪ್ರಕಟಣೆಯ ತನ್ನ ಕಾರ್ಯವನ್ನು ಸ್ಥಗಿತಗೊಳಿಸಿತು.

ಈಗ ಅನತಿ ಕಾಲದಲ್ಲಿಯೇ ತನ್ನ ಆಯುಷ್ಯದ ನೂರನೆಯ ವರ್ಧಂತಿ ಉತ್ಸವ ವನ್ನು ಸಂಘವು ಆಚರಿಸಲಿರುವ ಸಂದರ್ಭದಲ್ಲಿ ಪೂರ್ವಭಾವಿಯಾಗಿ ತನ್ನ ಪ್ರಾಚೀನ ಗೌರವವನ್ನು ಮೆರೆದ ಕೆಲವಾರು ಕೃತಿಗಳನ್ನು ಆಯ್ದುಕೊಂಡು ಅವುಗಳ ಮರು ಮುದ್ರಣದ ಯೋಜನೆಯನ್ನು ಹಾಕಿಕೊಂಡಿತು. ಹಿಂದೆ ಸಂಘವು ಪ್ರಕಟಿಸಿದ ಅನೇಕ ಪುಸ್ತಕಗಳು ಇಂದು ಕಾಲಗರ್ಭದಲ್ಲಿ ಸೇರಿಹೋಗಿ ಅವುಗಳ ಪ್ರತಿಗಳು, ಕೆಲವು ಕೃತಿ

ಗಳ ಹೆಸರುಗಳು ಸಹ ಗೊತ್ತಿಲ್ಲದಂತೆ ಆಗಿಬಿಟ್ಟಿವೆ. ಸಂಘದ ಇಡೀ ಚರಿತ್ರೆಯನ್ನು ಒಟ್ಟುಗೂಡಿಸಿ ಮಹತ್ವದ ಸಂಶೋಧನ ಗ್ರಂಥವೊಂದನ್ನು ಜವಾಬ್ದಾರಿಯುತ ವಿದ್ವಾಂಸರೊಬ್ಬರಿಂದ ಬರೆಸಬೇಕೆಂಬ ವಿಚಾರ ಸಹ ಸಂಸ್ಥೆಗಿದೆ. ಅದಕ್ಕೆ ಅನು ಕೂಲಕರವಾಗಿ ಸಹಾಯಕವಾಗುವಂಥ ಕಾರ್ಯವೆಂದು ಸದ್ಯ ಉಪಲಬ್ಧವಿದ್ದ ಕೃತಿಗಳಲ್ಲಿ ಹದಿನೈದು ಪುಸ್ತಕಗಳನ್ನು ಆಯ್ದು ಅವುಗಳ ಮರುಮುದ್ರಣದ ಯೋಜನೆಯೊಂದನ್ನು ಹಮ್ಮಿಕೊಂಡು ಅದರ ವಿವರವನ್ನು ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ೧೯೮೪ ರ ಪೂರ್ವಾರ್ಧದಲ್ಲಿ ಸಲ್ಲಿಸಲಾಯಿತು. ಆಗ ಇಲಾಖೆಯ ನಿರ್ದೇ ಶಕರಾಗಿದ್ದ ಶ್ರೀ ನ. ನಾ. ಕಠಾವಿ ಅವರು ಕರ್ನಾಟಕ ವಿದ್ಯಾವರ್ಧಕ ಸಂಘದ ಬಗ್ಗೆ ತಾವು ಇಟ್ಟುಕೊಂಡಿದ್ದ ಅಭಿಮಾನವನ್ನು ಹೃತ್ಪೂರ್ವಕವಾಗಿ ನೆನೆದು ಸಂಘವು ಹಮ್ಮಿಕೊಂಡ ಈ ಯೋಜನೆಯನ್ನು ಯಶಸ್ವಿಗೊಳಿಸುವಲ್ಲಿ ಎಲ್ಲ ರೀತಿಯ ನೆರವು ನೀಡುವುದಾಗಿ ಆಶ್ವಾಸನೆ ಕೊಟ್ಟರು. ಅದರಂತೆ ಯೋಜನೆಯನ್ನು ಒಪ್ಪಿ ಸರಕಾರವು ಹದಿನೈದು ಪುಸ್ತಕಗಳ ಪ್ರಕಾಶನಕ್ಕಾಗಿ ಎರಡು ಲಕ್ಷ ರೂಪಾಯಿಗಳನ್ನು ಅನುದಾನ ವಾಗಿ ಕೊಡುವಂತೆ ವ್ಯವಸ್ಥೆ ಮಾಡಿದ ಮಾನ್ಯ ಶ್ರೀ ಕಠಾವಿ ಅವರು ಸಂಘವು ಆ ಅನು ದಾನವನ್ನು ಸ್ವೀಕರಿಸುವ ಹೊತ್ತಿಗೆ ಭೌತಿಕವಾಗಿ ಇಲ್ಲವಾದದ್ದು ಸಂಘಕ್ಕೆ ಬಹಳ ದೊಡ್ಡ ನೋವು. ಹದಿನೈದು ಕೃತಿಗಳ ಪ್ರಕಾಶನದ ಈ ಸಂದರ್ಭದಲ್ಲಿ ಸಂಘವು ಅತ್ಯಂತ ಕೃತಜ್ಞತೆಯಿಂದ ಶ್ರೀ ಕಠಾವಿ ಅವರನ್ನು ಸ್ಮರಿಸುತ್ತದೆ.

ಸಂಘವು ಮರುಮುದ್ರಣದ ಪ್ರಕಾಶನ ಯೋಜನೆಯ ಮೊದಲ ಹಂತವಾಗಿ ಆಯ್ದುಕೊಂಡ ಹದಿನೈದು ಕೃತಿಗಳು ಇವು :

೧) ಶೌರ್ಯಸಾಗರ
೨) ಕನ್ನಡಿಗರ ಜನ್ಮಸಾರ್ಥಕತೆ
೩) ನರಕಾಸುರ ವಿಜಯ ವ್ಯಾಯೋಗಂ
೪) ಕರ್ನಾಟಕ ಕಥಾಸರಿತ್ಸಾಗರ
೫) ಮೋಹಿನೀ ಅಥವಾ ನಿಂದಕರ ನಡವಳಿ
೬) ಕನ್ನಡ ಮಾತು ತಲೆ ಎತ್ತುವ ಬಗೆ
೭) ಕಾಲಿದಾಸ ಚರಿತ್ರ
೮) ಕರ್ಣಾಟಕ ಯಯಾತಿನಾಟಕಂ
೯) ಗೃಹವೈದ್ಯಕವು
೧೦) ಭಾರತೀಯ ವಿದುಷಿಯರು
೧೧) ಶ್ರೇಯಃಸಾಧನ
೧೨) ಪಂಡಿತರಾಜ
೧೩) ಇಸೋಪನ ಚರಿತ್ರೆ

೧೪) ವಿದ್ಯಾರಣ್ಯ ಸ್ವಾಮಿಗಳು
೧೫) ನರಗುಂದದ ಬಂಡಾಯ

ಕ್ರಮವಾಗಿ ಪ್ರಕಟವಾಗುತ್ತಿರುವ ಈ ಕೃತಿಗಳು ಸಹ ವಿಷಯ ವೈವಿಧ್ಯ, ಆ ಕಾಲದ ಭಾಷಾ ಸೌಂದರ್ಯ, ವ್ಯಾಕರಣ ಹಾಗೂ ಭಾಷಾಶಾಸ್ತ್ರದ ದೃಷ್ಟಿಕೋನ ಹಾಗೂ ಬೆಳೆಯಬೇಕಾಗಿದ್ದ ಒಂದು ಭಾಷೆಯ ನಿರಂತರ ಪರಿಶ್ರಮದ ವಿಕಾಸಶೀಲ ಘಟ್ಟ ಮುಂತಾದ ದೃಷ್ಟಿಯಿಂದ ಪ್ರಮುಖ ಆಯಾಮಗಳನ್ನು ಹೊಂದಿರುವಂಥವು. ಈ ಕೃತಿಗಳನ್ನು ಅಗ ಕರ್ನಾಟಕ ವಿದ್ಯಾವರ್ಧಕ ಸಂಘಕ್ಕಾಗಿ ರಚಿಸಿಕೊಟ್ಟ ಆಯಾ ಲೇಖಕರು ತಮ್ಮ ಕೃತಿಗಳ ಸ್ವಾಮ್ಯವನ್ನು ಸಂಘಕ್ಕೆ ನೀಡಿದ್ದು ಈಗ ಈ ಕೃತಿಗಳ ಏಕಸ್ವಾಮ್ಯ ಹೊಂದಿದ ಸಂಘವು ಆ ಎಲ್ಲ ಲೇಖಕರನ್ನು ಕೃತಜ್ಞತೆಯಿಂದ ಸ್ಮರಿಸುತ್ತದೆ.

ಈ ಕೃತಿಗಳಲ್ಲಿ ಯಾವುದೇ ಬದಲಾವಣೆ ಅಥವಾ ಹೊಸ ಸೇರ್ಪಡೆ ಇತ್ಯಾದಿ ಮಾಡದೆ ಅವು ಇದ್ದ ಮೂಲ ಸ್ಥಿತಿಯಲ್ಲಿಯೇ ಮರುಮುದ್ರಿಸಲಾಗಿದೆ. ಐತಿಹಾಸಿಕ ದೃಷ್ಟಿಯಿಂದ ಈ ಕೃತಿಗಳನ್ನು ಅಭ್ಯಸಿಸುವವರಿಗೆ ಯಾವ ದೃಷ್ಟಿಯಿಂದಲೂ ವ್ಯತ್ಯಯ ಬರದ ಹಾಗೆ ಇವುಗಳ ಮೂಲ ಸ್ವರೂಪವನ್ನು ಉಳಿಸಿಕೊಳ್ಳಲಾಗಿದೆ. ಈಗ ಬೇರೆ ಎಲ್ಲಿಯೂ ಉಪಲಬ್ಧವಿರದ ಈ ವಿರಳ ಕೃತಿಗಳನ್ನು ಹೀಗೆ ಅವು ಇದ್ದ ಸ್ವರೂಪದಲ್ಲಿಯೇ ಉಪಲಬ್ಧಗೊಳಿಸಿ ಅವುಗಳ ಆಯುಷ್ಯ ಹಾಗೂ ಅಸ್ತಿತ್ವಗಳನ್ನು ಇನ್ನಷ್ಟು ಸುಭದ್ರಗೊಳಿಸುವ ನಿಟ್ಟಿನಲ್ಲಿ ಈ ಮರುಮುದ್ರಣಗಳು ಜನತೆಗೆ ಪ್ರಯೋಜನಕಾರಿಯಾದರೆ ಸಂಘದ ಶ್ರಮ ಸಾರ್ಥಕವಾದಂತೆ.

ಈ ಕೃತಿಗಳನ್ನು ಪ್ರಕಟಿಸಲು ಆರ್ಥಿಕ ನೆರವು ನೀಡಿದ ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ನಾವು ವಿಶೇಷವಾಗಿ ಕೃತಜ್ಞರಾಗಿದ್ದೇವೆ. ಈ ಹದಿನೈದು ಕೃತಿಗಳಲ್ಲದೆ ಕರ್ನಾಟಕ ವಿದ್ಯಾವರ್ಧಕ ಸಂಘದ ಇನ್ನಿತರ ಎಲ್ಲ ಕೃತಿಗಳನ್ನು ಹೀಗೆ ಮರುಮುದ್ರಣ ಮಾಡಿ ನಾಡಿನ ತುಂಬ ಅವು ವ್ಯಾಪಿಸುವಂತೆ ಮಾಡುವ ಉದ್ದೇಶ ನಮಗಿರುವುದರಿಂದ ಇನ್ನು ಮುಂದೆಯೂ ಕರ್ನಾಟಕ ಸರಕಾರ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ನಮ್ಮ ಈ ಬೃಹತ್ ಯೋಜನೆ ಯಶಸ್ವಿಯಾಗಿ ಮುಂದುವರಿಯುವಂತೆ ನಮಗೆ ಆರ್ಥಿಕ ನೆರವನ್ನು ನೀಡಿ ಇಂಥ ಒಂದು ಐತಿಹಾಸಿಕ ಉಪಕ್ರಮದ ಮೂಲಕ ಪ್ರಕಾಶಿತಗೊಳ್ಳುವ ಕೃತಿಗಳ ಪುನರುಜ್ಜೀವನಕ್ಕೆ ಕಾರಣವಾಗಿ ನಮ್ಮ ಬೆನ್ನು ತಟ್ಟಲಿ ಎಂದು ಆಶಿಸುತ್ತೇವೆ.

ಸುಮಾರು ಎರಡೂವರೆ ಸಾವಿರ ವರ್ಷಗಳ ಹಿಂದೆ ರಚಿತವಾದ 'ಬೃಹತ್ಕಥಾ' ಭಾರತೀಯ ಕಥಾಸಾಹಿತ್ಯ ಮತ್ತು ಉಳಿದ ರಚನಾತ್ಮಕ ಸಾಹಿತ್ಯದಲ್ಲಿ ತನ್ನದೇ ಆದ ಸ್ಥಾನವನ್ನು ಹೊಂದಿದೆ. ಭಾರತದ ಬಹುಶಃ ಎಲ್ಲ ಭಾಷೆಗಳಲ್ಲಿ ರಚಿತವಾದ ಹಲವಾರು ಕಾವ್ಯ, ನಾಟಕ, ಕಥೆ, ಕಾದಂಬರಿಗೆ ಮೂಲ ವಸ್ತುವನ್ನು ಒದಗಿಸಿದ ಸ್ರೋತಸ್ಸಿನ

ಯಾಗಿ ಬೃಹತ್ಕಥಾ ನಿರಂತರವಾಗಿ ಪ್ರವಹಿಸುತ್ತ ಬಂದಿದೆ. ನಂತರ ಸೋಮದೇವ ಕವಿ ಇದನ್ನು 'ಕಥಾಸರಿತ್ಸಾಗರ' ಎಂಬ ಹೆಸರಿನಲ್ಲಿ ಸಂಕ್ಷಿಪ್ತವಾಗಿ ಪುನರ್ರಚಿಸಿದ್ದುದು ನಂತರದ ಉಲ್ಲೇಖಗಳಲ್ಲಿ ದೊರೆಯುತ್ತದೆ. ಇಂಥ ಪ್ರಸಿದ್ಧ ಖ್ಯಾತಿಯ ಕಥಾಸರಿತ್ಸಾಗರ ದಲ್ಲಿ ಲಂಬಕಗಳೆಂಬ ಹೆಸರಿನಲ್ಲಿ ಒಟ್ಟು ಹದಿನೆಂಟು ಭಾಗಗಳುಂಟು. ಅವುಗಳಲ್ಲಿ ಪ್ರಥಮ ಭಾಗವನ್ನು ಅತ್ಯಂತ ಸಮರ್ಥ ಶಿಷ್ಟ ಕನ್ನಡದಲ್ಲಿ ಆಗ ಮದರಾಸಿನಲ್ಲಿದ್ದ ಪಂಡಿತ ಸಿದ್ಧಾಂತಿ ಶಿವಶಂಕರ ಶಾಸ್ತ್ರಿಗಳು ರಚಿಸಿದ್ದು ಇದನ್ನು ಕರ್ನಾಟಕ ವಿದ್ಯಾ ವರ್ಧಕ ಸಂಘವು ತನ್ನ ವಾಗ್ಭೂಷಣ ಗ್ರಂಥಮಾಲೆಯ ೩೯ನೆಯ ಪುಷ್ಪವಾಗಿ ಪ್ರಕಟಿ ಸಿತ್ತು. ಮೇ ೧೯೦೬ ರಲ್ಲಿ ಪ್ರಕಟವಾಗಿದ್ದ ಈ ಗ್ರಂಥದ ಬೆಲೆ ಆಗ ಆರು ಆಣೆಯಾಗಿತ್ತು. ಇಲ್ಲಿ ಕಥಾಪೀಠವೆಂಬ ಪ್ರಥಮ ಲಂಬಕದ ಎಂಟು ತರಂಗಗಳು ಪ್ರಕಟವಾಗಿದ್ದು, ಉಳಿದ ಹದಿನೇಳು ಲಂಬಕಗಳನ್ನೂ ಪಂಡಿತ ಸಿದ್ಧಾಂತಿ ಶಿವಶಂಕರ ಶಾಸ್ತ್ರಿಗಳು ಕನ್ನಡಿಸಿದ್ದ ರೆಂಬುದು, ರಾಜಾಶ್ರಯದ ಬದಲು ಜನಾಶ್ರಯದಿಂದ ಅವು ಬೆಳಕು ಕಾಣಬೇಕೆಂದು ಬಯಸಿದ್ದರೆಂಬುದು ಅವರ ಪ್ರಸ್ತಾವನೆಯಿಂದ ವ್ಯಕ್ತವಾಗುತ್ತದೆ. ಮುಂದೆ ಅವರ ಹಸ್ತಪ್ರತಿ ಏನಾಯಿತೋ ತಿಳಿಯದು. ಅವೆಲ್ಲ ಈಗ ಮತ್ತೆ ಒಟ್ಟಿಗೆ ಪ್ರಕಟವಾಗುವಂತಿ ದ್ದರೆ ಅದೊಂದು ಐತಿಹಾಸಿಕ ಉಪಕ್ರಮವೇ ಆಗುತ್ತಿತ್ತು.

ಕರ್ನಾಟಕದ ಜನತೆ, ಸಾಹಿತ್ಯಾಸಕ್ತ ಸ್ನೇಹಿತರು, ಗ್ರಂಥಾಲಯಗಳ ಅಧಿಕಾರಿ ಗಳು ಪ್ರಾಚೀನ ಕೃತಿ ಸಂಗ್ರಾಹಕರು ಹೆಚ್ಚಿನ ಸಂಖ್ಯೆಯಲ್ಲಿ ಈ ಕೃತಿಗಳ ಪ್ರತಿಗಳನ್ನು ಕೊಂಡು ಆರ್ಥಿಕವಾಗಿ ಸಹಾಯ ಮಾಡಿದಾಗ ಇನ್ನುಳಿದ ಕೃತಿಗಳನ್ನು ಬೇಗನೆ ಬೆಳಕಿಗೆ ತರುವ ನಮ್ಮ ಯೋಜನೆ ಬಹು ಬೇಗನೆ ಕಾರ್ಯಗತಗೊಳ್ಳುವಲ್ಲಿ ಸಂದೇಹವಿಲ್ಲ.

ಈ ಕೃತಿಯ ಪ್ರಕಟಣೆಗೆ ಪ್ರತ್ಯಕ್ಷ ಅಥವಾ ಅಪ್ರತ್ಯಕ್ಷವಾಗಿ ಸಹಾಯ ಸಲ್ಲಿಸಿದ ಎಲ್ಲ ಆತ್ಮೀಯರಿಗೆ ಹಾಗೂ ಮುದ್ರಣಾಲಯದ ಸಿಬ್ಬಂದಿಗೆ ಕೃತಜ್ಞತೆಗಳು.

೧-೮-೧೯೮೫ ಧಾರವಾಡ

**ಸಿದ್ಧಲಿಂಗ ಪಟ್ಟಣಶೆಟ್ಟಿ**
ಪ್ರಧಾನ ಕಾರ್ಯದರ್ಶಿ

**ಪಾಟೀಲ ಪುಟ್ಟಪ್ಪ**
ಅಧ್ಯಕ್ಷರು

ಶ್ರೀರಸ್ತು

ಕರ್ನಾಟಕ ಕಥಾಸರಿತ್ಸಾಗರವು

# ಉಪೋದ್ಘಾತವು

ಅತ್ಯಂತಾದ್ಭುತವಾದ ಈ ಕಥಾಸಂವಿಧಾನಸರಣಿ ಮೊದಲು ಶ್ರೀ ಪರಮೇಶ್ವರ ನಿಂದ ಪಾರ್ವತೀದೇವಿಗೆ ತಿಳಿಸಲ್ಪಟ್ಟಿತು. ಆ ಸಮಯದಲ್ಲಿ ಪುಷ್ಪದಂತನೆಂಬ ಗಣೋತ್ತಮನು ಕೈಲಾಸದಲ್ಲಿ ಪ್ರಚ್ಛನ್ನರೂಪನಾಗಿದ್ದು ಇದನಾಲಿಸಿದನು. ಅದರಿಂದ ಆತನಿಗೆ ಪಾರ್ವತಿ ಶಾಪವಿತ್ತಳು. ಆ ಶಾಪದಿಂದ ಪುಷ್ಪದಂತನು ಭೂಲೋಕದಲ್ಲಿ ನಂದರಾಜ ಮಂತ್ರಿಯಾದ ವರರುಚಿಯಾಗಿ ಅವತರಿಸಿ ವಿಂಧ್ಯವಾಸಿಯಾದ ಕಾಣಭೂತಿಯೆಂಬಪೆಸರ ಪಿಶಾಚರಾಜನಿಗೆ ಆ ಕಥೆಯನ್ನು ನಿರೂಪಿಸಿದನು. ಆತನಿದನ್ನು ಸಾತವಾಹನ ಮಹೀಪತಿ ಮಂತ್ರಿಯಾದ ಗುಣಾಢ್ಯ ಪಂಡಿತನಿಗೆ ಹೇಳಲು, ಆ ಗುಣಾಢ್ಯನು ಲಕ್ಷಗ್ರಂಥ ಪರಿಮಿತ ವಾದ "ಬೃಹತ್ಕಥೆ" ಯೆಂಬ ಹೆಸರಿನ ಗ್ರಂಥವನ್ನಾಗಿ ಪೈಶಾಚಿಕ ಭಾಷೆಯಲ್ಲಿ ರಚಿಸಿದನು. ಶ್ರೀಸಾತವಾಹನ ರಾಜನದನ್ನು ಭೂಲೋಕದಲ್ಲಿ ಪ್ರಸಿದ್ಧಿಗೆ ತಂದನು.

ಈ ಕಥೆಗೆ ಭೂಲೋಕದಲ್ಲಿ ಪ್ರಥಮಪ್ರವರ್ತಕನಾದ ವರರುಚಿ ಹೂಣ ಪ್ರಭು ಚರಿತ್ರಗಳಲ್ಲಿ ನೆಗೆಳ್ತೆವಡೆದ ಅಲೆಗ್ಝಾಂಡರಿಗೆ ಸಮಕಾಲಿಕನಾದ ಚಂದ್ರಗುಪ್ತ ಮಹಾ ರಾಜನ ತಂದೆಯಾದ ನಂದನಿಗೆ ಮಂತ್ರಿಯೆಂಬುದು ಈ ಗ್ರಂಥದಿಂದಲೇ ತಿಳಿಯಬರುತ್ತದೆ. ಅದರಿಂದ ಇಂದಿಗೆ ೨,೨೫೦ ಸಂವತ್ಸರಗಳಿಗೆ ಪೂರ್ವದಲ್ಲಿ ಉಂಟಾಗಿರಬೇಕೆಂಬುದು ಊಹ್ಯವಾಗಿದೆ.

ಇದರ ಪ್ರಭಾವವು ಇದರ ಪಠನದಿಂದಲೇ ತಿಳಿಯಬರುವುದರಿಂದ ಆ ವಿಷಯದಲ್ಲಿ ವಿಶೇಷವಾಗಿ ವಿವರಿಸುವುದು ಅನಾವಶ್ಯಕವಾದರೂ ಕೊಂಚ ಮಟ್ಟಿಗೆ ತಿಳಿಸಲ್ಪಡುವುದು. ನಾಗಾನಂದ ಪ್ರಿಯದರ್ಶಿಕಾ ರತ್ನಾವಳೀ ಮುದ್ರಾರಾಕ್ಷಸಾದಿ ನಾಟಕಗಳಿಗೂ, ಕಾದಂಬ ರ್ಯಾದಿ ಕಥೆಗಳಿಗೂ ಈ ಬೃಹತ್ಕಥೆಯೇ ಮೂಲವಾಗಿದೆ. ಮಹಾಕವಿ ಕಾಳಿದಾಸನೂ ಮೇಘಸಂದೇಶದಲ್ಲಿ ಇದರೊಳಗಣ ಕಥೆಯ ಛಾಯೆಯನೆಳೆದಿರುವನು. ವಾಸವದತ್ತಾ ಗ್ರಂಥದಲ್ಲಿ ಸುಬಂಧು ಕವಿಯೂ ಕಾದಂಬರೀ ಗ್ರಂಥದಲ್ಲಿ ಬಾಣ ಕವಿಯೂ ಈ ಬೃಹತ್ಕಥೆ ಯನ್ನು ಕೊಂಡಾಡಿರುವರು.

ಹೀಗೆ ಪೈಶಾಚೀ ಭಾಷೆಯಲ್ಲಿರುವ ಬೃಹತ್ಕಥೆಯನ್ನು ಅನಂತ ದೇವನೆಂಬ ಮಹಾರಾಜನು ತನ್ನ ಪಟ್ಟದ ರಾಣಿಯಾದ ಸೂರ್ಯವತಿಯೆಂಬ ಸತಿಗೆ ಶಾಸ್ತ್ರಶ್ರವಣ ಪರಿಶ್ರಮ ಕಾಲದಲ್ಲಿ ಹೇಳಿಸಲು, ಸೋಮದೇವನೆಂಬ ಕವಿಶ್ರೇಷ್ಠನಿಂದ ಕಥಾಸರಿತ್ಸಾಗರ ವೆಂಬ ಗ್ರಂಥವನ್ನಾಗಿ ಸಂಕ್ಷೇಪರಚನೆಯಾಗಿರುವಂತೆ ಮಾಡಿಸಿದನು. ಆ ಅನಂತ

ದೇವನು ಸಾತವಾಹನ ಮಹಾರಾಜವಂಶಜನು; ಮತ್ತು ಕಾಶ್ಮೀರ ದೇಶದ ಅರಸ ನಾಗಿರ್ದನು.

ಪ್ರಕೃತದಲ್ಲಿ, ನಾನು ಆ ಕಥಾಸರಿತ್ಸಾಗರವನ್ನು ಕನ್ನಡಿಗರ ಮನ್ನಣೆಗೊಂಡು ಎಲ್ಲ ಜನರುಲ್ಲಾಸ ಪಡುವಂತೆ ಕರ್ಣಾಟಕ ವಚನ ರಚನೆಯಾಗಿ ರಚಿಸತೊಡಗಿದೆನು. ಆದರೆ ಮೊದಲು, ಒಬ್ಬರಸನ ಮಂತ್ರಿ ಅರಸನಿಗಾಗಿಯೂ, ಬಳಿಕ ಒಬ್ಬ ಮಹಾರಾಣಿಯ ಬಳಿಯಣಕವಿ ಆಕೆಗಾಗಿಯೂ ರಚಿಸಿದ ಈ ಮಹಾಗ್ರಂಥವನ್ನು ರಾಜಾಶ್ರಯವಿಲ್ಲದೆ ಭಾಷಾಭಿಮಾನದಿಂದ ರಚಿಸಿರುವೆನು. ಪ್ರಜಾಭಿಮಾನಕ್ಕಾದರೂ ಮುಂದೆ ಪಾತ್ರವಾಗಿ ಈ ಗ್ರಂಥವು ಪ್ರಚಾರಗೊಂಡರೆ ಅಲ್ಲವೆ ಸಾರ್ಥಕವೆನಿಸುವುದು ?

ಹಾಗೆ ಪ್ರಚಾರಕ್ಕೆ ಸಹಾಯಕವಾದ ಕರ್ಣಾಟಕ ವಿದ್ಯಾವರ್ಧಕ ಸಂಘಕ್ಕೆ ನಾನು ಕೃತಜ್ಞನೆನಿಸುವುದು ನನಗೆ ಭೂಷಣವೆಂದೂ ಕರ್ಣಾಟಕ ಭಾಷಾಭಿಮಾನಿಗಳಿಗೆ ಪ್ರೋತ್ಸಾಹಕವೆಂದೂ ನಂಬಿರುವೆನು. ನನ್ನ ಕೃತಜ್ಞತೆಯಿಂದ ನಾನು ಈಗಲೇ ಪ್ರಚಾರ ದಲ್ಲಿಡಬೇಕೆಂದುತ್ಸಾಹಿಸಿದ ಕರ್ನಾಟಕ ವಿದ್ಯಾವರ್ಧಕ ಸಂಘದವರ ಉದ್ದೇಶದಂತೆ ಈ ಕಥಾಸರಿತ್ಸಾಗರದ ೧೮ ಭಾಗಗಳಲ್ಲಿ ಮೊದಲಣ ಪೀಠಿಕಾಲಂಬಕವೆಂಬ ೧ ನೆಯ ಭಾಗ ವನ್ನು ಮಾತ್ರವೇ ಮುಖಪತ್ರಾದಿ ಸಹಿತವಾದ ಚಿಕ್ಕ ಪೊತ್ತಗೆಯನ್ನಾಗಿ ಹೊರಪಡಿಸಲು ಒಪ್ಪಿದೆನು. ಆದರೂ, ಸಂಘದವರು ಸಂಪೂರ್ಣ ಗ್ರಂಥವನ್ನು ಬೇಗನೆ ವಾಗ್ಭೂಷಣ ಪತ್ರಿಕೆಯಲ್ಲಿ ಮುದ್ರಿಸುತ್ತ ಬಂದು ನನಗೂ ಕನ್ನಡ ನಾಡಿಗರಿಗೂ ಸಂತಸವೀವರೆಂದೂ ನೆರೆನಂಬಿರುವೆನು.

ಆವ ಮಹಾದೇವನ ವಾಗಮೃತವಾಗಿ ಈ ಕಥೆ ಮೊದಲು ಹೊರಟಿತೋ, ಆ ದೇವ ದೇವನ ಕರುಣೆಯಿಂದ ಈ ಗ್ರಂಥವು ಸಂಪೂರ್ಣವಾಗಬೇಕೆಂದು ಸಂಪ್ರಾರ್ಥಿಸುವೆನು.

ವಾ. ಷ || ಸತ್ಕಥಾಶ್ರವಣದಿಂ ಸಂತಸಂಮೊಳೆಡಪುದು |
ಹೃತ್ಕಮಲಕುಲ್ಲಾಸಮುಂಟಾಗುತಿರ್ಪುದು ವಿ |
ಪತ್ಕಾಲದಲ್ಲುಳಿವ ಸಂಪದದೊಳುದ್ವೃತ್ತನಾಗದಂತೆ ವಿವೇಕಮಂ ||
ಚಿತ್ಕಾಂತಿಯೊಡನೊದವಿಕುಂ ಸುಭಾಷಿತದೊಳ್ಳ |
ಮತ್ಕಾರ ಮುದಿಕುಮುದರಿಂದೆಲ್ಲರುಂಪದೆದು |
ಸತ್ಕಥಾಬೃಂದಮಾಲಿಸುತಮುಂದಾನಂದಮೊಂದುತಿರವೇಳ್ಕುಮಿಳೆಯೊಳ್ ||

ಇಂತೆಂದು ಮದೀಯ ಸುನೀತಿ ಸುಧಾಕರ ಗ್ರಂಥದ ಪದ್ಯಮನಿಲ್ಲಿ ನೆನೆದು, ಗುಣಗ್ರಾಹಿಗಳಾದ ರಸಿಕರ ಕರುಣಾಕಟಾಕ್ಷಂಗಳನಳ್ತಿಯಿಂದರ್ಥಿಸುತ್ತಿರುವೆನು.

ಇಂತು
ಕರ್ಣಾಟಕ ಸರಸ್ವತೀ ಕಿಂಕರನಾದ
ಸಿದ್ಧಾಂತಿ ಶಿವಶಂಕರ ಶಾಸ್ತ್ರಿ, ಮದರಾಸು

|| ಶ್ರೀ ಗಣೇಶಾಯನಮಃ ||

# ಕರ್ಣಾಟವಚನರಚನೆಯಾಗಿರುವ

# ಕಥಾಸರಿತ್ಸಾಗರವು

## ಮಂಗಳಾಚರಣಾದಿಕವು

ಕಂದ || ಮೆರೆವ ತೊಡೆಗಡರ್ದ ಗಿರಿಜೆಯ |
ಸುರುಚಿರದೃಕ್ಪಾಶಗಣದೆ ಸುಮಕೋದಂಡಂ ||
ಪರಿವೇಷ್ಟಿತಮೆನಿಸುವ ಶಂ |
ಕರನಾ ಕರಿಗೊರಲದೆಮಗೆ ನೀಡುಗೆ ಸೊಗಮಂ || ೧ ||

ಕಂದ || ಕರದಿಂ ಸಂಜೆಯನೃತ್ತದೊ |
ಳಿರದುಡುಗಳನುಡಿರ್ಚೆ ಚೀರೆತಾರಗೆಗಳನು ||
ದ್ಧುರಶೀಕೃತಿ ಶೀಕರದಿಂ |
ವಿರಚಿಸುವಂತೆಸೆವ ವಿಘ್ನಪತಿ ಪೊರೆಗೆಮ್ಮಂ || ೨ ||

ಕಂದ || ಸಕಲ ಪದಾರ್ಥ ಪ್ರದ್ಯೋ |
ತಕದೀಪಿಕೆ ಶಾರದಾಂಬೆಗಭಿವಂದಿಸುತಾ ||
ನಕಳಂಕ ಬೃಹತ್ಕಥೆಯೊಳ್ |
ಸುಕುತೂಹಲನದರಸಾರಸಂಗ್ರಹ ಮೊರೆವೆಂ || ೩ ||

ಕಂದ || ಸೋಮಕದೇವ ವಿರಚಿತ ಕ |
ಥಾಮೃತಮಂ ಕನ್ನಡಿಗರ ಕಿವಿಸವಿವನ್ನಂ ||
ಪ್ರೇಮಿಸಿ ಶಿವಶಂಕರನೆಂ |
ಕೋಮಲ ಕರ್ಣಾಟವಚನ ರಚನೆಗೆ ಪೂಣ್ದೆಂ || ೪ ||

ವೃತ್ತ || ವೃಥಾಭಿಮಾನಕ್ಕೆಡೆ ಸಾಗರಂಗಳ್ |
ಕಥಾಸರಿತ್ಸಾಗರಮೆನ್ನುವೀಗಳ್ ||
ವ್ಯಥಾನಿವೃತ್ತರ್ ಸರಸರ್ಸ್ವಮಗ್ನರ್ |
ಪೃಥಾರ್ಹ ನಾನೊರ್ವನೆ ನೋಡೆಸಂತರ್ || ೫ ||

ವ || ೧೨೪ ತರಂಗಂಗಳಿಂದೊಪ್ಪುವ ೧೮ ಲಂಬಕಂಗಳುಳ್ಳ ಈ ಸರಸ ಮನೋಹರವಾದ ಕಥಾಸರಿತ್ಸಾಗರದ ಸಂತಸಮಿಾವ ಕಥಾರಚನೆಯೆಂತೆಂದೊಡೆ :

## ಲಂಬಕಾನುಕ್ರಮಣಿಕೆ

ಕಥೆಗಳೆಂಬ ಸರಿತ್ತುಗಳೆಂದರೆ ಹೊಳೆಗಳಿಗೆ ಸಾಗರವೆಂದರೆ ಸಮುದ್ರದಂತೆ ಒಪ್ಪುವುದಾಗಿ ಕಥಾಸರಿತ್ಸಾಗರವೆಂಬ ಹೆಸರಿನಿಂದ ಸುಪ್ರಖ್ಯಾತಿ ಪಡೆದಿರುವ ಈ ಗ್ರಂಥದಲ್ಲಿ ಮೊದಲನೆಯ ಲಂಬಕವು ಕಥಾಪೀಠವೆಂಬುದು, ಎರಡನೆಯದು ಕಥಾಮುಖವು, ಮೂರನೆಯದು ಲಾವಣಕವು, ನಾಲ್ಕನೆಯದು ನರವಾಹನದತ್ತ ಜನನವು, ಐದನೆಯದು ಚತುರ್ದಾರಿಕಾಖ್ಯವು, ಆರನೆಯದು ಮದನಮಂಚುಕ, ಬಳಿಕ ರತ್ನಪ್ರಭೆ, ಆ ಮೇಲೆ ಸೂರ್ಯಪ್ರಭೆ, ತರುವಾಯ ಅಲಂಕಾರವತಿ, ಹತ್ತನೆಯದು ಶಕ್ತಿಯಶಾಲಂಬಕವು, ಹನ್ನೊಂದನೆಯದು ಭೇತಾಳಲಂಬಕವು, ಹನ್ನೆರಡನೆಯದು ಶಶಾಂಕವತೀಲಂಬಕವು, ಹದಿಮೂರನೆಯದು ಮದಿರಾವತಿ, ಬಳಿಕ ಪಂಚಲಂಬಕವು, ಹದಿನೈದನೆಯದು ಮಹಾಭಿಷೇಕ ಲಂಬಕವು, ಹದಿನಾರನೆಯದು ಸುರತಮಂಜರಿ, ಹದಿನೇಳನೆಯದು ಪದ್ಮಾವತೀ ಲಂಬಕವು, ಹದಿನೆಂಟನೆಯದು ವಿಷಮಶೀಲ ಲಂಬಕವು : ಎಂದಿಂತು ೧೮ ಲಂಬಕಂಗಳೆಂದರೆ ತರಂಗ ಲಹರಿಗಳುಂಟು. ಅವುಗಳಲ್ಲಿ :

೦

# ಕಥಾಪೀಠನೆಂಬ ಪ್ರಥಮಲಂಬಕದಲ್ಲಿ

## ೧ ನೆಯ ತರಂಗವು

( ಸೋಮದೇವಕವಿಯ ಪ್ರತಿಜ್ಞೆ : ಈ ನನ್ನ ಕಾವ್ಯವು ಮೂಲಗ್ರಂಥಕ್ಕೆ ಸರಿಯಾಗಿರುವುದು. ಈಷನ್ಮಾತ್ರನಾದರೂ ಮೂಲವನ್ನತಿಕ್ರಮಿಸಿ ಇರಲಾರದು. ಮೂಲದಲ್ಲಿ ವಿಸ್ತಾರವಾಗಿರುವುದೂ ಇಲ್ಲಿ ಸಂಗ್ರಹವಾಗಿರುವುದೂ ಭಾಷೆ ಬೇರೆಯಾಗಿರುವುದೂ ಇದಕ್ಕೂ ಮೂಲ ಗ್ರಂಥಕ್ಕೂ ಭೇದವೆನಿಸುವುದು. ಇಲ್ಲಿ ಯಥಾಶಕ್ತಿಕವಾಗಿ ಔಚಿತ್ಯವು ಪರಿಪೋಷಿಸಲ್ಪಟ್ಟದೆ. ಕಥಾರಸಕ್ಕೆ ಭಂಗವು ಬಾರದಂತೆ ಕಾವ್ಯರಸವು ತೋರಿಸಲ್ಪಟ್ಟಿದೆ. ಈ ನನ್ನ ಪ್ರಯತ್ನವು ನಾನಾಕಥಾಜಾಲವನ್ನು ಸುಲಭವಾಗಿ ನೆನಪಿನಲ್ಲಿಟ್ಟುಕೊಳ್ಳುವುದಕ್ಕಾಗಿಯೇ ಅಲ್ಲದೆ ನನ್ನ ಪಾಂಡಿತ್ಯ ಕೀರ್ತಿಗಾಗಿ ಅಲ್ಲವು. ) ಎಂಬ ಮಹಾಕವಿ ಸೋಮದೇವನ ಸೂಕ್ತಿಗಳ ಸದಾಶಯವನ್ನೇ ಅನುಸರಿಸಿ ಬರೆದಿರುವ ನುಡಿಗನ್ನಡದ ಈ ನುಡಿಗಳಲ್ಲಿ ಸವಿಗಂಡು ಸಂತರಾನಂದಿಸುವುದು.

### ಪಾರ್ವತೀ ಪರಮೇಶ್ವರ ಕಥಾಸಲ್ಲಾಪವು

ಇರುವುದಲ್ಲವೆ ಕಿನ್ನರಗಂಧರ್ವವಿದ್ಯಾಧರ ನಿವಾಸವೂ, ಗಿರೀಂದ್ರರಿಗೆಲ್ಲ ಚಕ್ರವರ್ತಿಯೂ ಆದ ಹಿಮವತ್ಪರ್ವತವು ಆ ಹಿಮವಂತನ ಮಹಿಮೆಯನ್ನು ಬೇರೆ ಹೊಗಳಬೇಕೇ ? ಎಲ್ಲಾ ಪರ್ವತಗಳೂ ಇರುವಲ್ಲಿ ತ್ರಿಲೋಕ ಜನನಿಯಾದ ಸರ್ವ ಮಂಗಳೆ ಆತನಿಗೇ ಮಗಳಾಗಿ ಹುಟ್ಟಿರುವುದರಿಂದಲೇನೇ ತಿಳಿದಿದೆ. ಅದರ ಉತ್ತರ ಶಿಖರವಾದ ಮಹಾಗಿರಿಯೇ ಕೈಲಾಸವೆಂದು ಕರೆಯಲ್ಪಡುವುದು. ಹಲವು ಯೋಜನಗಳು ಹರಡಿರುವ ಆ ಕೈಲಾಸವು 'ಮಂದರಾದ್ರಿ ಸಮುದ್ರವನ್ನು ಮಥಿಸಿ ಅಮೃತ ಪ್ರವಾಹದಿಂದಲೂ ಬಿಳುಪಾಗದೆ ಹೋಯಿತು' ಎಂದು ತನ್ನ ಕಾಂತಿಗಳಿಂದ ನಗುತ್ತಿರುವುದೆಂಬಂತೆ ಬಿಳುವೆಳಗುಗಳಿಂದ ತೊಳತೊಳಗಿ ಮೆರೆವುದು. ಅದರಲ್ಲಿ ಚರಾಚರ ಗುರುವಾದ ಪರಮೇಶ್ವರನು ಪಾರ್ವತಿಯೊಡನೆ ತನ್ನನ್ನು ಸಿದ್ಧವಿದ್ಯಾಧರಾದಿಗಳೂ, ಪ್ರಮಥಗಣಂಗಳೂ ಓಲಗಿಸುತ್ತಿರಲು ಲೀಲೆಯಿಂದೊಪ್ಪುತ್ತಿರುವನು. ಆವ ಮಾದೇವನ ಕೆಂಜಡೆ ಗಂಟಿನಲ್ಲಿ ಬಾಲಚಂದ್ರನು ಸಂಜೆಗೆಂಪಿನೊಡನೆ ಬೆಳಗುವ ಮೂಡಲ್ವೆಟ್ಟದ ಕೋಡುಗಲ್ಲಿನಲ್ಲಿ ಬೇಟದಸೊಗವನಾಂಪನೋ, ಆವ ಭಗವಂತನು ಅಂಧಕಾಸುರನ ಹೃದಯವನ್ನು ತ್ರಿಶೂಲದಿಂದ ಚುಚ್ಚಿ ಮೂಲೋಕಂಗಳ ಹೃದಯ ಶೂಲೆಯನ್ನು ನಿರ್ಮೂಲಿಸಿದನೋ, ಆವ ಪರಮಾತ್ಮನಿಗೆ ಸಾಷ್ಟಾಂಗ ನಮಸ್ಕಾರಂಗಳಂಗೆಯ್ದು ದೇವಾಸುರರು ತಮ್ಮ ಶಿರೋರತ್ನಗಳಲ್ಲಿ ಪ್ರಸಾದ ಪ್ರಾಪ್ತ್ಯಾರ್ಥ ಚಂದ್ರರಂತೆ ಆತನ ಚರಣನಖ ಪ್ರತಿಬಿಂಬಂಗಳು ಮಾರ್ಪೊಳೆಯಲು ಪ್ರಕಾಶಿಸುತ್ತಿರುವರೋ, ಆ

ಪರಮೇಶ್ವರನ ಪ್ರೇಯಸಿಮಣಿಯಾದ ಪಾರ್ವತೀದೇವಿ ಒಂದುದಿನವೇಕಾಂತದಲ್ಲಿ ಸಲುಗೆ ಮೆರೆದು ಸುಸ್ತುತಿಗಳಿಂದ ಸಂತೋಷಗೊಳಿಸಿದಳು. ಆದರಿಂದ ಮುದವಾಂತ ಚಂದ್ರಶೇಖರನು ಆಕೆಯನ್ನು ಅಂಕಕೇರಿಸಿಕೊಂಡು "ಪ್ರಾಣದರಸೀ ! ನಾನು ಮಾಡಲುಳ್ಳ ನಿನ್ನ ಇಷ್ಟವೇನುಂಟು ?" ಎಂದು ಕೇಳಿದನು. ಅದಕ್ಕೆ ಗಿರಿಜೆ "ನಾಥಾ ! ನನಗೆ ಪ್ರಸನ್ನನಾಗಿದ್ದರೆ ಮನೋಹರವಾದ ಒಂದಪೂರ್ವ ಕಥೆಯನುಸಿರೈ" ಎಂದಳು. ಆದಕ್ಕೆ ಶಂಕರನು "ಗೆಳತೀ ! ಲೋಕದಲ್ಲಿ ನೀನರಿಯದಿರುವುದು ನಡೆದುದೇನುಂಟು ? ನಡೆದಪುದೇನುಂಟು ? ನಡೆವುದೇನುಂಟು ?" ಎನಲು, ಜಗದಂಬೆ ಜಗದೀಶನನು ಬಲಾತ್ಕಾರಗೊಳಿಸಿದಳು. ಆಹಾ ! ಮಾನಿನಿಯರ ಮನಸ್ಸು ಪ್ರಿಯರ ಅನುರಾಗ ಪರೀಕ್ಷೆಯಲ್ಲಿ ಪರಾಯಣವಲ್ಲವೆ ?

ಆ ಬಳಿಕ ಆಕೆಯನ್ನು ರಂಜನೆಗೊಳಿಸಲೆಳಸಿ ಪರಮೇಶ್ವರನು ತನ್ನ ಮಹಿಮೆಯನ್ನು ಪ್ರಕಟಪಡಿಸುವುದಾದ ಈ ಚಿಕ್ಕ ಕಥೆಯನ್ನು ಹೇಳತೊಡಗಿದನು : ಪೂರ್ವದಲ್ಲಿ ನನ್ನ ನೋಡಲು ಬ್ರಹ್ಮನೂ ನಾರಾಯಣನೂ ತಿರೆಯಲ್ಲಿ ತಿರುಗುತ್ತ ಹಿಮವಂತನ ಪಾದಮೂಲವನ್ನು ಸೇರಿದರು. ಅಲ್ಲಿ ಇದಿರಾಗಿರುವ ಜ್ವಾಲಾಲಿಂಗವನ್ನೂ ಕಂಡರು. ಬಳಿಕದರ ತುದಿಮೊದಲರಿಯಲು ಒಬ್ಬನು ಮೇಲಕ್ಕೂ ಒಬ್ಬನು ಕೆಳಕ್ಕೂ ಹೋದರು. ಎಷ್ಟು ದೂರವು ಹೋದರೂ ಕಡೆಗಾಣಲಾರದೆ ಮರಳಿ ನನ್ನನ್ನು ತಪಸ್ಸುಗಳಿಂದ ಸಂತಸಗೊಳಿಸಿದರು. ನಾನೂ ಪ್ರತ್ಯಕ್ಷನಾಗಿ ವರಗಳನ್ನು ಕೇಳಿರೆಂದೆನು. ನನಗೆ ನೀನು ಮಗನಾಗೆಂದು ಬ್ರಹ್ಮನು ಬಯಸಿದನು. ಆತನು ತಾನೆ ಸರ್ವೋತ್ಕೃಷ್ಟನಾಗಬೇಕೆಂದು ಬಯಸಿದ ದೋಷದಿಂದ ಲೋಕದಲ್ಲಿ ಪೂಜಿಸಲ್ಪಡದವನಾದನು. ನಾರಾಯಣನು "ಭಗವಂತನೇ ! ನಿನಗೆ ಶುಶ್ರೂಷೆ ಮಾಡಿಕೊಂಡಿರುವೆನು" ಎಂದು ವರವ ಬೇಡಿದನು. ಆದರಿಂದಾತನು ನನ್ನ ಅರೆಮೈಯಾಗಿ ನಿನ್ನ ರೂಪದಿಂ ಜನ್ಮಿಸಿರುವನು. ನೀನೇ ಆ ನಾರಾಯಣನು, ಶಕ್ತಿ. ನಾನೇ ಶಕ್ತಿಮಂತನು. ಅಲ್ಲದೆ, ನೀನು ಪೂರ್ವಜನ್ಮದಲ್ಲಿಯೂ ನನಗೆ ಮಡದಿಯಾಗಿರುವೆ, ಎಂದು ಹೇಳಲಾ ಇಂದುಮೌಳಿಯು ಮಡದಿ "ನಿನಗೆ ನಾನೆಂತು ಜನ್ಮಾಂತರದಲ್ಲಿಯೂ ಜಾಯೆಯಾಗಿದ್ದೆನು?" ಎಂದು ಬೇಡಲು; ಶಂಕರನದಕ್ಕಿಂತೆಂದನು : ಎಲೆ ದೇವಿ ! ಹಿಂದೆ ದಕ್ಷಪ್ರಜಾಪತಿಗೆ ನೀನೂ ಇನ್ನೂ ಹಲವರು ಪುತ್ರಿಯರೂ ಪುಟ್ಟಿದಿರಿ. ಆತನು ನಿನ್ನನ್ನು ನನಗೂ, ಮಿಕ್ಕವರನ್ನು ಧರ್ಮಾದ್ಯರಿಗೂ ಕೊಟ್ಟನು. ಒಂದು ವೇಳೆಯಲ್ಲಿ ಆವನು ಯಜ್ಞವಾಚರಿಸುತ್ತ ಅದಕ್ಕಾಗಿ ಮಿಕ್ಕಳಿಯಂದಿರನ್ನು ಕರೆದು ನನ್ನನ್ನು ಕರೆಯಲಿಲ್ಲವು. ನೀನು ನಿನ್ನ ತಂದೆಯನ್ನು "ಅಪ್ಪಾ ! ನನ್ನ ಭರ್ತಾರನನ್ನೊಬ್ಬನನ್ನೇ ಕರೆಯದೆ ಬಿಟ್ಟೆಯೇಕೆ?" ಎಂದು ಕೇಳಿದೆ. "ನಿನ್ನ ಗಂಡನು ತಲೆಬುರುಡೆಗಳನ್ನು ತಳೆದಿರುವನು. ಯಜ್ಞಕ್ಕೆ ಹೇಗೆ ಕರೆವುದು ?" ಎಂದು ದಕ್ಷನುತ್ತರವಿತ್ತನು. ಆ ನುಡಿ ನಿನ್ನ ಕಿವಿಗೆ ನಂಜಿನ ಮುಳ್ಳಾಗಿ ನಡಲು, "ಇವನು ಪಾಪಿ, ಇವನಿಂದುದಿಸಿದ ಈ ದೇಹವು ನನಗೇಕೆ ?" ಎಂದು ಸಿಟ್ಟಿನಿಂದ ನನ್ನ ನಲ್ಮೆಯ ನೀರೆಯೇ ! ನೀನಾ ಒಡಲನ್ನು ಬಿಟ್ಟವಳಾದೆ. ನೆನಪು ಮಾಡಿಕೊಳ್ಳು ! ಬಳಿಕ ನಾನು ಹಿಮಾದ್ರಿ[illegible]ಗಿ

ಬಂದೆನು. ನಿನ್ನ ತಂದೆಯೂ ಅತಿಥಿಯಾದ ನನಗೆ ಶುಶ್ರೂಷೆಗೈಯಲು ನಿನ್ನನ್ನು ನಿಯಮಿಸಿದನಷ್ಟೆ ? ತಾರಕಾಸುರನನ್ನು ಸಂಹರಿಸಲುಳ್ಳ ಮಗನೊಬ್ಬನು ನನಗಾಗ ಬೇಕೆಂದು ಮನ್ಮಥನು ದೇವತೆಗಳ ಪ್ರೇರಣೆಯಿಂದ ಅಲ್ಲಿಗೆ ಬಂದು, ನೀನು ನನ್ನ ಬಳಿಯಲ್ಲಿರಲು, ಸಮಯವಿದೆಯೆಂದು ನನ್ನ ಮೇಲೆ ಸರಳ ಬಿಟ್ಟು ನನ್ನ ಹಣೆಗಣ್ಣೋಟದಿಂದ ಬೂದಿಯಾಗಿ ಹೋದನು. ನೀರೆಯೇ ! ನೀನು ಧೀರೆಯಾಗಿ ಕ್ರೂರತಪದಿಂದ ನನ್ನನ್ನು ಕೊಂಡವಳಾದೆ. ಹೀಗೆ ನೀನು ಹಿಂದೆಯೂ ನನಗೆ ಮಡದಿ. ಇನ್ನೇನೋ ತಿಳಿವುದೆಂದು ಪರಮೇಶ್ವರನು ಸುಮ್ಮನಾದನು.

## ಪುಷ್ಪದಂತ ಮಾಲ್ಯವಂತರೆಂಬ ಪ್ರಮಥರು ಮರ್ತ್ಯರಾಗುವಿಕೆ

ಒಡನೆಯೂ ಮೃಡಾಣೀದೇವಿ ಕೋಪಾಕುಲೆಯಾಗಿ "ನೀನು ಮೋಸಗಾರನು, ಬೇಡಿಕೊಂಡರೂ ಮನೋಹರವಾದ ಕಥೆಯನೊರೆಯದಿರುವೆ. ನೀನು ಅನ್ಯಾಸಕ್ತ ಹೃದಯನು. ಗಂಗೆಯನ್ನು ನಡುನೆತ್ತಿಗೆ ಹತ್ತಿಸಿಕೊಳ್ಳುವುದೂ ಸಂಜೆಗೆ ಮಣಿಮಣಿಮಾಡುವುದೂ ನನಗೆ ತಿಳಿಯದೇನು ? ಎಂದು ಕಸರಿದಳು. ಮೃಡನಾಮಡದಿಗೇಳಿ ನಲ್ನುಡಿ ನುಡಿದು ದಿವ್ಯವಾದ ಕಥೆಯನ್ನು ಹೇಳಲು ಸಮ್ಮತಿಸಿದನು. ಆಕೆಗೆ ಮುನಿಸು ಬಿಟ್ಟಿತು. ಬಳಿಕ ನಂದೀಶ್ವರನು ಒಳಗಡೆಗೊಬ್ಬರನ್ನೂ ಬರಗೊಳಿಸಕೂಡದೆಂಬ ದೇವಿಯ ಅಪ್ಪಣೆಯಂತೆ ಬಾಕಲಲ್ಲಿ ಕಾದಿರುವಲ್ಲಿ ಪರಮೇಶ್ವರನು— "ಪ್ರಿಯರಮಣೀ ! ದೇವತೆಗಳು ಕೇವಲ ಸುಖಿಗಳು, ಮನುಷ್ಯರು ನಿತ್ಯದುಃಖಿತರು; ದೇವಮನುಷ್ಯರ ಮಿಶ್ರಚರಿತ್ರವು ಪರಭಾಗಲಾಭದಿಂದ ಮನೋಹರವಲ್ಲವೆ ? ಆದರಿಂದ ವಿದ್ಯಾಧರರ ಚರಿತ್ರವನ್ನು ನಿನಗೆ ನಿರೂಪಿಸುವೆನು" ಎಂದು ಹೇಳುತ್ತಿರುವ ವೇಳೆಗೆ, ಪುಷ್ಪದಂತನೆಂಬ ಗಣೋತ್ತಮನು ಸಾಂಬಮೂರ್ತಿಯ ಬಳಿಯಲ್ಲಿ ಬಹಳ ಸಲುಗೆಯುಳ್ಳವನಾದುದರಿಂದ ಸೇವಾರ್ಥನಾಗಿ ಬಂದನು. ನಂದಿಯಾತನನ್ನು ಬಾಕಲಲ್ಲಿ ತಡೆದನು. ಆಗಳವನು "ಓಹೋ ! ನಿಷ್ಕಾರಣವಾಗಿ ನನಗೂ ಈಗಳೇನು ಆತಂಕವಾಗಿದೆ ?" ಎಂದು ಕುತೂಹಲಗೊಂಡು ಒಡನೆಯೇ ಯೋಗ ಮಾಯಾಶಕ್ತಿಯಿಂದ ಅದೃಶ್ಯನಾಗಿ ಅವರ ಸನ್ನಿಧಿಯನ್ನು ಪ್ರವೇಶಿಸಿದನು. ಹೀಗೆ ಒಳಹೊಕ್ಕು ಮಹೇಶ್ವರನು ಬಣ್ಣಿಸುತ್ತಿದ್ದ ಏಳು ಮಂದಿ ವಿದ್ಯಾಧರರ ಅತ್ಯಾಶ್ಚರ್ಯಕರ ಚರಿತ್ರಗಳನ್ನೂ ಕೇಳಿದನು. ಕೇಳಿ ಹೋಗಿ ತನ್ನ ಮಡದಿ ಜಯೆಯೆಂಬವಳಿಗೆ ಆ ಕಥೆಗಳನ್ನು ಹೇಳಿದನು. ಅಹಹಾ ! ! ಹಣವನ್ನೂ ರಹಸ್ಯವನ್ನೂ ಹೆಂಗಳಲ್ಲಿ ಬಚ್ಚಿಡಲು ಶಕ್ತನಾವನು ? (ಹೆಂಗಸರ ಬಾಯಲ್ಲಿ ಮಾತು ನಿಲ್ಲದು. ಗಂಡಸರ ಬಾಯಲ್ಲಿ ಕೂಸು ನಿಲ್ಲದು.) ಎಂಬ ಗಾದೆಗೆ ಸರಿಯಾಗಿ ಜಯೆಯೂ ಅಚ್ಚರಿಗಡಲಲ್ಲಿ ಮುಳುಗಿದವಳಾದುದರಿಂದ ಒಡನೆಯೇ ಆ ಕಥೆಗಳನ್ನು ಪಾರ್ವತಿಯ ಮುಂದೆ ಬಣ್ಣಿಸಿದಳು. ಬಳಿಕ ಗಿರಿಜಾತೆ "ಅಪೂರ್ವ ಕಥೆ ಹೇಳದೆಹೋದೆ, ಇದೋ ನಿನ್ನ ಕಥೆಗಳು ಜಯೆಗೂ ತಿಳಿದಿದೆ" ಎಂದು ಶಂಕರನ ಮೇಲೆ ಮುನಿಸುಗೊಂಡಳು. ಆಗಳೀಶ್ವರನು ಯೋಗದೃಷ್ಟಿಯಿಂದ ಎಲ್ಲಾ ಬಲ್ಲವನಾಗಿ ಗೌರಿಯೊಡನೆ "ದೇವಿಯೇ ! ನಮ್ಮ ಬಳಿಗೆ

ಯೋಗಶಕ್ತಿಯಿಂದ ಅದೃಶ್ಯನಾಗಿ ಪುಷ್ಪದಂತನು ಪ್ರವೇಶಿಸಿ ಈ ಕಥೆಗಳನ್ನು ಕೇಳಿದನು. ಕೇಳಿ ಹೋಗಿ ಜಯೆಗೂ ಹೇಳಿದನು". ಆ ನುಡಿ ಕಿವಿಗೆ ಬಂದೊಡನೆಯೇ ದೇವಿ ಅತ್ಯಂತಾಗ್ರಹಂಗೊಂಡು ಪುಷ್ಪದಂತನನ್ನು ಕರೆಯಿಸಿ, ಹೆದರಿ ಗಡಗಡನೆ ನಡುಗುತ್ತಿರುವ ಅವನನ್ನು "ಎಲೈ, ಅವಿನೀತನೇ ! ನೀನು ಮರ್ತ್ಯನಾಗು ಹೋಗು" ಎಂದು ಶಪಿಸಿದಳು. ಪುಷ್ಪದಂತನನ್ನು ಕ್ಷಮಿಸಿ ಸಲಹಬೇಕೆಂದು ಅವನ ಪಕ್ಷನಾಗಿ ಬೇಡಿಕೊಳ್ಳುವ ಮಾಲ್ಯವಂತನೆಂಬ ಪ್ರಮಥನನ್ನೂ ನೀನೂ ಹಾಗೆಯೇ ಆಗುಹೋಗೆಂದು ಶಪಿಸಿದಳು. ಬಳಿಕ ಅವರಿಬ್ಬರೂ ಜಯೆಯೊಡನೆ ಮೃಡಾಣಿಯ ಅಡಿದಾವರೆಗಳಲ್ಲಿ ಬಿದ್ದು ಮೊರೆಯಿಟ್ಟುಕೊಳ್ಳಲು, ಕೋಪ ಶಾಂತಿಗೊಂಡ ಜಗದಂಬೆ ಇಂತು ಶಾಪಮುಕ್ತಿಯನನುಗ್ರಹಿಸಿದಳು : ಸುಪ್ರತೀಕನೆಂಬ ಯಕ್ಷನು ಕುಬೇರಶಾಪದಿಂದ ವಿಂಧ್ಯಾರಣ್ಯದಲ್ಲಿ ಕಾಣಭೂತಿಯೆಂಬ ಹೆಸರಿನ ಪಿಶಾಚನಾಗಿರುವನು. ಎಲೈ ಪುಷ್ಪದಂತನೇ ! ನೀನವನನ್ನು ನೋಡಿದೊಡನೆಯೇ ನಿನಗೆ ಪೂರ್ವಜನ್ಮಸ್ಮೃತಿಯುಂಟಾಗುವುದು. ಆಗಳವನಿಗೆ ನೀನೀಕಥೆ ಹೇಳು. ಹೇಳಿದೊಡನೆಯೇ ನಿನಗೆ ಶಾಪಮುಕ್ತಿಯಾಗುವುದು. ಕಾಣಭೂತಿಯಿಂದ ಇವನ್ನು ಮಾಲ್ಯವಂತನು ಕೇಳಿದಾಗಲೇ ಕಾಣಭೂತಿಗೆ ಶಾಪಮುಕ್ತಿಯಾಗುವುದು. ಭೂಲೋಕದಲ್ಲಿ ಇದನ್ನು ಪ್ರಸಿದ್ಧಿಗೊಳಿಸಿದುದರಿಂದ ಮಾಲ್ಯವಂತನು ಶಾಪಮುಕ್ತನಾಗುವನು, ಎಂದಿಂತು ಶೈಲಪುತ್ರಿಯಪ್ಪಣೆಗುಡಲು, ಆ ಗಣೋತ್ತಮರಿಬ್ಬರೂ ತತ್‌ಕ್ಷಣದಲ್ಲಿ ಬಳ್ಳಿಮಿಂಚುಗಳ ಬಳಗವೆಂಬಂತೆ ಮೆರೆದು ಮರೆಯಾದರು.

ಕೆಲವು ಕಾಲವಾದ ಮೇಲೆ ಒಂದು ದಿನದಲ್ಲಿ ಪಾರ್ವತಿ ಪರಮೇಶ್ವರನೊಡನೆ "ನಾಥಾ ! ನನ್ನಿಂದ ಶಪ್ತರಾದಾಪ್ರಮಥವರ್ಯರು ಭುವಿಯೊಳೆಲ್ಲಿ ಹುಟ್ಟಿರುವರೋ ? ಹೇಳ ! " ಎಂದು ಕರುಣೆಯಿಂದ ಪ್ರಸ್ತಾವಿಸಲು; ಆ ಶಂಭುಸ್ವಾಮಿ "ಪ್ರಿಯೇ ! ಪೊಡವಿಯಲ್ಲಿ ಕೌಶಾಂಬಿಯೆಂದು ಒಂದು ಮಹಾಪತ್ತನವಿರುವುದು; ಅಲ್ಲಿ ಪುಷ್ಪದಂತನು ವರರುಚಿಯೆಂಬ ನಾಮದಿಂದ ಜನಿಸಿರುವನು. ಮಾಲ್ಯವಂತನು ಸುಪ್ರತಿಷ್ಠಿತವೆಂಬ ಪಟ್ಟಣದಲ್ಲಿ ಗುಣಾಢ್ಯನೆಂಬ ಹೆಸರಿನಿಂದ ಜನ್ಮವೆತ್ತಿರುವನು. ಅವರ ವೃತ್ತಾಂತವಿದು" ಎಂದು ಹೇಳಿ, ತನ್ನನ್ನೇ ಅನುಸರಿಸಿದನರಾದ ಸದ್ಭೃತ್ಯರನ್ನು ಕ್ಲೇಶಗೊಳಿಸಿದ ಕಾರಣದಿಂದ ಕಳವಳಗೊಂಡಿರುವ ಕಾಂತಾಮಣಿಯಾದ ಕಲ್ಯಾಣಿಯನ್ನು ಕೈಲಾಸಸಾನುಗಳಲ್ಲಿ ಲೀಲಾವಿಲಾಸಗಳಿಂದ ಕಲ್ಪಲತಾಗೃಹಂಗಳೊಳಗೆ ಕಳೆಗೊಳಿಸಿ ಕಂಗೊಳಿಸುತ್ತಿದ್ದನು.

ನೀತಿ : ಕಂದ || ತನ್ನೊಡೆಯರೊಳವಿನೀತತೆ |
ಚನ್ನೆನಿಸದೆನಿತ್ತುಶಕ್ತಿ ತನಗಿರ್ದೊಡೆಯುಂ ||
ನನ್ನಿಯಿದೆಂಬುದನರಿವುದು |
ಸನ್ನುತನಾಪುಷ್ಪದಂತನಿಳೆಗಿಳಿದುದರಿಂ || ೧ ||

೦

# ೨ ನೆಯ ತರಂಗವು

ಬಳಿಕಾ ಪುಷ್ಪದಂತನು ಭೂಮಿಯಲ್ಲಿ ಮಾನವದೇಹವಾಂತು ಹುಟ್ಟಿ ವರರುಚಿಯೆಂದು ಪೆಸರ್ಗೊಂಡು ಕಾತ್ಯಾಯನನೆಂದು ಪ್ರಸಿದ್ಧಿವಡೆದು, ಸಕಲ ವಿದ್ಯಾಪಾರಂಗತನಾಗಿ ನಂದನಿಗೆ ಮಂತ್ರಿಯೂ ಆಗಿ, ಒಂದಾನೊಂದು ಸಮಯದಲ್ಲಿ ಅತ್ಯಂತ ಖೇದಗೊಂಡು, ವಿಂಧ್ಯವಾಸಿನೀದೇವಿಯನ್ನು ದರ್ಶಿಸಲು ವಿಂಧ್ಯಾರಣ್ಯಕ್ಕೆ ಬಂದು ತಪಸ್ಸಿನಿಂದ ದೇವಿಯನಾರಾಧಿಸಿದನು. ಆಗಳಾದೇವಿಯಾತನಿಗೆ ಕನಸಿನಲ್ಲಿ ಪ್ರತ್ಯಕ್ಷನಾಗಿ ಅಲ್ಲಿಗೆ ಸಮೀಪದಲ್ಲಿಯೇ ವಿಂಧ್ಯಾರಣ್ಯದಲ್ಲಿರುವ ಕಾಣಭೂತಿಯನ್ನು ಹೋಗಿ ನೋಡೆಂದು ಆಜ್ಞಾಪಿಸಿದಳು. ಬಳಿಕ ವರರುಚಿ ಎಲ್ಲಿಯೂ ನೀರಿಲ್ಲದೆ ಒಣಗಿದ ಗಿಡುಗಳೂ ಪುಲಿಕರಡಿ ಮೊದಲಾದ ದುರುಳ ಮೃಗಗಳೂ ತುಂಬಿರುವ ಆ ಬಿಂಜೆಯಡವಿಯಲ್ಲಿ ಪ್ರವೇಶಿಸಿ ಅಲ್ಲಿಯೊಂದು ಕಡೆಯಲ್ಲಿ ಅತ್ಯುನ್ನತವಾದ ವಟವಿಟಪಿಯನ್ನು ಕಂಡನು. ಅದರ ಕೆಳಗೆ ಪಿಶಾಚಶತಪರಿವೃತನೂ ಕೋಟೆಯ ಗೋಡೆಯಂತೆ ಮಹೋನ್ನತಾಕಾರನೂ ಆದ ಕಾಣಭೂತಿಯನ್ನೂ ಕಂಡನು. ಈತನನ್ನು ನೋಡಿದೊಡನೆಯೇ ಕಾಣಭೂತಿ ಎದ್ದಿದಿರಿಗೆ ಬಂದು ಅಡಿಗೆ ಪೊಡಮಟ್ಟು ಪೀಠದಲ್ಲಿ ಕುಳ್ಳಿರಿಸಿದನು. ಸುಖಾಸೀನನಾದ ವರರುಚಿ ಕಾಣಭೂತಿಯನ್ನು "ಎಲೈ, ನಿನ್ನ ನಡೆವಳಿ ನೋಡಿದರೆ ಉತ್ತಮವಾಗಿದೆ. ನಿನಗೇಕೆ ಪಿಶಾಚತ್ವವು ಸಂಭವಿಸಿತು ? ನುಡಿಯು !" ಎಂದು ಬೆಸಗೊಂಡನು. ಆತನ ಕೇಳಿಗೆ ಸಂತಸವಾಂತು ಕಾಣಭೂತಿ ಇಂತೆಂದನು :

## ಕಾಣಭೂತಿ ವೃತ್ತಾಂತವು

ಎಲೈ, ಮಹಾತ್ಮನೇ ! ನನಗೆ ಸ್ವಯಂಪ್ರತಿಭೆಯಿಲ್ಲ, ಇನ್ನೇನೆಂದರೆ ಉಜ್ಜಯಿನಿಯಲ್ಲಿ ಸ್ಮಶಾನದೊಳಗೆ ರುದ್ರದೇವನಿಂದ ನಾನು ಕೇಳಿದ ಮಾತನ್ನು ಹೇಳುವೆನು ಕೇಳು ! "ಮನ್ನಾಥಾ ! ನಿನಗೆ ಈ ಕಪಾಲಗಳಲ್ಲಿಯೂ ಈ ಮಸಣದಲ್ಲಿಯೂ ಪ್ರೀತಿಯೇಕೆ ?" ಎಂದು ರುದ್ರಾಣಿ ಕೇಳಲು, ರುದ್ರನಿಂತೆಂದನು : "ಪೂರ್ವದಲ್ಲಿ ಕಲ್ಪಾಂತದೊಳಗೆ ಜಗತ್ತೆಲ್ಲ ಜಲಮಯವಾಯಿತು. ಆಗ ನಾನು ನನ್ನ ತೊಡೆ ಸೀಳಿ ಒಂದು ರಕ್ತಬಿಂದುವನ್ನು ಕೆಳಗೆ ಚೆಲ್ಲಿದೆನು. ಅದು ನೀರಲ್ಲಿ ಬಿದ್ದು ಮೊಟ್ಟೆಯಾಯಿತು. ಅದು ಎರಡು ಹೋಳಾಗಿ ಒಡೆಯಲು ಅಲ್ಲಿಂದ ಪುರುಷನೊಬ್ಬನುದಿಸಿದನು. ಆ ಮೇಲೆ ನಾನು ಸೃಷ್ಟಿಗಾಗಿ ಪ್ರಕೃತಿಯನ್ನು ತ್ಯಜಿಸಿದೆನು. ಆ ಪ್ರಕೃತಿ ಪುರುಷರು ಪ್ರಜಾಪತಿಗಳನ್ನು ಸೃಷ್ಟಿಸಿದರು. ಅವರು ಪ್ರಜೆಗಳನ್ನು ಹುಟ್ಟಿಸಿದರು. ಆದುದರಿಂದ ಆ ಪುರುಷನು ಲೋಕದಲ್ಲಿ ಪಿತಾಮಹನೆಂದರೆ ತಂದೆಯ ತಂದೆಯೆನಿಸಿದನು. ಆದರೆ ಆತನು ಚರಾಚರ ಪ್ರಪಂಚವನ್ನು ಸಮಗ್ರವಾಗಿ ಸೃಜಿಸಿ ಗರ್ವಪಟ್ಟನು. ಆದರಿಂದ ಅವನ ತಲೆಯನ್ನು ನಾನು ಕತ್ತರಿಸಿದೆನು. ಬಳಿಕ ಪಶ್ಚಾತ್ತಾಪವಾಗಿ ಮಹಾವ್ರತವನವಲಂಬಿಸಿ ಕಪಾಲವನ್ನು ಕೈಕೊಂಡು ಸ್ಮಶಾನ

ದಲ್ಲಿ ಸಂಚರಿಸುತ್ತಿರುವೆನು. ಈಗ ಹೇಳಿದ ಮೊಟ್ಟೆಯ ಎರಡು ಹೋಳುಗಳೇ ಭೂಮ್ಯಾಕಾಶಂಗಳಾಗಿವೆ. ಆದುದರಿಂದ ಜಗತ್ತು ಈ ಕಪಾಲಸ್ವರೂಪವಾಗಿ ನನ್ನ ಕೈಯಲ್ಲಿರುವುದು" ಎಂದು ಮೃಡನು ನುಡಿಯುತಲೂ, ನಾನು ಇನ್ನೂ ಏನು ಮಾತಾಡಿಕೊಳ್ಳುವರೋ ಕೇಳುವೆನೆಂದು ಕುತೂಹಲಪಡುತ್ತಿದ್ದೆನು. ಆಗಳಾ ಗಿರಿಜೆ "ಪುಷ್ಪದಂತನು ಮರಳಿ ನಮ್ಮ ಬಳಿಗೆ ಎಂದು ಬರುವನು?" ಎಂದು ಕೇಳಿದಳು. ಅದಕ್ಕೆ ಶಿವನು ನನ್ನನ್ನು ತೋರಿಸಿ "ಇವನು ಯಕ್ಷನು, ಕುಬೇರನ ಕಿಂಕರನು; ಇವನು ಸ್ಥೂಲಶಿರನೆಂಬ ರಕ್ಕಸನೊಡನೆ ಸ್ನೇಹವಾಗಿ ನೆರೆದನು. ಆ ಪಾಪಿಗಿವನು ಮಿತ್ರನಾಗಿರುವುದನ್ನು ಕುಬೇರನರಿತು ವಿಂಧ್ಯಾಟವಿಯಲ್ಲಿ ಪಿಶಾಚವಾಗಿರೆಂದು ಇವನಿಗೆ ಶಾಪವಿತ್ತನು." ಇವನಣ್ಣನು ದೀರ್ಘಜಂಘನೆಂಬನು ಕುಬೇರನಡಿಗಳಲ್ಲಿ ಬಿದ್ದು ಬೇಡಿಕೊಳ್ಳಲು, ಕುಬೇರನು— "ಶಾಪಗ್ರಸ್ತನಾಗಿ ಭೂಮಿಗವತರಿಸಿದ ಪುಷ್ಪದಂತನಿಂದ ಮಹಾಕಥೆಯ ಕೇಳಿ, ಶಾಪದಿಂದಲೇ ಮನುಷತ್ವವನ್ನು ಪಡೆದಿರುವ ಮಾಲ್ಯವಂತನಿಗೆ ಆ ಕಥೆಯನ್ನು ಹೇಳಿ, ಆ ಪ್ರಮಥರೊಡನೆ ಇವನೂ ಶಾಪಮುಕ್ತನಾಗುವನು" ಎಂದು ಶಾಪಾವಸಾನವನ್ನು ವಿಧಿಸಿದನು. ನೀನೂ ಹಾಗೆಯೇ ಪುಷ್ಪದಂತನಿಗೆ ಈ ಶಾಪವನ್ನು ಹೇಳಿರುವೆ, ನೆನಪು ಮಾಡಿಕೊಳ್ಳು, ಗೌರೀ!" ಎಂದನು. ಸಾಂಬಮೂರ್ತಿಯ ಈ ಮಾತನ್ನು ಕೇಳಿ ನಾನು ಪರಮಾನಂದಭರಿತನಾಗಿ ಇಲ್ಲಿಗೆ ಬಂದೆನು. ಹೀಗೆ ನನ್ನ ಶಾಪವು ಪುಷ್ಪದಂತನ ದರ್ಶನವಾಗುವವರೆಗೆ ಇರುವುದು, ಎಂದಿಂತು ಕಾಣಭೂತಿ ಹೇಳಲು, ವರರುಚಿ ತನ್ನ ಪೂರ್ವಜನ್ಮವನ್ನು ಸ್ಮರಿಸಿಕೊಂಡು ನಿದ್ರೆಯಿಂದೆಚ್ಚರಾದವನಂತೆ ಚೇತರಿಸಿಕೊಂಡು "ನಾನೇ ಆ ಪುಷ್ಪದಂತನು. ನನ್ನಿಂದ ಆ ಮಹಾಕಥೆಯನ್ನು ಕೇಳು" ಎಂದು ಲಕ್ಷಾಂತರ ಪರಿಮಿತಿಯುಳ್ಳ ಏಳು ಮಹಾ ಕಥೆಗಳನ್ನು ಹೇಳಿದನು. ಕಾಣಭೂತಿ ಮಹಾಶ್ಚರ್ಯಭರಿತನಾಗಿ "ಎಲೈ, ಮಹಾತ್ಮನೇ! ನೀನು ಸಾಕ್ಷಾದ್ರುದ್ರಾವತಾರವೇ ಸರಿ. ಮತ್ತೆ ಯಾರು ನಿನ್ನಂತೆ ಇಂತಹ ಮಹಾದ್ಭುತ ಕಥೆಗಳನ್ನು ಅರಿಯಬಲ್ಲರು? ಶಾಪವು ನಿನ್ನನುಗ್ರಹದಿಂದ ನನ್ನ ಮೈಬಿಟ್ಟಿತೆಂದು ತೋರುತ್ತಿದೆ. ನನ್ನಂತಹವನಿಗೆ ಹೇಳಬಾರದುದಾಗದಿದ್ದರೆ ನಿನ್ನ ವೃತ್ತಾಂತವನ್ನೂ ಜನ್ಮವನ್ನೂ ಮೊದಲು ಹೇಳಿ ನನ್ನನ್ನು ಪವಿತ್ರನನ್ನಾಗಿಸೈ, ಮಹಾನುಭಾವನೇ!" ಎಂದು ಸಂಪ್ರಾರ್ಥಿಸಿದನು.

## ವರರುಚಿಯ ಚರಿತ್ರವು

ಬಳಿಕ ವರರುಚಿ ಇಂತು ಸ್ವಜನ್ಮಕಥಾವೃತ್ತಾಂತವನ್ನು ಮಹಾ ವಿನಯದಿಂದ ಕಾಲ್ಗೆರಗಿ ಬೇಡಿಕೊಳ್ಳುವ ಕಾಣಭೂತಿಗೆ ಹೇಳತೊಡಗಿದನು: ಕೌಶಾಂಬೀ ನಗರದಲ್ಲಿ ಸೋಮದತ್ತನು ಅಗ್ನಿಶಿಖನು ಎಂಬ ಹೆಸರುಗಳಿಂದ ಪ್ರಸಿದ್ಧನಾದ ಬ್ರಾಹ್ಮಣ ಶ್ರೇಷ್ಠನೊಬ್ಬನಿದ್ದನು. ಆತನಿಗೆ ವಸುದತ್ತೆ ಎಂಬ ಹೆಂಡತಿಯಿದ್ದಳು. ಆಕೆ ಹಿಂದೆಯೊಂದು ಋಷಿಕನ್ಯೆ ಶಾಪದಿಂದ ಈ ಜನ್ಮವೆತ್ತಿದಳು. ನಾನೂ ಶಾಪದಿಂದ ಈ ಜನ್ಮದಲ್ಲಿ ಅವರ ಮಗನಾದೆನು. ನನಗೆ ಅತಿ ಬಾಲ್ಯದಲ್ಲಿಯೇ ನನ್ನ ತಂದೆ ಪರಲೋಕಗತನಾದನು, ನನ್ನ

ತಾಯಿಯೇ ಬಹಳ ಕಷ್ಟಪಟ್ಟು ನನ್ನನ್ನು ಬೆಳಸುತ್ತಿದ್ದಳು. ಒಂದು ದಿನವಿಬ್ಬರು ಬ್ರಾಹ್ಮಣರು ದೂರ ಪ್ರಯಾಣ ನಡೆದು ಧೂಳಿ ಮುಚ್ಚಿದ ವೇಷಗಳೊಡನೆ ನಮ್ಮ ಮನೆಗೆ ಆ ದಿನವಿದ್ದು ಹೋಗಲು ಬಂದವರಾದರು. ಅವರು ಬಂದು ನಿಲ್ಲುತಲೂ ಮದ್ದಳೆಯ ಶಬ್ದವು ಕೇಳಿಸಿತು. ಆಗ ನನ್ನ ತಾಯಿ ನನ್ನ ತಂದೆಯನ್ನು ಸ್ಮರಿಸಿಕೊಂಡು ಗದ್ಗದ ಸ್ವರದಿಂದ ನನ್ನೊಡನೆ "ಅಪ್ಪಾ! ನಿನ್ನ ಜನಕನ ಮಿತ್ರನು ನಂದನೆಂಬನು ನಟನು ನೃತ್ಯವೆಸಗುವಂತಿದೆ"ಯೆಂದಳು. ನಾನು "ತಾಯೇ! ನನ್ನನ್ನು ಕಳುಹಿಸು, ನೋಡಿ ಬರುವೆನು. ಬಂದು ಹಾಡಿನೊಡನಾತನ ಆಟವನ್ನೆಲ್ಲ ನಿನಗೆ ತೋರಿಸುವೆನು" ಎಂದು ಕೇಳಿಕೊಂಡೆನು. ನನ್ನ ಈ ನುಡಿಗೇಳಿ ಆ ಬ್ರಾಹ್ಮಣರಿಬ್ಬರೂ ಅಚ್ಚರಿಗೊಳ್ಳತೊಡಗಿದರು. ನಮ್ಮ ತಾಯಿ ಅವರೊಡನೆ "ಅಯ್ಯಾ, ಈ ನುಡಿ ನಿಕ್ಕುವವೇ ಸರಿ; ಈ ಮಗು ಒಂದು ಬಾರಿ ಕೇಳಿದ ಮಾತ್ರದಲ್ಲಿ ಸರ್ವವನ್ನೂ ಗ್ರಹಿಸಿಕೊಳ್ಳಲಾರಪನು" ಎಂದಳು. ಬಳಿಕವರು ಪರೀಕ್ಷಾರ್ಥವಾಗಿ ನನ್ನ ಮುಂದೆ ಪ್ರಾತಿಶಾಖ್ಯೆಯನೋದಿದರು. ನಾನೂ ಆ ಗ್ರಂಥವನ್ನು ಸಮಗ್ರವಾಗಿ ತತ್ ಕ್ಷಣವೇ ಒಪ್ಪಿಸಿಬಿಟ್ಟೆನು. ಬಳಿಕ ಅವರೊಡನೆ ಹೋಗಿ ನಾಟ್ಯವೆಲ್ಲ ನೋಡಿ ನನ್ನ ತಾಯ ಮುಂದೆ ಸಮಸ್ತವನ್ನೂ ಆಡಿ ಹಾಡಿ ತೋರಿಸಿದೆನು.

## ವ್ಯಾಡೀಂದ್ರದತ್ತರ ವೃತ್ತಾಂತವು

ಅವರಲ್ಲೊಬ್ಬನು ನನ್ನನ್ನು ಶ್ರುತಧರನನ್ನಾಗಿ ನಿಶ್ಚಯಿಸಿ ನನ್ನ ಜನನಿಗೆ ತುಳಿಲ್ಗೆಯ್ದು ಇಂತು ಬಿನ್ನವಿಸಿದನು: ಎಲೌ, ತಾಯೇ, ವೇತಸನೆಂಬ ಪಟ್ಟಣದಲ್ಲಿ ದೇವಸ್ವಾಮಿ ಕರಂಭಕನು ಎಂಬಿಬ್ಬರು ಅಣ್ಣತಮ್ಮಂದಿರು ಅನ್ಯೋನ್ಯಾತಿಸ್ನೇಹವಂತರಾಗಿದ್ದರು. ಅವರಲ್ಲಿ ಒಬ್ಬಾತನ ಮಗನು ಈ ಇಂದ್ರದತ್ತನೆಂಬವನು. ನಾನೆರಡನೆಯಾತನ ಮಗನು; ನನ್ನ ಹೆಸರು ವ್ಯಾಡಿ. ನಾನು ಹುಟ್ಟುತಲೂ ನನ್ನ ತಂದೆ ಮೃತನಾದನು; ಆ ದುಃಖದಿಂದ ಇಂದ್ರದತ್ತನ ತಂದೆ ಮಹಾಪ್ರಸ್ಥಾನ ಯಾತ್ರೆ ಹೊರಟನು. ಆ ದುಃಖದಿಂದ ನಮ್ಮ ತಾಯಿಯರು ದೇಹತ್ಯಾಗ ಮಾಡಿದರು. ಬಳಿಕ ನಾವು ಧನಿಕರಾದರೂ ದಿಕ್ಕಿಲ್ಲದವರಾಗಿ ವಿದ್ಯಾರ್ಥಿಗಳಾಗಿ ತಪಸ್ಸಿನಿಂದ ಕುಮಾರಸ್ವಾಮಿಯನಾರಾಧಿಸಲು ಹೊರಟು ಹೋದೆವು. ತಪೋನಿಷ್ಠರಾಗಿದ್ದ ನಮಗೆ ಸ್ವಪ್ನದಲ್ಲಿ ಪ್ರತ್ಯಕ್ಷವಾಗಿ "ನಂದರಾಜನ ರಾಜಧಾನಿಯಾದ ಪಾಟಲೀಪುತ್ರದಲ್ಲಿ ವರ್ಷನೆಂಬ ವಿಪ್ರನಿರುವನು. ಆತನಿಂದ ನೀವು ಸಕಲ ವಿದ್ಯೆಗಳನ್ನೂ ಪಡೆವಿರಿ. ಅಲ್ಲಿಗೆ ನಡೆಯಿರಿ" ಎಂದು ಅನುಗ್ರಹಿಸಿದನು. ಅಲ್ಲಿಂದ ನಾವು ಪಾಟಲೀಪುರಕ್ಕೆ ಬಂದು ವಿಚಾರಿಸಿದೆವು. ಜನರು ಆ ಪಟ್ಟಣದಲ್ಲಿ ವರ್ಷನೆಂಬ ಮೂರ್ಖನಿರುವನಲ್ಲದೆ ಆ ಹೆಸರಿನ ಪಂಡಿತನಿಲ್ಲವೆಂದರು. ಆದರಿಂದ ನಾವು ಡೋಲಾಯಮಾನಮಾನಸರಾಗಿ ಬೀದಿಗಳಲ್ಲಿ ತಿರುಗುತ್ತ ಒಂದು ಕಡೆಯಲ್ಲಿ ಎಲ್ಲಿ ಕಂಡರಲ್ಲಿ ಜಲ್ಲಡಿಯಂತೆ ಜಳ್ಳುತೂತುಗಳಿಂದಲೂ ಇಲಿಗಳ ಬಿಲಗಳಿಂದಲೂ ಇರುವೆಗಳ ಹುತ್ತಗಳಿಂದಲೂ ತುಂಬಿದ ಒಡೆದ ಗೋಡೆಗಳುಳ್ಳ ಮಾಳಿಗೆಯಿಲ್ಲದ ಮಾಟವಿಲ್ಲದ ನೆರಳಿಲ್ಲದ ವಿಪತ್ತುಗಳಿಗೆ ತೌರಾದ ಒಂದು ಮನೆಯನ್ನೂ ಅದರಲ್ಲಿ ಧ್ಯಾನನಿಷ್ಠನಾಗಿರುವ ವರ್ಷ

ನನ್ನೂ ಕರೆದೆವು. ಒಳಕ್ಕೆ ಹೋಗಿ ಅಲ್ಲಿ ಸಿಂದಿ ಸೀರೆಗಟ್ಟಿ ಬಹಳ ಬಡವಾಗಿರುವ ಆತನ ಸತಿಯನ್ನು ಗುಣಾನುರಾಗದಿಂದ ಆತನನ್ನೊಲಿದು ಬಂದ ದಾರಿದ್ರ್ಯದೇವತೆಯೋ ಎಂಬಂತೆ ತೋರುವ ಸೀರೆಯನ್ನು ನೋಡಿ, ಆಕೆಯಿಂದ ಅತಿಥಿಸತ್ಕಾರವನ್ನು ಹೊಂದಿ ಆಕೆಗೆ ಸಾಷ್ಟಾಂಗವೆರಗಿ ನಮ್ಮ ವೃತ್ತಾಂತವನ್ನೂ ವರ್ಷನ ಮೂರ್ಖತ್ವ ಪ್ರಖ್ಯಾತಿಯನ್ನೂ ಬಿನ್ನವಿಸಿದೆನು.

## ವರ್ಷೋಪಾಧ್ಯಾಯರ ವೃತ್ತಾಂತವು

"ಎಲೈ ಬಾಲಕರಿರಾ! ನೀವು ನನಗೆ ಪುತ್ರರು, ನಿಮ್ಮ ಬಳಿಯಲ್ಲಿ ನನಗೆ ನಾಚಿಕೆ!" ಎಂದೀಕಥೆ ನುಡಿದಳು : ಈ ನಗರದಲ್ಲಿ ಶಂಕರಸ್ವಾಮಿಯೆಂಬ ಒಬ್ಬ ಬ್ರಾಹ್ಮಣೋತ್ತಮನಿದ್ದನು. ನನ್ನ ಗಂಡನೂ ಉಪವರ್ಷನೆಂಬಾತನೂ ಆತನ ಮಕ್ಕಳು. ಈತನು ಮೂರ್ಖನೂ ದರಿದ್ರನೂ ಆಗೆ, ತಮ್ಮನಿದಕ್ಕೆ ವಿಪರೀತವಾಗಿರುವನು. ಆತನು ತನ್ನ ಮಡದಿಗೆ ಈತನ ಕುಟುಂಬವನ್ನೂ ಕೂಡಿ ಪೋಷಿಸುವಂತೆ ಆಜ್ಞೆಗೆಯ್ದನು. ಹೀಗಿರುವಲ್ಲಿ ಒಂದು ಸಮಯದಲ್ಲಿ ವರ್ಷಾಕಾಲವೊದಗಿತು. ಈ ಪಟ್ಟಣದೊಳಗೆ ವರ್ಷಾಕಾಲದಲ್ಲಿ ಸ್ತ್ರೀಯರು ಬೆಲ್ಲ ಬೆರಸಿದ ಹಿಟ್ಟಿನಿಂದ ಗುಹ್ಯಾಕಾರವಾಗಿ ಅಸಹ್ಯವಾದ ಭಕ್ಷ್ಯ ಪದಾರ್ಥವನ್ನು ಮಾಡಿ ಮೂರ್ಖ ಬ್ರಾಹ್ಮಣನಿಗೆ ದಾನವೀವರು. ಆ ದಾನದಿಂದ ಸ್ತ್ರೀಯರಿಗೆ ಶೀತ ಕಾಲದಲ್ಲಿ ಸ್ನಾನಶ್ರಮವೂ ಬಿಸಿಲಕಾಲದಲ್ಲಿ ಬೇಗೆಯ ಸಂಕಟವೂ ಆಗದಂತೆ ಆ ಹಾಳು ದಾನವನ್ನು ವಿವೇಕಿಗಳು ಸ್ವೀಕರಿಸರು. ಇಂತಹ ದಾನವನ್ನು ನನ್ನ ಓರಗಿತಿ ನನ್ನ ಗಂಡನಿಗೆ ಸದಕ್ಷಿಣಾಕವಾಗಿ ಕೊಟ್ಟಳು. ಆತನದನ್ನು ಕೈಕೊಂಡು ಮನೆಗೆ ಬರುತಲೂ ನಾನು ನೋಡಿ ಬಹಳ ಬೇಸರಗೊಂಡೆನು. ಬಳಿಕಾತನು ತನ್ನ ಮೂರ್ಖತೆಗೆ ಪರಿತಾಪಪಟ್ಟು ಶ್ರೀ ಕುಮಾರಸ್ವಾಮಿಯ ಚರಣಗಳೇ ಶರಣವೆಂದು ಹೊರಟು ತಪಸ್ಸಿನಿಂದ ಭಕ್ತವತ್ಸಲನಾದ ಆ ಸ್ವಾಮಿಯನ್ನು ಮೆಚ್ಚಿಸಿದನು. ಆ ಕಂದಸಾಮಿ ಪ್ರಸನ್ನನಾಗಿ ಈತನಿಗೆ ಸಕಲ ವಿದ್ಯೆಗಳನ್ನೂ ಕೊಟ್ಟು "ನೀನು ಶ್ರುತಧರನಾದ ಬ್ರಾಹ್ಮಣನಿಗೆ ಮಾತ್ರವೇ ಹೇಳಬಹುದು" ಎಂದಾಜ್ಞಾಪಿಸಿದನು. ಇಂತು ದೇವತಾನುಗ್ರಹವನ್ನು ಪಡೆದು ಆಮುಂದಾನಂದದೊಡನೆ ನಿಜಮಂದಿರಕ್ಕೆ ಬಂದು ಆ ಸುದ್ದಿಯನೆನಗರುಹಿ ಅಂದು ಮೊದಲು ನಿರಂತರವೂ ಜಪಧ್ಯಾನಪರಾಯಣನಾಗಿ ಕಾಲ ಕಳೆದನು. ಆದುದರಿಂದ ನೀವು ಹೋಗಿ ಶ್ರುತಧರನೊಬ್ಬನನ್ನು ಹುಡುಕಿ ಕರ ತನ್ನಿರಿ. ಹಾಗೆ ಮಾಡಿದ ನಿಮಗೆ ಸರ್ವಾರ್ಥಗಳೂ ಸಿದ್ಧಿಸುವುವು. ಸಂದೇಹವಿಲ್ಲವು, ಎಂದಿಂತು ವರ್ಷೋಪಾಧ್ಯಾಯರ ವೃತ್ತಾಂತವನ್ನು ತತ್ಪತ್ನಿಯಿಂದ ತಿಳಿದು ಆಕೆಗೆ ನೂರು ನಿಷ್ಕ (ವರಹಾ) ಗಳನ್ನಿತ್ತು ಪ್ರಕೃತ ದಾರಿದ್ರ್ಯವನ್ನು ಪರಿಹರಿಸಿ ಅಲ್ಲಿಂದ ಬಂದೆವು.

ಎಲ್ಲೆಲ್ಲಿ ಸುತ್ತಿದರೂ ಶ್ರುತಧರನನ್ನು ಎಲ್ಲಿಯೂ ಕಾಣದೆ ಬೇಸರಾಂತು ಬೆರಗಾಗಿ ಇಂದಿಗೆ ನಿಮ್ಮ ಮನೆಗೆ ಬಂದೆವು. ಇಷ್ಟು ಕಾಲಕ್ಕೆ ಶ್ರುತಧರನಾದ ನಿನ್ನ ಮಗನು

ನಮಗೆ ದೊರೆತನು. ಇವನನ್ನು ನಮಗೊಪ್ಪಿಸು. ವಿದ್ಯಾಧನವನ್ನು ಸಾಧಿಸ ಹೋಗುವೆವು. ವ್ಯಾಡಿಯು ಈ ಮಾತು ಕೇಳಿ ನಮ್ಮ ತಾಯಿ ಸಾದರದಿಂದಿಂತೆಂದಳು— "ನೀವು ಹೇಳಿದುದೆಲ್ಲ ಚೆನ್ನಾಗಿಯೇ ಇದೆ. ಈ ವಿಷಯದಲ್ಲಿ ನನಗೆ ತುಂಬಿದ ನಂಬಿಕೆಯುಂಟು. ನನಗೆ ಈ ಏಕಪುತ್ರನು ಹುಟ್ಟುತಲೂ— ಇವನು ಶ್ರುತಧರನು, ವರ್ಷನಿಂದ ಸಕಲ ವಿದ್ಯೆಗಳನ್ನೂ ಗ್ರಹಿಸುವನು, ಮತ್ತೆ ಲೋಕದಲ್ಲಿ ವ್ಯಾಕರಣ ಶಾಸ್ತ್ರವನ್ನು ಪ್ರತಿಷ್ಠಿಸುವನು. ವರ (ಶ್ರೇಷ್ಠ)ವಾದ ವಿಷಯಗಳೆಲ್ಲವೂ ಇವನಿಗೆ ರುಚಿಸುತ್ತಿರುವುದರಿಂದ ಇವನಿಗೆ ವರರುಚಿಯೆಂದು ಹೆಸರು, ಎಂದು ಅಶರೀರವಾಣಿ ನುಡಿದಿದೆ. ಈ ಹುಡುಗನು ಬಳೆಯುತ ಬಂದಂತೆ ಆ ವರ್ಷೋಪಾಧ್ಯಾಯನೆಲ್ಲಿರುವನೋ ಎಂದು ನಾನು ಹಗಲಿರುಳು ಚಿಂತಿಸುತ್ತಿದ್ದು ಇಂದಿಗೆ ನಿಮ್ಮಿಂದ ಕೇಳಿ ಮಹದಾನಂದವನ್ನೊಂದಿರುವೆನು. ಇವನನ್ನು ನೀವು ಕರೆದುಕೊಂಡು ಹೋಗಿರಿ. ಕೆಡುಕೇನುಂಟು? ಇವನೂ ನಿಮಗೆ ತಮ್ಮನು" ಎಂದು ನಮ್ಮ ತಾಯಿ ನುಡಿದ ನುಡಿಗಳಿಂದ ವ್ಯಾಡೀಂದ್ರದತ್ತರು ಅತ್ಯಂತಾನಂದಪರವಶರಾಗಿ ಆಯಿರುಳೆಲ್ಲ ನಿದ್ರೆಗೆಯ್ಯದೆಯೆ ಕ್ಷಣವಾಗಿ ಕಳೆದರು. ಬಳಿಕ ವ್ಯಾಡಿ ಉಪನಯನೋತ್ಸವಕ್ಕಾಗಿ ನಮ್ಮ ತಾಯಿಗೆ ಹಣವಿತ್ತು ನನಗೆ ವೇದಾಧಿಕಾರವುಂಟಾಗಲು ತಾನೇ ಮುಂಜಿ ಮಾಡಿದನು. ಬಳಿಕ ನನ್ನ ತಾಯಿ ಹೇಗೆಯೋ ಉಕ್ಕಿ ಬರುವ ಕಂಬನಿಗಳನ್ನು ತಡೆದವಳಾಗಿ ಅವರೊಡನೆ ಹೋಗಲು ನನಗನುಜ್ಞೆಯಿತ್ತಳು.

## ವ್ಯಾಡೀಂದ್ರದತ್ತ ಕಾತ್ಯಾಯನರ ವಿದ್ಯಾಭ್ಯಾಸವು

ಬಳಿಕ ವ್ಯಾಡೀಂದ್ರದತ್ತರು ನನ್ನ ತಾಯ್ಗೆ ಉತ್ಸಾಹ ವಚನಗಳಿಂದ ಸಮಾಧಾನ ಪೊರೆದು, ಕುಮಾರಸ್ವಾಮಿಯ ವರಕಲ್ಪಲತೆಪೂತುದೆಂದು ಬಗೆವರಾಗಿ ಬೇಗನೆ ಹೊರಟರು. ಕ್ರಮವಾಗಿ ನಾವೆಲ್ಲರೂ ವರ್ಷನ ಮನೆಗೆ ಬಂದೆವು. ನಮ್ಮ ಗುರು ನನ್ನನ್ನು ಮೂರ್ತೀಭವಿಸಿದ ಕುಮಾರಸ್ವಾಮಿಯ ಪ್ರಸಾದವನ್ನಾಗಿ ಗ್ರಹಿಸಿದನು. ಮಾರನೆಯ ದಿನದಲ್ಲಿ ವರ್ಷೋಪಾಧ್ಯಾಯನು ಪವಿತ್ರವಾದ ಸ್ಥಳದಲ್ಲಿ ಸುಖಾಸೀನರಾಗಿ ನಮ್ಮ ನಿದಿರಿಗೆ ಕುಳ್ಳಿರಿಸಿಕೊಂಡು ದಿವ್ಯವಾಕ್ಕಿನಿಂದ ಪ್ರಣವೋಚ್ಚಾರಣೆಗೆಯ್ದನು. ಬಳಿಕ ಆತನಿಗೆ ಸಾಂಗಂಗಳಾದ ವೇದಂಗಳು ಸ್ಫುರಿಸಿದುವು. ಒಡನೆಯೇ ನಮಗೆ ವೇದಗಳನ್ನು ಹೇಳತೊಡಗಿದನು. ಒಂದು ಬಾರಿ ಕೇಳಿ ನಾನೂ, ಎರಡು ಬಾರಿಯಾಲಿಸಿ ವ್ಯಾಡಿಯೂ, ಮೂರುಬಾರಿಯವಧಾರಿಸಿ ಇಂದ್ರದತ್ತನೂ ಗುರೂಕ್ತಗಳನ್ನು ಗ್ರಹಿಸಿದೆವು. ಆಯೂರಿನ ಬ್ರಾಹ್ಮಣೋತ್ತಮರೆಲ್ಲರೂ ಅಪೂರ್ವವೂ ದಿವ್ಯವೂ ಆದ ಈ ವೇದನಾದವನ್ನಾಲಿಸಿ ಇದೇ ನಚ್ಚರಿಯೆಂದು ಅಲ್ಲಿಗೆ ಬಂದು ಮೆಲ್ಲನೆ ನಿಂದು ಬಗೆದಂದು ಪರಮಾಶ್ಚರ್ಯಭರಿತರಾಗಿ ವರ್ಷೋಪಾಧ್ಯಾಯರನ್ನು ಸ್ತೋತ್ರಗಳಿಂದಲೂ ಸಾಷ್ಟಾಂಗಪ್ರಣಾಮಗಳಿಂದಲೂ ಸಂಪೂಜಿಸಿದರು. ಮದಿಸಿದುಪವರ್ಷನೊಬ್ಬನಲ್ಲದೆ ಪಾಟಲೀಪುರ ಜನರೆಲ್ಲರೂ ಮಹೋತ್ಸವಂಗಳನೆಸಗಿ ಆ ವಿಚಿತ್ರವನ್ನು ಕೊಂಡಾಡಿದರು. ಪರಮೈಶ್ವರ್ಯಸಂಪನ್ನನಾದ ನಂದಮಹಾರಾಜನೂ ಆ ವಿದ್ಯಾವೈಚಿತ್ರ್ಯವನ್ನು ಪಾರ್ವತೀನಂದನನ ವರಪ್ರಭಾವ

ವನ್ನಾಗಿ ತಿಳಿದು ಸಂತೋಷಿಸಿ ಬಂದು ಸಾದರದಿಂದ ನಮ್ಮುಪಾಧ್ಯಾಯರ ಮನೆಯನ್ನು ಧನಕನಕವಸ್ತುಗಳಿಂದ ತುಂಬಿಸಿ ಧನ್ಯನಾದನು.

ನೀತಿ - ಕಂದ || ನೆರೆ ತಕ್ಕುದು ತಗದೆಂಬುದ |
ನರಿತಾ ಸತ್ಪಾತ್ರಕಿತ್ತ ವಿದ್ಯೆಯೆ ಮೆರೆಗುಂ ||
ಗುರುವರ ವರ್ಷೋಪಾಧ್ಯಾ |
ಯರ ವರರುಚಿ ಮುಖ್ಯಶಿಷ್ಯರಧ್ಯಯನಂಬೋಲ್ || ೨ ||

O

# ೩ ನೆಯ ತರಂಗವು

ವರರುಚಿ ಮರಳಿಯೂ ಇಂತುವಚಿಸತೊಡಗಿದನು. ಕಾಣಭೂತಿಯೂ ಏಕಾಗ್ರ ವಾಗಿ ಕೇಳತೊಡಗಿದನು. ಒಂದು ದಿನದಲ್ಲಿ ಸ್ವಾಧ್ಯಾಯವನ್ನು ಹೇಳಿಕೊಂಡು ಉಪಾಧ್ಯಾಯರ ಆಹ್ನಿಕವಾದ ಮೇಲೆ ಅವರನ್ನು "ಸ್ವಾಮಿಾ! ಈ ನಗರವು ಹೀಗೆ ಲಕ್ಷ್ಮೀ–ಸರಸ್ವತಿಯರಿಗೆ ಬೀಟದ ಪೊಲನಾಗಿರಲು ಕಾರಣವೇನೋ ನಿರೂಪಿಸಿ"ರೆಂದು ಬೆಸಗೊಂಡೆವು.

## ಪಾಟಲೀಪುತ್ರಕ ಕಥೆ

ಉಪಾಧ್ಯಾಯರಿಂತು ಹೇಳುತ್ತಿರುವರು : ಎಲೈ, ಮಕ್ಕಳಿರಾ! ಗಂಗಾದ್ವಾರ ದಲ್ಲಿ ಕನಖಲನೆಂಬ ಪುಣ್ಯತೀರ್ಥವಿರುವುದು. ಮುನ್ನಲ್ಲಿ ಕಾಂಚನಪಾತನೆಂಬ ದೇವಗಜವು ಉಶೀನರಗಿರಿಪ್ರಸ್ಥದಿಂದ ಗಂಗಾ ನದಿಯನ್ನು ಕೆಳಗೆ ಹರಿವಂತೆ ಮಾಡಿತು. ಆ ತೀರ್ಥ ದಲ್ಲಿ ದಾಕ್ಷಿಣಾತ್ಯ ಬ್ರಾಹ್ಮಣನೊಬ್ಬನು ಪತ್ನಿಯೊಡನೆ ತಪವನಾಚರಿಸುತ್ತಿದ್ದನು. ಅಲ್ಲಿಯೇ ಆತನಿಗೆ ಮೂರು ಮಂದಿ ಮಕ್ಕಳೂ ಹುಟ್ಟಿದರು. ಕಾಲಕ್ರಮದಿಂದ ಆತನು ಸತಿಯೊಡನೆ ಸಗ್ಗಕಯ್ದಲು, ಆ ಪುತ್ರರು ಮೂವರೂ ವಿದ್ಯಾರ್ಜನೆಗಾಗಿ ರಾಜಗೃಹ ವೆಂಬ ಪಟ್ಟಣಕ್ಕೆ ಹೊರಟರು. ಅಲ್ಲಿ ವಿದ್ಯೆ ಕಲಿತರೂ ತಮ್ಮಯನಾಥತ್ವದಿಂದ ದುಃಖಿತ ರಾಗಿ ಕುಮಾರಸ್ವಾಮಿಯ ದರ್ಶನಕ್ಕಾಗಿ ದಕ್ಷಿಣಾಪಥಕ್ಕೆ ತೆರಳಿದರು. ಅಲ್ಲಿ ಸಮುದ್ರ ತೀರದ ಚಿಂಚಿನಿಯೆಂಬ ನಗರದಲ್ಲಿ ಭೋಜಿಕನೆಂಬ ವಿಪ್ರನ ಮನೆಯಲ್ಲಿ ನಿವಾಸಂಗೆ ಯ್ದರು. ಆ ಗ್ರಹಸ್ಥನವರಿಗೆ ತನ್ನ ಮೂರು ಮಂದಿ ಹೆಣ್ಣುಮಕ್ಕಳನ್ನೂ ತನಗೆ ಗಂಡು ಮಕ್ಕಳಿಲ್ಲದುದರಿಂದ ಸರ್ವಸ್ವ ದ್ರವ್ಯವನ್ನೂ ಕೊಟ್ಟು ಗಂಗಾ ತೀರಕ್ಕೆ ತಪ ವಾಚರಿಸಲು ತೆರಳಿದನು. ಅವರೂ ಮಾವನ ಮನೆಯಲ್ಲಿರುತ್ತಿರುವಲ್ಲಿ ಕ್ಷಾಮಹಿಡಿದು ದಾರುಣವಾದ ಕಾಟಕವಾಯಿತು. ಆಗಳವರು ಪತಿವ್ರತೆಯರಾದ ನಿಜಸತಿಯರನ್ನು ತೊರೆದು ತಮ್ಮ ಪ್ರಾಣಗಳನ್ನು ಮಾತ್ರವೇ ಕಾಪಾಡಿಕೊಳ್ಳುವರಾಗಿ ದೇಶಾಂತರಗತ ರಾದರು. ಕ್ರೂರಹೃದಯರನ್ನು ಬಂಧು ಸ್ನೇಹವು ಸೋಂಕುವುದೇ? ಆ ಹೆಂಗಳಲ್ಲಿ ನಡುವಣಾಕೆ ಬಸುರಿಯಾಗಿದ್ದಳು. ಆ ಮೇಲೆಯೂ ಬಾಲೆಯರು ತಂದೆಯ ಗೆಳೆಯನಾದ ಯಜ್ಞದತ್ತನ ಮನೆ ಸೇರಿ ಪತಿಧ್ಯಾನನಿರತೆಯರಾಗಿ ಕಷ್ಟದಿಂದ ಕಾಲ ಕಳೆಯುತ್ತಿದ್ದರು. ಕುಲಸ್ತ್ರೀಯರು ವಿಪತ್ಕಾಲದಲ್ಲಿಯೂ ಪಾತಿವ್ರತ್ಯವನ್ನು ಕೆಡಿಸಿಕೊಂಬರೇ? ನಡುವ ಣಾಕೆ ಗಂಡುಕೂಸು ಹೆತ್ತಳು. ಅವನಲ್ಲಿ ಆ ಮೂವರಿಗೂ ಒಬ್ಬರಿಗಿಂತಲೊಬ್ಬರಿಗೆ ಪ್ರೇಮವತಿಶಯವಾಗಿರುತ್ತಿರಲು, ಒಂದು ದಿನದಲ್ಲಿ ಪರಮೇಶ್ವರನು ಆಕಾಶಮಾರ್ಗದಲ್ಲಿ ವಿಹರಿಸುತ್ತ ತನ್ನ ತೊಡೆಯಲೊಪ್ಪುವ ಗೌರಿ ಕರುಣೆಯಿಂದ ಕರಗಿ "ನಾಥನೇ! ನೋಡ!

ಈ ಮೂವರು ತಾಯ್ಗಿರೂ ಈ ಮಗು ತಮ್ಮನ್ನು ಪರಿರಕ್ಷಿಸುವುದೆಂದು ಇವನಲ್ಲಿ ಅತಿ
ಪ್ರೀತಿಗೆಯ್ದು ಅಭಿಲಾಷೆಗೊಂಡಿರುವರು. ಇವನು ಬಾಲಕನಾಗಿದ್ದರೂ ಇವರನ್ನು ಹೇಗೆ
ಸಲಹುವನೋ ಆಮೇರೆ ಅನುಗ್ರಹಿಸ ! " ಎಂದು ಬಯಸಿದಳು. ನಲ್ಲೆಯಿಂತು ಸೊಲ್ಲಿ
ಸಲು ವರದನಾದ ಶಂಕರನು ಹೇಳಿದನು : "ಹಾಗೆಯೇ ಇವನನನುಗ್ರಹಿಸುವೆನು. ಇವನು
ಮುನ್ನೊಮ್ಮೆ ಮಡದಿಯೊಡನೆ ನನ್ನನ್ನಾರಾಧಿಸಿದನು. ಆದರಿಂದ ಇವನೀಗಳಾ
ಭೋಗಾರ್ಥವಾಗಿ ಹುಟ್ಟಿರುವನು. ಇವನ ಮಡದಿ ಮಹೇಂದ್ರವರ್ಮನಿಗೆ ಮಗಳಾಗಿ
ಹುಟ್ಟಿ ಪಾಟಲಿಯೆಂಬ ಹೆಸರಿಂದೆಸೆವಳು. ಅವಳೀ ಜನ್ಮದಲ್ಲಿಯೂ ಇವನಿಗೇ ಸೊಬಗಿನ
ಸತಿಯಾಗುವಳು" ಎಂದು ಗಿರಿಜೆಗೊರೆದು ಪರಮೇಶ್ವರನು ಆ ಪತಿವ್ರತೆಯರಿಗೆ ಸ್ವಪ್ನ
ದಲ್ಲಿ ಪ್ರತ್ಯಕ್ಷವಾಗಿ "ಎಲೌ, ಸಾಧ್ವಿಯರೇ ! ನಿಮ್ಮ ಪುತ್ರನಿಗೆ ಪುತ್ರಕನೆಂದೇ ನಾಮ
ಧೇಯವು. ಇವನು ನಿದ್ದೆಯಿಂದೇಳುತ್ತಲೂ ತಲೆದಿಂಬಿನ ಕೆಳಗೆ ಪ್ರತಿ ನಿತ್ಯವೂ ಲಕ್ಷ
ಸುವರ್ಣ (ವರಹಾ) ಗಳಿರುವುವು. ಇವನು ದೊರೆಯಾಗಿಯೂ ಮೆರೆವನು" ಎಂದನು
ಗ್ರಹಿಸಿದನು. ಬಳಿಕ ಪೊಳ್ತರೆಯಾಗುತ್ತಲೂ ಮೂವರು ಸತಿಯರೂ ಸ್ವಪ್ನಗಳನಾರಿಸಿ
ಕೊಂಡು ಪಾತಿವ್ರತ್ಯವು ಫಲಿಸಿತೆಂದು ಪರಿತುಷ್ಟಹೃದಯೆಯಾದರು. ಬಳಿಕಾ ಬಂಗಾರ
ದಿಂದ ಸ್ವಲ್ಪ ಕಾಲದಲ್ಲಿಯೇ ಮೊಕ್ಕಳವಾದ ಬೊಕ್ಕಸವುಂಟಾಗಿ ಪುತ್ರಕನು ರಾಜನಾಗಿ
ರಾಜಿಸಿದನು. ಸಕಲಸಂಪದಂಗಳೂ ತಪೋಧೀನಂಗಳಲ್ಲವೆ ?

ಇಂತಿರಲು ಯಜ್ಞದತ್ತನೊಂದುದಿನದಲ್ಲಿ ಏಕಾಂತದಲ್ಲಿ ಪುತ್ರಕನೊಡನೆ " ಎಲೈ,
ರಾಯನೇ ! ನಿನ್ನ ತಂದೆವಿರು ದುರ್ಭಿಕ್ಷ ದೋಷದಿಂದ ಎಲ್ಲಿಗೋ ಹೋದರು. ಆದುದ
ರಿಂದ ಬ್ರಾಹ್ಮಣರಿಗೆ ದಾತಾರನಾಗಿರು. ಆ ದಾತೃತ್ವವನ್ನು ಕೇಳಿ ಅವರೂ ಬರುವರು.
ಇದಕ್ಕೆ ನಿದರ್ಶನವಾಗಿ ಬ್ರಹ್ಮದತ್ತನ ಕಥೆ ಕೇಳೈ !" ಎಂದು ನುಡಿದನು— ಮುನ್ನ-
ಮಾವಾರಾಣಸಿಯಲ್ಲಿ ಬ್ರಹ್ಮದತ್ತನೆಂಬರಸನಿದ್ದನು. ಆತನೊಂದು ರಾತ್ರಿಯಲ್ಲಿ ಗಗನ
ದೊಳಗೆ ನೂರಾರಂಚೆಗಳಿಂದ ಪರಿವೃತವಾಗಿ ರಾರಾಜಿಸುವ ಪೊಂಬಣ್ಣದ ಹಂಸ
ಯುಗಳವನ್ನು ಕಂಡನು. ಪೊನ್ನಂಚೆಗಳು ಅಕಾಲಶರನ್ಮೇಘಗಳ ನಡುವೆ ಶೋಭಿಸುವ
ಮಿಂಚುವಳ್ಳಿಗಳೆಂಬಂತೆ ತೋರಿದುವು. ರಾಯನಿಗೆ ಅವುಗಳನ್ನು ಮರಳಿ ಮರಳಿ ನೋಡ
ಲಪೇಕ್ಷೆಯೆಷ್ಟು ಬಲವತ್ತರವಾಯಿತೋ ರಾಜಭೋಗಂಗಳಲ್ಲಿಯೂ ಆದರವಿಲ್ಲದಾಯಿತು.
ಆಗಳಾ ಅರಸು ಮಂತ್ರಿಗಳೊಡನಾಲೋಚಿಸಿ ಲೀಲೋಚಿತವಾದ ಕೆರೆ ಕಟ್ಟಿಸಿ ಅಲ್ಲಿ
ಸುಳಿವ ಪ್ರಾಣಿಗಳಿಗೆ ಅಭಯವೆಂದು ಕಟ್ಟಳೆಗೊಳಿಸಿದನು. ಆ ಬಳಿಕಾಕೆರೆಗಾ ಅಂಚೆ
ಗಳೈತರಲು ಆ ರಾಯನಾಲೋಕಿಸಿ ಆನಂದಿಸುತ್ತ ಭೀತಿ ಬಿಡುವಂತವುಗಳಿಗೆ ಸಲುಗೆ
ಯಿತ್ತು ಚೆನ್ನಾದ ಚಿನ್ನದೊಡಲುಂಟಾಗಲು ಕಾರಣವೇನೆಂದು ಕೇಳಿದನು. ಆದಕ್ಕಂಚೆ
ಗಳು ಬಿಡಿನುಡಿಯಿಂದ ರಾಯನೊಡನಿಂತೆಂದುವು: "ಎಲೈ, ಅರಸೇ ! ನಾವು ಹಿಂದಣ
ಜನ್ಮದಲ್ಲಿ ವಾಯಸಂಗಳು. ಒಂದು ಸಮಯದಲ್ಲಿ ಪುಣ್ಯಕರವಾದ ಒಂದು ಶೂನ್ಯಶಿವಾ
ಲಯದಲ್ಲಿ ಬಲ್ಯನ್ನಕ್ಕಾಗಿ ನಾವಿಬ್ಬರೂ ಪರಸ್ಪರ ಕಲಹಂಗೆಯ್ದು ಅಲ್ಲಿಯಣ ನೀರ

ತೊಟ್ಟಿಯಲ್ಲಿ ಬಿದ್ದು ಸತ್ತೆವು. ಆ ಪುಣ್ಯಬಲದಿಂದ ಪೂರ್ವಜನ್ಮಜ್ಞಾನವುಂಟಾದ ಪೊನ್ನಂಚೆಗಳಾಗಿ ಹುಟ್ಟಿರುವೆವು." ಎಂಬೀ ನುಡಿಗೇಳ್ದು ರಾಯನಾರಾಜಹಂಸಗಳೊಡನೆ ಯಥೇಚ್ಛವಾಗಿ ಬಿಟ್ಟು ವಿನೋದಿಸುತ್ತಿದ್ದನು. ಹಾಗೆಯೇ ನೀನೂ ಅಪೂರ್ವ ದಾನ ಮಹಿಮೆಯಿಂದ ನಿನ್ನ ತಂದೆವಿರನೊಡಗೊಂಡು ಸುಖಿಸುವೈ.

ಎಂದಿಂತು ನುಡಿದ ಯಜ್ಞದತ್ತನ ಮಾತಿನ ಮೇರೆ ಪುತ್ರಕನೂ ಮಾಡತೊಡಗಿದನು. ಆ ಮೂವರು ಬ್ರಾಹ್ಮಣರೂ ಬಂದು ತಿಳಿದುಕೊಂಡು ಮಹೈಶ್ವರ್ಯವನ್ನೂ ಮಡದಿಯರನ್ನೂ ಪಡೆದು ಸುಖವಾಂತರು. ಅಕಟಾ ! ಎಷ್ಟು ಕಷ್ಟಗಳನುಭವಿಸಿದರೂ ವಿವೇಕವಿಲ್ಲದ ದುರ್ಜನರಿಗೆ ತಮ್ಮ ದುಸ್ಸ್ವಭಾವವೆಂದಿಗೂ ಬಿಡಲಿಸದು. ಏನೆಂದರೆ, ಆ ಬ್ರಾಹ್ಮಣಾಧಮರು ರಾಜ್ಯವಾಳಲೆಳಸಿ ಪುತ್ರಕನನ್ನು ಕೊಲ್ಲಲು ನಿಶ್ಚಯಿಸಿಕೊಂಡು ವಿಂಧ್ಯವಾಸಿನಿಯ ದರ್ಶನಕ್ಕೆಂಬ ನೆವವಿಟ್ಟು ಆತನನ್ನು ಆ ದೇವಾಲಯಕ್ಕೆ ಕರೆದೊಯ್ದರು. ಆ ದುರ್ಗಾಂಬೆಯ ಗರ್ಭಗೃಹದಲ್ಲಿ ತಲೆಕಡಿವರನ್ನು ನಿಲ್ಲಿಸಿಟ್ಟು, ಮಗನನ್ನು "ನೀನು ಮೊದಲು ಹೋಗಿ ದೇವಿಯ ದರ್ಶನ ಮಾಡಿಬಾ" ರೆಂದು ಕಳುಹಿದರು. ಆ ಪುತ್ರಕನೂ ಆತಂಗಳ ಮಾತಿನಲ್ಲಿ ಶಂಕೆಗೊಳ್ಳದೊಳಯಿಂಕೆ ಪೋಗಿ ದೇವಿಗೆ ಕೈ ಮುಗಿದನು. ಆ ಕ್ರೂರರೂ ಅವನ ಕೊಲ್ಲಬಂದರು. ದೇವಿ ಆ ಪುತ್ರಕನಲ್ಲಿ ಕರುಣಿಸಿ ಆ ಘಾತುಕರಿಗೆ ಬುದ್ಧಿಭ್ರಮೆಯೊದವಿಸಿದಳು. ಬಳಿಕ ಪುತ್ರಕನವರನೀಕ್ಷಿಸಿ ನೀವೇಕೆ ನನ್ನ ಕೊಲ್ಲಬಂದಿರೆಂದು ಕೇಳಿದನು. ಅದಕ್ಕವರು "ನಿಮ್ಮ ತಂದೆಗಳು ನಮಗೆ ಚಿನ್ನವಿತ್ತು ಈ ಕೆಲಸಕ್ಕೆ ಅಪ್ಪಣೆಕೊಟ್ಟರು" ಎಂದುಸಿರಿದರು. "ನನ್ನ ಗೊಡವೆಗೆ ಬಾರದಿರಿ, ನಾನು ನಿಮ್ಮ ರಹಸ್ಯವನ್ನು ಹೊರಪಡಿಸದೆ ದೇಶಾಂತರಕ್ಕೆ ತೆರಳುವೆನು. ನಿಮಗೆ ಅಮೂಲ್ಯವಾದ ನನ್ನ ರತ್ನಾಲಂಕರವೀವೆನು" ಎಂದು, ಪುತ್ರಕನು ಆ ಘಾತುಕರಿಗೆ ರನ್ನದುಡಿಗೆಯನಿತ್ತನು. ಆ ಹಿಂಸಕರೂ ಅದನ್ನಂಗೀಕರಿಸಿಕೊಂಡು ಹೊರಗೆ ಬಂದು ಪುತ್ರಕನನ್ನು ಕೊಂದೆವೆಂದು ಅವನ ತಂದೆಗಳೊಡನೆಂದು ನಡೆದರು. ಆ ಬ್ರಾಹ್ಮಣರು ರಾಜಮಂದಿರಕ್ಕೆ ಹಿಂತಿರುಗಿ ಬರುತ್ತಲೂ ಅವರನ್ನು "ಇವರು ರಾಜದ್ರೋಹಿಗಳು ಪುತ್ರಘಾತುಕರು ಪರಮಹಿಂಸಕರು" ಎಂದು ಹಿಡಿದು ಮಂತ್ರಿಮುಖ್ಯರು ಊರಲು ಹಾಕಿ ಕೊಲ್ಲಿಸಿದರು. ಹೀಗಲ್ಲದೆ ಕೃತಘ್ನರಿಗೆ ಎಂದಿಗಾದರೂ ಮೇಲುಂಟಾಗುವುದೆ ? ಸತ್ಯಸಂಧನಾದಾ ಪುತ್ರಕ ಮಹಾರಾಜನು ತನ್ನ ನೆಂಟರ ವಿಷಯದಲ್ಲಿ ವಿರಕ್ತನಾಗಿ ವಿಂಧ್ಯಾರಣ್ಯದಲ್ಲಿಯೆ ಹೊಕ್ಕು ಹೋಗುತ್ತಿದ್ದನು. ಪೋಪಲ್ಲಿ ನಡುವೆ ಮುಷ್ಟಿಯುದ್ಧಂಗೆಯ್ವ ಪುರುಷರಿಬ್ಬರನ್ನು ಪಗಿಕಿಸಿ ನೀವಾರೆಂದು ಕೇಳಿದನು. "ನಾವು ಮಯಾಸುರನ ಮಕ್ಕಳು. ಈ ತಪ್ಪಲೆಯೂ ಕೋಲೂ ಹಾವುಗೆಗಳೂ ನಮಗೆ ಪಿತ್ರ್ಯವಾದ ಆಸ್ತಿಯಾಗಿದೆ. ಬಲಾಧಿಕನಾದವನು ಇದನ್ನು ಕೈಕೊಳ್ಳಲೆಂದು ನಾವು ಕಾದಾಡುತ್ತಿರುವೆವು." ಎಂದವರುತ್ತರವಿತ್ತರು. ಅದಕ್ಕೆ ಪುತ್ರಕನು ನಕ್ಕು "ಇದೆಷ್ಟರ ಸ್ವತ್ತವು ? ಇದಕ್ಕಾಗಿ ಯುದ್ಧವೇ ?" ಎಂದು ನಗೆಸರವಾಡಲು ಅವರು "ಈ ಹಾವುಗೆಗಳನ್ನು ಮೆಟ್ಟಿಗೊಂಡರೆ ಗಗನಸಂಚಾರಶಕ್ತಿ ಬರುವುದು.— ಈ ಕೋಲಿನಿಂದ ನೆಲದಲ್ಲಿ ಬರೆದರೆ

ಬರೆದುದೆಲ್ಲ ಬರೆದಂತೆ ವಾಸ್ತವವಾಗುವುದು. ತಪಲೆ ಕೈಕೊಂಡು ಬಯಸಿದರೆ ಬಯಕೆ ಯಂತೆ ಮೃಷ್ಟಾನ್ನಾಹಾರವು ದೊರೆವುದು." ಎಂದವುಗಳ ಮಹಿಮೆ ಪೇಳ್ದರು. ಆಗಳಾ ಪುತ್ರಕನು "ಆದರೆ, ಯುದ್ಧವೇಕೆ? ಈ ಶಪಥ ಮಾಡಿರಿ. ಓಟದಲ್ಲಿ ಗೆದ್ದವನು ಇವು ಗಳನ್ನಂಗೀಕರಿಸುವನು" ಎಂದು ಹೇಳಲು, ಅದಕ್ಕಾ ಮೂಢರು ಸರಿಸರಿಯೆಂದು ಅಲ್ಲಿ ನಿಲ್ಲದೆಯೋಡಿಹೋದರು. ಪುತ್ರಕನೂ ಆ ಪಾದುಕೆಗಳನಡಿಗಿಟ್ಟು ತಪ್ಪಲೆ ಕೋಲ್ಗಳನು ಕೈಕೊಂಡು ಬಾಂಬಟ್ಟೆಯಲ್ಲಿ ಹಾರಿಹೋದನು.

ಹೀಗೆ ಖೇಚರನಾಗಿ ಹೋದ ಪುತ್ರಕನು ಕ್ಷಣದೊಳಗೆ ಬಹು ದೂರಕೆಯ್ದಿ ಆಕರ್ಷಿಕೆಯೆಂಬ ಸುಂದರವಾದೊಂದೂರನವಲೋಕಿಸಿ ಅಲ್ಲಿಳಿದನು. "ಸೂಳೆಯರು ನನ್ನ ತಂದೆವಿರಂತೆಯೇ ವಂಚಿಸುವರು. ಹಿರಿದರು ಪರಮಲುಬ್ಧರು. ಅರಮನೆಯಲ್ಲಿಳಿದುಳಿವೆನು?" ಎಂದು ಚಿಂತಿಸುತ್ತ ಇತರರಾರಿಲ್ಲದ ಮುದುಕಿಯೊಬ್ಬಳಿಯಿರುವ ಒಂದು ಮನೆಗೆಯ್ದಿ ಆಕೆಗೆ ಹಣವಿತ್ತು ಆಕೆಯೂ ತನ್ನನಾದರಿಸುತ್ತಿರಲು ಆ ಹಾಳು ಮನೆಯಲ್ಲಿ ರಹಸ್ಯ ವಾಗಿರುತ್ತಿದ್ದನು. ಒಂದು ದಿನವಾಮುದುಕಿ ಕಡುನಲ್ಮೆಯಿಂದ ಪುತ್ರಕನೊಡನೆ "ಮಗೂ! ನಿನಗೆಲ್ಲಿಯೂ ತಕ್ಕ ತರುಣಿಯಿಲ್ಲವೆಂದು ತಡೆಯಲಾರದ ಚಿಂತೆಗೆ ಗುರಿ ಯಾಗಿರುವೆನು. ಆದರೆ ಈ ನಗರದರಸಿಗೆ ಪಾಟಲಿಯೆಂಬ ಮಗಳಿರುವಳು. ಆ ಸುಂದರಿಯ ನಪೂರ್ವ ಜೀವರತ್ನವೆಂಬಂತೆ ಕರುಮಾಡದಲ್ಲಿ ಕಾವಲಿಟ್ಟು ಕಾಪಾಡುವರು" ಎಂದು ನುಡಿದಳು. ಆಬಡ್ಡಾದರದ ವೃದ್ಧಾಲಾಪಗಳು ಪುತ್ರಕನ ಕಿವಿಗೆ ಸವಿಯಾಗಿ ಪುಗು ವಾಗಲೇ ದಾರಿ ದೊರೆತ ಮಾರನೂ ಹೃದಯದಲ್ಲಿ ಹೊಕ್ಕನು. ಇಂದಿನಿರುಳೊಳಾಸುಂದ ರಾಂಗಿಯಾನೊಂದುವೆನಿದುಸರಿಯೆಂದು ಪುತ್ರಕನೂ ಪೂಣ್ದು ಆ ರಾತ್ರಿಯಲ್ಲಿ ಆ ರಾಯನಂತಃಪುರಕ್ಕೆ ಅಡಿಗೆ ಪಾವುಗೆತೊಟ್ಟು ಕಡು ವೇಗದಿಂದೆಯ್ದಿ ಗಿರಿಶೃಂಗಾಗ್ರದಂತಿ ರುವ ತುಂಗಗವಾಕ್ಷದಿಂದೊಳಪೊಕ್ಕು ಏಕಾಂತದಲ್ಲಿ ಮಲಗಿರುವ ಆ ಕಾಂತೆಯನವ ಲೋಕಿಸಿದನು. ಮೈವಳ್ಳಿಯನೊಂದಿಯೆಡೆವಿಡದೆ ಚಂದ್ರಕಾಂತಿಯೋಲಗಿಸುತ್ತಿರಲು ಜಗವನೆಲ್ಲ ಜಯಿಸಿ ವಿಶ್ರಮಿಪಾಂತ ಮನ್ಮಥಶಕ್ತಿಯೆಂಬಂತೆ ಮನೋಹಾರಿಣಿಯಾಗಿರುವ ಪಾಟಲಿಯ ಪರಿಭಾವಿಸಿ, ಈ ಮೋಹನಾಂಗಿಯ ನಾನೆಂತು ನಿದ್ದೆಯೆಬ್ಬಿಸುವೆನೆಂದು ಆಲೋಚಿಸುವ ಸಮಯಕ್ಕೆ ಆಕಸ್ಮಿಕವಾಗಿ ಕೆಳಗೆ ಬೀದಿಯಲ್ಲಿ ಗಸ್ತು ತಿರುಗುವ ತಳವಾರನಿಂತು ಹಾಡಿಕೊಂಡು ಹೋದನು.

"ತೋಟಕವೃತ್ತವು || ಕಲಹುಂಕೃತಿ ಸುಪ್ತೆ ಮನೋಹರೆಯಾ |
ದಲಸೋನ್ಮಿಷದೀಕ್ಷಣೆಯಿಂ ರಹದೊಳ್ ||
ನಲಿದಪ್ಪುತಮೆಳ್ಚರಿಪಾಸೊಬಗೇ |
ಫಲಮೈ ತರುಣರ್ಗದುಜನ್ಮಕೆದಲ್ ||"

ಆಗಾನವನಾಲೈಸಿ ರಾಗಾತಿರೇಕದಿಂದ ಆ ಪುತ್ರಕನು ಮೈ ಪುಳಕಕಂಪಿತ ವಾಗಿರಲು ಆ ಅಂಗನಾಮಣಿಯನಾಲಿಂಗಿಸಿಕೊಂಡನು. ಆಕೆಯೂ ನಿದ್ದೆಯಿನೆದ್ದಳು.

ಅವರಿಬ್ಬರೂ ಪರಸ್ಪರವಾಗಿ ನೋಡಿಕೊಂಬ ನೋಟಗಳಲ್ಲಿ ಲಜ್ಜಾಕುತೂಹಲಂಗಳಿಗೆ ಅಧಿಕ ಸಂಮರ್ದವಾಯಿತು. ಬಳಿಕವರಿಬ್ಬರಿಗೂ ಉಲ್ಲಾಸ ಸಲ್ಲಾಪಗಳೊಡನೆ ಅನ್ಯೋನ್ಯಾನುರಾಗವತಿಶಯಿಸಿ ಗಾಂಧರ್ವವಿಧಿಯಿಂದ ವಿವಾಹವಾಯಿತು. ಆಗಳಾ ದಂಪತಿಗಳಿಗೆ ಪ್ರೀತಿಯೆಂಬುದು ಮೇರೆಯಿಲ್ಲದೆ ಏರಿ ಬೆಳೆಯುತ ಬಂದುದಲ್ಲದೆ ರಾತ್ರಿ ಮಾತ್ರ ವಾಪ್ರಕಾರವಾಗಿ ಬೆಳೆಯಲಿಲ್ಲ. ಮನೋನ್ಮಾದದಲ್ಲಿ ಕಾಲಗತಿಯೂ ಕಾಣಿಸ ದಲ್ಲವೆ ? ನಾಲ್ಕನೆಯ ಜಾವದಲ್ಲಿ ಪುತ್ರಕನು ಆಕೆಯಲ್ಲಿ ಬೀಳ್ಕೊಂಡು ತನ್ನ ಮನವ ನಾಮುಗ್ಧೆಯ ಬಳಿಯಿಟ್ಟು ತಾನು ಮುದುಕಿಯ ಮನೆಗೆ ಬಂದನು. ಈ ಮೇರೆ ನಿತ್ಯವೂ ಪುತ್ರಕನು ರಮಣೀಮಣಿಯೆಡೆಗೆ ಗಮನಾಗಮನಗಳನಾಗಿಸುತಿರೆ, ಒಂದು ವೇಳೆಯಲ್ಲಿ ರಕ್ಷಿಗಳು ಪಾಟಲಿಯ ಪಾವುಡೆಯಲ್ಲಿ ಸಂಗಮ ಚಿನ್ಹಗಳನರಿತು ಹೆದರಿ ಆಕೆಯ ತಂದೆಗೆ ಅರಿಕೆಗೆಯ್ದರು. ಆತನೂ ರಾತ್ರಿರಹಸ್ಯವನ್ನು ಕಂಡು ಹಿಡಿಯಲು ಅಂತಃಪುರದಲ್ಲಿ ಅಡಗಿರುವಂತೆ ದಾಸಿಯೊಬ್ಬಳಿಗಾಜ್ಞೆಗೆಯ್ದನು. ಅಂದಿನಿರುಳಲ್ಲಿ ಯೆಂದಿನಂತೆ ಬಂದು ಮಲಗಿರುವ ಪುತ್ರಕನ ವಸ್ತ್ರದ ಮೇಲೆ ಆ ಪರಿಚಾರಿಕೆ ಅರಗಿನ ಕುರುವಿಟ್ಟು, ಮೂರನೆಯ ಹಗಲಲ್ಲಿ ರಾಯನಿಗರಿಕೆಗೆಯ್ದಳು. ರಾಜಾಜ್ಞೆಯಿಂದ ಚಾರರು ಬಂದು ಆ ಗುರುತು ಹಿಡಿದು ಮುದುಕಿಯ ಮನೆಯಿಂದ ಪುತ್ರಕನನ್ನು ಹಿಡಿದುತಂದರು. ಆಗಳಾ ಪುತ್ರಕನು ಕೋಪಾವಿಷ್ಟನಾದ ಭೂಪಾಲನನ್ನು ನೋಡಿ ಪಾದುಕಾಶಕ್ತಿ ಯಿಂದ ಹಾರಿ ಪಾಟಲಿಯಂತಃಪುರಕೆ ಸೇರಿ "ಕಂಡರು ನಮ್ಮನ್ನು, ಬಾರ ! ಹೋಗುವ, ಪಾದುಕೆಗಳಿಂದ" ಎಂದು ಆಕೆಯನ್ನು ತೊಡೆಗೇರಿಸಿಕೊಂಡು ಗಗನಮಾರ್ಗದಿಂದ ಹೊರಟು ಗಂಗಾತೀರದಲ್ಲಿಳಿದು ಪಯಣದಿಂದಲಸಿರುವ ಪ್ರಿಯೆಗೆ ಅಕ್ಷಯ ಪಾತ್ರದಿಂದ ಅಮೃತಾನ್ನವಿತ್ತು, ವಿಶ್ರಮಿಸಿಕೊಂಡನು. ಬಳಿಕ ಪುತ್ರಕನು ತನ್ನ ಮಹಿಮೆಗೆ ಸಂತೋಷಿಸಿ ಆಕೆ ಬಯಸಲು ಕೈ ಕೋಲಿನಿಂದ ಚತುರಂಗ ಬಲಸಮೇತವಾದ ಪಟ್ಟಣ ವೊಂದನ್ನು ಬರೆದನು. ಆ ಬರಹವು ವಾಸ್ತವನಗರವಾಗಿಯೂ ವಾಸ್ತವ ಬಲವಾಗಿಯೂ ಮಹಾ ಪ್ರಭಾವದಿಂದ ಪರಿಣಮಿಸಲು ಪುತ್ರಕನಲ್ಲಿಗೆ ರಾಜನಾಗಿ ರಾರಾಜಿಸಿ ರಾಜ್ಯ ವಾಳುತ ಮಾವಂದಿರನ್ನು ವಶಗೊಳಿಸಿಕೊಂಡು ಸಮುದ್ರಾಂತ ಭೂಮಂಡಲವನ್ನು ಪರಿ ಪಾಲಿಸಿದನು. ಇದು ಆ ದಿವ್ಯನಗರವು. ನಾಗರಿಕರೊಡನೆ ಮಾಯೆಯಿಂದ ಸೃಜಿಸಲ್ಪ ಟ್ಟಿದೆ. ಆ ದಂಪತಿಗಳ ಹೆಸರಿನಿಂದ ಪಾಟಲೀ ಪುತ್ರಕವೆಂದೇ ಇದು ಸುಪ್ರಖ್ಯಾತಿಗೊಂಡು ಲಕ್ಷ್ಮೀಸರಸ್ವತಿಯರಿಗೆ ನಿತ್ಯ ನಿವಾಸವೆನಿಸಿದೆ. ಎಲೈ, ಕಾಣಭೂತಿಯೇ ! ಇಂತೆಂದು ವರ್ಷೋಪಾಧ್ಯಾಯರಿಂದ ಅಪೂರ್ವವೂ ಅದ್ಭುತವೂ ಆದ ಕಥೆಯನ್ನು ನಾವು ಕೇಳಿ ಚಿರಕಾಲವಾಶ್ಚರ್ಯಾನಂದಪರವಶರಾದೆವೈ.

ನೀತಿ : ಕಂದ || ವರಸಿದ್ಧ ಸಹಾಯಂಗಳ್ |
ನೆರೆದಿರ್ದೆಂ ಧೀರಬುದ್ಧಿಯಿಲ್ಲದರೊಳದೊಂ ||
ದಿರಲವನೋಳೆಲ್ಲಮೊದವ್ಗು |
ಮರಿಯಲ್ ಮಯಪುತ್ರಪುತ್ರಕರ ಚರಿತಂಬೊಲ್ || ೩ ||

# ೪ ನೆಯ ತರಂಗವು

ಈ ವಿಧವಾಗಿ ವಿಂಧ್ಯಾರಣ್ಯದಲ್ಲಿ ವರರುಚಿ ಕಾಣಭೂತಿಗೆ ನಡುವಣ ಕಥೆ ಮುಗಿಸಿ ಮರಳಿ ಪ್ರಕೃತವಿಷಯುವನಿಂತೆಂದು ಹೇಳುವನು : ಹೀಗೆ ವ್ಯಾಡೀಂದ್ರ ದತ್ತರೊಡನೆ ನಾನಲ್ಲಿ ನಿವಾಸಂಗೊಳುತ ಕ್ರಮವಾಗಿ ಬಾಲ್ಯದಲ್ಲಿಯೇ ಸಕಲವಿದ್ಯಾ ಪಾರಂಗತನಾದೆನು. ನಾವೊಂದು ದಿನದಲ್ಲಿ ಇಂದ್ರೋತ್ಸವವನ್ನು ನೋಡಹೋಗಿ ಪೂವಲ್ಲದ ಪೂಗಣೆಯ ನಂಬಿನಂತಿರುವ ಕನ್ನೆಯೊಬ್ಬಳನ್ನು ಕಂಡೆನು. ಈಕೆ ಯಾವ ಳೆಂದು ನಾನು ಕೇಳಲು ಉಪಕೋಶೆಯೆಂಬ ಉಪವರ್ಷನ ಮಗಳೆಂದು ಇಂದ್ರದತ್ತ ನೊರೆದನು. ಆಕೆಯೂ ಗೆಳತಿಯರಿಂದ ನನ್ನ ಸಂಗತಿ ತಿಳಿದುಕೊಂಡು ಅನುರಾಗ ಪೂರ್ಣವಾದ ದಿಟ್ಟಿಗಳಿಂದ ನನ್ನನೀಕ್ಷಿಸುತ ನನ್ನ ಮನವನೆಳೆದುಕೊಂಡು ಹೇಗೆಯೋ ಮನೆಗೆ ತೆರಳಿದಳು. ಕಾಮಬಾಣಂಗಳಿಗೆ ಗುರಿಯಾದ ನನ್ನ ಹೃದಯವು ತಲ್ಲಣಿಸಿತು. ಸರ್ವಾಂಗಸುಂದರಿಯಾದಾಕೆಯನೆ ಭಾವಿಸಿ, ಅಹಹ ! ಕಲಕಂಠಕಲವಾಣಿ, ಕಲ್ಹಾರದಳ ಪಾಣಿ, ಕನಕಕೋರಕನಾಸೆ, ಕರ್ಪೂರದರ ಹಾಸೆ, ಕಮಲರಿಪು ಸಮವದನೆ, ಕಮ್ರ, ದಾಡಿಮರದನೆ, ಕಚ್ಛಪಾಕೃತಿಚರಣೆ, ಕಲಿತಧರ್ಮಾಚರಣೆ, ಕಲಶವಕ್ಷೋಜಾತೆ, ಕನ್ಯಾತ್ವ ಪರಿಪೂತೆ, ಕಲಹಂಸಗಾಮಿನಿ, ಕಮನೀಯಭಾಮಿನಿ, ಕಡೆಗೆ ಮತ್ಕಾಮಿನೀ ಮಣಿಯೆಂದಿ ಗಾಗುವಳೊ ಎಂದಿಂತು ಬಣ್ಣಿಸುತೆಯಂದಿನಿರುಳಲ್ಲಿ ನಿದ್ದೆ ಬಾರದೆ ಕಡೆಯ ಜಾವದಲ್ಲಿ ಕೊಂಚ ನಿದ್ದೆ ಬಿದ್ದಿತು. ಅದರೊಳೊಂದು ಸ್ವಪ್ನ ಬಂದು, ಆ ಕನಸಿನಲ್ಲಿ ಧವಳವಸ್ತ್ರ ಧಾರಿಣಿಯಾದ ದೇವತೆ ಬಂದು "ಮಗನೇ ! ನಿನಗೆ ಉಪಕೋಶೆ ಮುನ್ನಿನ ಮಡದಿ. ಗುಣವತಿ. ನಿನ್ನನಲ್ಲದೆ ಬೇರೆನಲ್ಲನನೊಲ್ಲಳು. ಅದರಿಂದ ನೀನೀ ವಿಷಯದಲ್ಲಿ ಚಿಂತಿಸ ಬೇಡ. ನಾನು ನಿರಂತರವಾಗಿ ನಿನ್ನ ಮೈಯೊಳೆ ವಸಿಸುವ ಸರಸ್ವತಿಯೈ, ನಿನ್ನ ಕಳವಳವ ಕಂಡು ಸೈಸದೆ ಬಂದೆನ್ಯೆ." ಎಂದೆರೆದು ಮರೆಯಾದಳು. ಬಳಿಕ ನಾನೆಚ್ಚೆತ್ತು ಆ ನುಡಿವೆಣ್ಣನುಡಿಯನೆ ನಂಬಿ ಮೆಲ್ಲನೆ ಹೋಗಿ ಮನ್ಮನೋಹಾರಿಣಿಯ ಮನೆಯ ಬಳಿಯಣ ಮಾವಿನ ಮರದಡಿಯಲ್ಲಿ ಕುಳಿತುಕೊಂಡೆನು. ಆಗಳೆನ್ನ ಬಳಿಗೆ ಉಪ ಕೋಶೆಯ ಕೆಳದಿ ಬಂದು ನನ್ನಿಂದುಪಕೋಶೆಗುಂಟಾದ ಕಾಮತಾಪವಿಜೃಂಭಣೆಯನ್ನು ಬಣ್ಣಿಸಿದಳು. ಆ ಮೇಲೆಯಿಮ್ಮಡಿಸಿದ ಕಾವನ ಬೇಗೆಯುಳ್ಳವನಾದ ನಾನು ಆ ಸಖಿ ಯೊಡನೆ "ತಾಯ್ತಂದೆ ವಿರೀಯದೆ ಉಪಕೋಶೆಯನ್ನು ನಾನೆಂತು ಪರಿಗ್ರಹಿಸುವುದು ? ಅಪಕೀರ್ತಿಗಿಂತಲೂ ಮೃತ್ಯುವಾದರೂ ಮೇಲೆ. ಅದರಿಂದ ನಿನ್ನ ಸಖಿಯುಮನೋಭಾವವು ಆಕೆಯ ಜನರಿಗೆ ತಿಳಿದರೆ ಒಳ್ಳಿತಾಗುವುದು. ಹಾಗೆ ಮಾಡಿ ಎಲೌ, ಪುಣ್ಯವತಿಯರಿರಾ ! ನಿನ್ನ ಗೆಳತಿಯನ್ನೂ ನನ್ನನ್ನೂ ಬದುಕಿಸಿರಿ" ಎಂದು ಪ್ರಾರ್ಥಿಸಿದೆನು. ಒಡನೆಯಾ ಕೆಳದಿಯೆಯ್ದಿ ಉಪಕೋಶೆಯ ಮಾತೆಗರಿಕೆಗೆಯ್ದಳು. ಆಕೆಯ ಗಂಡನು ಪವರ್ಷ

ನಾಕೆಯಿಂದ ಸಂಗತಿಯನವಧಾರಿಸಿ ಅಣ್ಣನಾದ ವರ್ಷೋಪಾಧ್ಯಾಯರಿಗೆ ಬಿನ್ನವಿಸಿದನು. ಅವರೂ ಅದಕ್ಕೆ ಸಮ್ಮತಿಸಿದರು. ವಿವಾಹವು ನಿಶ್ಚಿತವಾಗುತಲೂ ವರ್ಷಾಚಾರ್ಯ ರಾಜ್ಞೆಯಂತೆ ವ್ಯಾಡಿ ಕೌಶಾಂಬಿಗೆ ಹೋಗಿ ನಮ್ಮ ತಾಯನ್ನು ಕರೆತಂದನು. ಒಳಿಕ ನಾನು ಯಥಾವಿಧಿಯಾಗಿ ಉಪಕೋಶೆಯ ಮದಿವೆನಿಂದು, ಅಲ್ಲಿಯೇ ಪ್ರೀತಿಯಾದ ಮಾತೆಯೊಡನೆಯೂ ಪ್ರೀತಿಯಾದ ಪತ್ನಿಯೊಡನೆಯೂ ಸುಖಿಯಾಗಿ ಗೃಹಿಯೆನಿಸಿರುತ್ತಿದ್ದೆನು.

## ಪಾಣಿನಿಯ ಕಥೆ

ಸಮನಂತರದಲ್ಲಿ ಕಾಲಕ್ರಮದಿಂದ ವರ್ಷೋಪಾಧ್ಯಾಯರಿಗೆ ಶಿಷ್ಯ ಸಮೂಹವು ಪ್ರಬಲವಾಯಿತು. ಆ ಗುಂಪಿನಲ್ಲಿ ಪಾಣಿನಿಯೆಂಬ ಮಹಾಜಡನೊಬ್ಬನಿದ್ದನು. ಶುಶ್ರೂಷೆಯನ್ನು ಸರಿಯಾಗಿ ಮಾಡದೆ ಮೈಗಳ್ಳನಾಗಿರಲು ವರ್ಷಭಾರ್ಯೆಯವನನ್ನು ಕಳುಹಿಸಿಬಿಟ್ಟಳು. ಅವನು ವಿದ್ಯಾರ್ಥಿಯಾಗಿ ಹಿಮಾಲಯಕ್ಕೆ ಹೋಗಿ ಕ್ರೂರತಪಸ್ಸಿನಿಂದ ಮಾರಾಂತಕನನ್ನು ಮೆಚ್ಚಿಸಿ, ಆ ದೇವದೇವಾನುಗ್ರಹದಿಂದ ಸರ್ವ ವಿದ್ಯಾನಿದಾನವಾದ ಒಂದು ಹೊಸ ವ್ಯಾಕರಣವನ್ನು ಪಡೆದು ಬಂದು ನನ್ನನೇ ವಾದಕ್ಕೆ ಕರೆದನು. ಏಳು ಪಗಲ್ಗಳಲ್ಲಿ ವಾದಿಸಿದೆವು. ಎಂಟನೆಯ ಹಗಲಲ್ಲಿ ಆತನನ್ನು ನಾನು ಗೆದ್ದೆನು. ಆಗಳಾಕಾಶದಲ್ಲಿ ಸಾನ್ನಿಧ್ಯಗೊಂಡ ಸಾಂಬಮೂರ್ತಿ ಘೋರವಾಗಿ ಹುಂಕಾರವನ್ನು ಮಾಡಿದನು. ಆದರಿಂದ ನಮ್ಮಯೈಂದ್ರವ್ಯಾಕರಣವು ಭೂಲೋಕದಲ್ಲಿ ನಷ್ಟವಾಯಿತು. ನಾವೆಲ್ಲರೂ ಪಾಣಿನಿಗೆ ಸೋತು ಮೂಢರಾಗಿ ಹೋದೆವು. ಆದರಿಂದ ನಾನು ಅತಿಖಿನ್ನನಾಗಿ ಕುಟುಂಬ ಭರಣಕ್ಕಾಗಿ ನನ್ನ ಹಣಗಳನ್ನು ಹಿರಣ್ಯಗುಪ್ತನೆಂಬ ವರ್ತಕನಿಗೊಪ್ಪಿಸಿ ಆ ಸಂಗತಿಯನುಪಕೋಶೆಗೆ ತಿಳಿಸಿ ನಿರಾಹಾರತಪದಿಂದ ಚಂದ್ರಶೇಖರಸ್ವಾಮಿಯನ್ನು ಮೆಚ್ಚಿಸಲು ಹಿಮಾಲಯಕ್ಕೆ ತೆರಳಿದೆನು.

## ಉಪಕೋಶೆಯ ಪಾತಿವ್ರತ್ಯವು

ಉಪಕೋಶೆಯೂ ನನ್ನ ಶ್ರೇಯಸ್ಸನೇ ಕಾಂಕ್ಷಿಸುವಳಾಗಿ ಪ್ರತಿನಿತ್ಯವೂ ಗಂಗಾಸ್ನಾನ ವ್ರತಗಳನಾಚರಿಸುತ್ತ ತನ್ನ ಮನೆಯಲ್ಲಿ ಇರುತ್ತಿದ್ದಳು. ಒಂದಾನೊಂದು ಸಮಯದಲ್ಲಿ ವಸಂತರ್ತುವಿನೊಳಗೆ ಉಪಕೋಶೆ ಪಾಂಡುಕ್ಷಾಮಮನೋಹರಾಂಗಿಯಾಗಿ ಬಿದಿಗೆಯ ಚಂದ್ರನಂತೆ ಜನರ ಕಂಗಳೊಳೆಲ್ಲ ತಾನೇ ಕಂಗೊಳಿಸುವಳಾಗಿ ಗಂಗಾಸ್ನಾನಕ್ಕೆ ಹೋಗುತ್ತಿರಲು ರಾಜಪುರೋಹಿತನೂ ದಂಡಾಧಿಕಾರಿ (ಕೊತ್ವಾಲ್) ಯೂ ಕುಮಾರಸಚಿವನೂ ನೋಡಿದೊಡನೆಯೇ ಅರಲಂಬನ ಉರವಣಿಗೆ ಗುರಿಯಾದರು. ಅಂದಾಕೆಯೇಕೆಯೋ ಸ್ನಾನದಲ್ಲಿಯೇ ಬಹಳ ಹೊತ್ತು ಕಳೆದು ಸಾಯಂಕಾಲಕ್ಕೆ ಮನೆಗೆ ಬರುತ್ತಿರಲು ಆಕೆಯನ್ನು ಕುಮಾರಸಚಿವನು ಬಲಾತ್ಕಾರದಿಂದ ತಡೆದನು. ಪ್ರತಿಭಾವತಿಯಾದುಪಕೋಶೆಯವನೊಡನಿಂತೆಂದಳು – "ನಲ್ಲನೇ ! ಬಲ್ಲೆಯಾ ? ಇದು ನಿನಗೆಷ್ಟಿಷ್ಟವೋ ನನಗಷ್ಟಿಷ್ಟವು. ಆದರೂ ನಾನು ಕುಲಸ್ತ್ರೀ, ನನ್ನ ಗಂಡನು

ದೇಶಾಂತರಕ್ಕೆ ಹೋಗಿರುವನು. ನಾನು ಹೀಗೆ ಹೇಗಿರಲಿ ? ನಮ್ಮನಾರಾದರೂ ನೋಡು ವರು. ಬಳಿಕ ನಮಗಿಬ್ಬರಿಗೂ ಕೇಡಾಗುವುದು. ಅದರಿಂದ ಊರಿನವರೆಲ್ಲರೂ ವಸಂತೋತ್ಸವಪರರಾಗಿರುವಲ್ಲಿ ನೀನು ನಾಳೆಯ ರಾತ್ರಿ ಮೊದಲ ಜಾವದೊಳಗೆ ನಮ್ಮ ಮನೆಗೆ ಬಾರ !" – ಎಂದು ಸಂಕೇತವುಸಿರಲು ಸರಿ, ಸರಿ, ಹಾಗೆಯೆಂದು ಅವನು ಬಿಟ್ಟು ನಡೆದನು. ಮತ್ತೆ ಕೆಲವಡಿಯಿಡುತಲೂ ರಾಜಪುರೋಹಿತನು ಬಂದು ನಿರೋಧಿಸಿದನು. ಆತನಿಗೂ ಆ ರಾತ್ರಿ ಎರಡನೆಯ ಯಾಮದಲ್ಲಿ ಸಂಕೇತವೊಪ್ಪಿಸಿ ತಪ್ಪಿಸಿಕೊಂಡು ಕಡು ಬೆದರಿ ನಡೆವಲ್ಲಿ ಕೋತ್ವಾಲನು ಬಂದು ಸತ್ವಾಧಿಕನೆಂದು ಆಕೆಗಡ್ಡಗಟ್ಟಿದನು. ಆ ಸತಿ ಯವನಿಗೆ ಮೂರನೆಯ ಜಾವದಲ್ಲಿ ಸಂಕೇತಕ್ಕೆ ಸಂಮತಿಗೊಳಿಸಿ ಅಪಾಯಗಳಿಂದುಳಿ ದರೂ ಮುಂದಣುಪಾಯವೇನೆಂದು ಭಯಕಂಪಿತೆಯಾಗಿ ರಯದಿಂದ ಮನೆಗೆ ಬಂದು, ತನ್ನ ಪರಿಚಾರಿಣಿಯರಿಗೆ ಮಾಡಬೇಕಾದ ಮಾಟಗಳನ್ನು ತಿಳಿಯಪಡಿಸಿದಳು. "ಪತಿ ದೇಶಾಂತರಗತನಾದ ಸತಿಗೆ ನೀರೆಯರ ಮೇಲೆ ಪೋರಿಪೋರಿ ಬರುವ ನೀಚರ ನೋಟಕ್ಕೆ ಗುರಿಯಾಗುವುದಕ್ಕಿಂತಲೂ ಮರಣವೇ ಮೇಲಲ್ಲವೆ ?" ಎಂದು ಪರಿಭಾವಿಸಿ ನನ್ನನೇ ಸಂಭಾವಿಸಿ ತನ್ನ ಸೌಂದರ್ಯಕ್ಕೆ ಖಿನ್ನೆಯಾಗುತ ನಿರಾಹಾರವಾಗಿಯೂ ರಾತ್ರಿ ಕಳೆ ದಳು. ಬಳಿಕ ಪ್ರಾತಃಕಾಲದಲ್ಲಿ ಉಪಕೋಶೆ ವಿಪ್ರಪೂಜೆಗಾಗಿ ಕೊಂಚಹಣ ಕೊಂಡು ಬಾರೆಂದು ತೋಳ್ತಿಯನ್ನು ಹಿರಣ್ಯಗುಪ್ತನ ಬಳಿಗೆ ಕಳುಹಿಸಿದಳು. ಅವನೂ ಬಂದು ಆಕೆಯೊಡನೆ ಏಕಾಂತದಲ್ಲಿ "ಓ ಕಾಂತೆಯೇ ! ನನಗೆ ನಿನ್ನ ಮೇಲೆ ಮನವಿದೆ, ನನ್ನ ಬಯಕೆ ನಡೆಯಿಸು, ನಿನ್ನ ಗಂಡನು ನನ್ನ ಬಳಿಯಿಟ್ಟ ಹಣಗಳನ್ನು ಕೊಡುವೆನು" ಎಂದು ಪೊಲ್ಲದಾಡಿದನು. ಆಸತಿಯದನಾಲಿಸಿ ನಿಜಪತಿಯವನ ಬಳಿಯಲ್ಲಿ ಹಣವಿಟ್ಟ ವಿಷಯದಲ್ಲಿ ಸಾಕ್ಷಿಗಳಿಲ್ಲದ ಸಂಗತಿಯನರಿತು ಹರದನು ದುರಾಲೋಚಕನಾಗಿರುವುದನ್ನೂ ಪರಿಭಾವಿಸಿ ಕೋಪಾತಾಪಗಳು ಹೊಸೆದೇರಲು ಅವನಿಗೂ ಆ ರಾತ್ರಿಯ ನಾಲ್ಕನೆಯ ಜಾವದಲ್ಲಿ ಸಂಕೇತವಾಡಿ ಮೆಲ್ಲನೆ ಕಳುಹಿದಳು. ಬಳಿಕಾಕೆಯಾ ಹಗಲಲ್ಲಿ ತನ್ನ ಪರಿ ಚಾರಿಕೆಯಿಂದ ಕುಂಡದಲ್ಲಿದ್ದ ಕಾಡಿಗೆಯನ್ನು ಬಹಳವಾಗಿ ತರಿಸಿ ಅದಕ್ಕೆ ಕಸ್ತೂರಿ ಮುಂತಾಗಿ ಪರಿಮಳಗಳನ್ನು ಬೆರಿಸಿ ಅದಕ್ಕೆ ಎಣ್ಣೆ ಸುರಿಸಿ ನೀಲಾಂಜನ ತೈಲವ ಮಾಡಿ ರಿಸಿ ಅದರಲ್ಲಿ ನಾಲ್ಕು ಕೋವಣದ ತುಂಡುಗಳನ್ನು ನೆನೆಯಿಸಿಟ್ಟು ಒಂದು ಗುಡಾಣದ ಪೆಟ್ಟಿಗೆಯನ್ನು ಸಿದ್ಧಗೊಳಿಸಿ ಅದರ ಬಾಕಲ ಮುಚ್ಚಿಯಗಳಿಬಿಗಿದು ಇವುಗಳೆಲ್ಲವನ್ನೂ ಒಂದು ಕತ್ತಲ ಮನೆಯಲ್ಲಿ ಸಿದ್ಧಪಡಿಸಿಕೊಂಡು ಆ ಚೇಟಿಯರಿಗೆ ಸೂಚನೆಗಳನ್ನು ಹೇಳಿಟ್ಟಳು.

ನೀಚಕಾಮುಕರಿಗೆ ಯೋಚನೆಯುಂಟೆ ? ಬಳಿಕಾವಸಂತೋತ್ಸವ ದಿನದಲ್ಲಿ ಕುಮಾರಸಚಿವನು ಮನೋಹರವೇಷಭೂಷಿತನಾಗಿ ಮೊದಲ ಜಾವದಲ್ಲೆಯ್ತಂದನು. ಗುಟ್ಟಾಗಿ ಒಳಪೊಕ್ಕವನೊಡನೆ ಉಪಕೋಶೆ "ನೀನು ಸ್ನಾನ ಮಾಡಿದ ಹೊರತು ನನ್ನ ನೋಂಕಲಾಗದು" ಎಂದು, ಆ ಮೂಢನದಕೊಪ್ಪಲು ಚೇಟಿಯರನ್ನು ಕರೆದೊಪ್ಪಿಸಿದಳು. ಅವರು ಕತ್ತಲೆ ಕೋಣೆಗೆ ಕರೆದೊಯ್ದು ನೆತ್ತಿಗೆ ಕಾಡಿಗೆಯೆಣ್ಣೆಯಿಟ್ಟು ಅವನ ವಸ್ತ್ರ

ಭರಣಾದಿಗಳನ್ನು ಸುಲಿದುಕೊಂಡು ಮಿಾಯಿಸೆಂದು ಕೌಪೀನವಿತ್ತು ಕಾಲುಗುರು ಮೊದಲು ತಲೆನವಿರವರೆಗೆ ಮೈಗೆಲ್ಲ ನಾಕಾಡಿಗೆ ಕಪ್ಪೆಣ್ಣೆಯುಜ್ಜಿ ಹಾಡುಗಳೊಡನೆ ತಾಳಗಳೊಡನೆ ತಲೆಯೊತ್ತುತಿದ್ದರು. ಅಷ್ಟರಲ್ಲಿಯೆರಡನೆಯ ಜಾವವಾಗಲು ಪುರೋಹಿತರಯ್ಯೆಂದರು. ಆಗಳಾಚೇಟಿಯರು "ಆಹಾ! ವರರುಚಿ ಭಟ್ಟಾರಕರ ಮಿತ್ರರು ಪುರೋಹಿತರಯ್ಯೆಂದಿರುವರು! ಏನು ಮಾಡುವುದು! ನೀನು ಇದರಲ್ಲಿ ಅಡಗಿರು" ಎಂದು ಹೆದರಿಸಿ ಆ ಎಣ್ಣೆಕಾಡಿಗೆಯ ಕೊಣ್ಣನನ್ನು ಮಹಾಗವಿಯಂತಿರುವ ದೊಡ್ಡ ಪೆಟ್ಟಿಗೆಯೊಳಕ್ಕೆ ಬಿಟ್ಟು ಬೀಗ ಬಿಗಿದರು. ಪುರೋಹಿತನನ್ನೂ ಸ್ನಾನನೆವದಿಂದ ಆ ಕತ್ತಲೆ ಕೋಣೆಗೆ ತಂದು ಹಾಗೆಯೇ ಬಟ್ಟೆಬರೆಗಳನೆಳಕೊಂಡು ಕೋವಣವಿಟ್ಟು ದೇಹನಾದ್ಯಂತ ನಾಮಸಿಯೆಣ್ಣೆ ಬಳಿದು ಹೊತ್ತಿಷ್ಟೆಂಬುದೂ ನೆತ್ತಿಗರಿಯದಂತೆ ತಮ್ಮ ಜಾಣನ್ನು ಕಾಣಿಸುತ್ತಿದ್ದರು. ಅಷ್ಟರಲ್ಲಿ ಮೂರನೆಯ ಜಾವದೊಳಗೆ ಕೋತ್ವಾಲನೂ ಬಂದನು. ಕುಮಾರಸಚಿವನೊಡನೆ ಪುರೋಹಿತನೂ ಸೇರಿಸಲ್ಪಟ್ಟು ಇದೆಲ್ಲಿ ಸಿಕ್ಕಿಕೊಂಡೆನೆಂದು ಒದ್ದಾಡುತ್ತಿದ್ದನು. ಕೋತ್ವಾಲನಿಗೆ ಕೋವಣವೂ ಕಾಡಿಗೆಯೆಣ್ಣೆಯೂ ಸಿದ್ಧವಾಯಿತು. ಅವನೂ ಆ ಭ್ಯಂಗಾನಂದಲ್ಲಿರುತ್ತಿದ್ದನು. ನಾಲ್ಕನೆಯ ಯಾಮವೂ ಬರಲು, ಹರದಹಿರಣ್ಯಗುಪ್ತನೂ ಕೊರಳುಗೊಟ್ಟನು. ತಲೆಯೊತ್ತುವ ತರುಣಿಯರು ತರಹರಿಸುತ್ತ ಕೊತ್ವಾಲನಿಗೆ "ಊರ ವರ್ತಕನೆಯ್ತರೆ ಬಾರ ಕೊತ್ವಾಲಿಲ್ಲಿಗೆ, ಮೋರೆ ತೋರಿಸಬೇಡ, ಪೆಟ್ಟಿಗೆ, ಗೇರಿ ತೂರಿಕೊಳ್ಳಿಗಳೇ" ಎಂದು ಹಾಡುತ್ತಲೇ ಪೆಟ್ಟಿಗೆಯಲ್ಲಿಳಿಸಿ ಆ ಮೂವರಾದ ಮೂಢಾತ್ಮರನ್ನೂ ಬಾಕಲು ಮುಚ್ಚಿ ಬೀಗಮುದ್ರೆಗಳಿಂದ ಭದ್ರಗೊಳಿಸಿದರು. ಅವರು ಆ ಪೆಟ್ಟಿಗೆಯಲ್ಲಿ ಮುಂದೆ ಬರಲುಳ್ಳ ಅಂಧಂತಮೋನರಕನಿವಾಸವನ್ನು ಇಂದಿನಿಂದ ಕಲಿವರೊ ಎಂಬಂತೆ ಕಗ್ಗತ್ತಲೆಯಲ್ಲಿ ಮುಗ್ಗಿ ನರಳುತ್ತಿದ್ದರು. ಒಬ್ಬರಿಗೊಬ್ಬರು ಒರಸಿಕೊಂಡರೂ ಬಾಯ್ದೆರೆಯದೆ ಆಯ್ತಾಯ್ದು ಕೊರಗಿದರು. ಬಳಿಕ ಉಪಕೋಶೆ ಬೆಳಕೇರಿಸಿ ವರ್ತಕನನ್ನು ಆ ಸ್ಥಳಕ್ಕೆ ಕರೆದೊಯ್ದು "ನನ್ನ ಗಂಡನು ನಿನ್ನ ಬಳಿಯಿಟ್ಟ ಹಣಗಳನ್ನು ಕೊಡುಯ್ಯಾ?" ಎಂದು ಕೇಳಿಕೊಂಡಳು. ಅದಕ್ಕಾಮೋಸಗಾರನು ನಾಲ್ದೆಸೆ ನೋಡಿ ಯಾರಿಲ್ಲವೆಂದುಕೊಂಡು "ಹೇಳಿದೆನಲ್ಲವೇ? ನಿನ್ನ ಪತಿ ನನ್ನ ಬಳಿಯಿಟ್ಟ ಧನವನ್ನು ತಪ್ಪದೆ ಕೊಡುವೆನು" ಎಂದು ನುಡಿದನು. ಒಡನೆಯೇ ಉಪಕೋಶೆ ಅವನ ಮಾತುಗಳನ್ನು ಆ ಪೆಟ್ಟಿಗೆಗೆ ಕೇಳಿಸುತ್ತ "ಎಲೈ ದೇವತೆಗಳಿರಾ! ಹಿರಣ್ಯಗುಪ್ತನ ಮಾತನ್ನು ಕೇಳಿದಿರಲ್ಲವೇ?" ಎಂದು ಸಾಕ್ಷ್ಯವಿಟ್ಟು, ದೀಪವಾರಿಸಿ ಚೇಟಿಯರಿಂದ ಇತರರಿಗೆ ನಡೆಯಿಸಿದಂತೆ ಅವನಿಗೂ ಅಭ್ಯಂಗಮಹೋತ್ಸವವನ್ನು ಮಾಡಿಸಿದಳು. ಅವರೂ ಬೆಳಗಾಗುವವರೆಗೂ ಅವನು ಬೇರೆಯೇನೂ ತೋರದೆ ಆನಂದಪರವಶನಾಗುವಂತೆಯೆಣ್ಣೆಯೊತ್ತುತ್ತ ಕರಿಕೋಡಿನಂತೆ ಬರಿಮೈಯಲ್ಲಿ ಅವನ ನಿಲ್ಲಿಸಿಕೊಂಡು "ದೇಹವೆಲ್ಲ ಕಾಡಿಗ, ಮೋಹವಾಯ್ತು ಕಾಡಿಗೆ, ಕರಿಯ ಕೋಡಗನೆನಿಸುವೆ, ಬಿರದೆ ಬೀದಿಗ ಚರಿಸುವೆ, ಸೂರ್ಯನುದಯವಾಯಿತು, ಕಾರ್ಯವೆಲ್ಲಿ ಹೋಯಿತು? ಖೂಳನಿಲ್ಲಿ ನಿಲ್ಲದೆ, ಏಳು ಹೋಗು ಮೆಲ್ಲನೆ" ಎಂದು ಹಾಡುತ್ತ ಮುಂದಲಿಸಿ ಕಳುಹಿದರೂ ಅವನು ಅಲ್ಲಿಂದ ಹೋಗದೆ ಬಾಯ್ಬಿಡಿಕನಾಗಿ ಭಂಡತನಕ್ಕೆ

ಬರಲು ಕೊರಳಿಗಸ್ಥಚಂದ್ರಪ್ರಯೋಗ ಮಾಡಿ ಬೀದಿಗೆ ತಳ್ಳಿ, ಬಾಕಲು ಮುಚ್ಚಿಕೊಂಡರು. ಬಳಿಕ ಮೈಯಿಲ್ಲ ಕಪ್ಪೆಣ್ಣೆ ಬಳಿದುಕೊಂಡ ಉಗೋಟಿರಾಯನು ಅಡಿಗಡಿಗೂ ಎಲ್ಲಿಗೂ ಹೋಗಲೀಸದೆ ನಾಯ್ಗಳು ತಡೆಯಲು, ಇವನನ್ನು ನೋಡಿದವರು ಕೆಲವರು ಭೂತವೋ ಪ್ರೇತವೋ ಪಿಶಾಚವೋ ಎಂದು ಪಲಾಯಿತರಾಗಿ ಯಿಡವಿ ತಡವಿ ಮನೆಗೆ ಸೇರಿ ಜ್ವರತಪ್ತರಾಗುವಿಕೆ, ಮತ್ತೆ ಕೆಲವರು ಹತ್ತಿರಕೆ ಬಂದು ಇಂತಹವನೆಂದು ಮಂತಣದರಿತು ಬಗೆಬಗೆಯಾಗಿ ನಗೆಸರಗೊಳಿಸಿ ಗುಲ್ಲೆಬ್ಬಿಸುವಿಕೆ, ಇವನೊಡನೆ ಎಳೆಹುಡುಗರೂ ತುಂಟರೂ ಗುಂಪು ಸೇರಿ ಎಲ್ಲರಿಗೂ ಇವನು ಹಿರಣ್ಯಗುಪ್ತನು ಈ ಗತಿಗಳಿದನು ಬನ್ನಿರಣ್ಣಾ ಬನ್ನಿರಿ ನೋಡಿರಣ್ಣಾ ನೋಡಿರಿ ಎಂದೆಲ್ಲರನ್ನೂ ಕೂಗುತ್ತ ಕೂಡ ಬರುವಿಕೆ, ಇವೆಲ್ಲವನರಿತು ಕಡೆಗೆ ಹೇಗೆಂಯೋ ಹಿರಣ್ಯಗುಪ್ತನು ಮಾನಂಗಳನ್ನು ತೊರೆತು ಪ್ರಾಣಂಗಳೊಡನೆ ಗುಟ್ಟು ರಟ್ಟಾಗಿ ಹಟ್ಟಿಗೆ ಬಂದನು. ಬಡವಂದವರು ತಿಳಿಸಲು ಮನೆಯವರಿಗೆ ಯಜಮಾನನೆಂಬುದು ನಿಜವಾಯಿತು. ಧನಿಕನೇನು ಮಾಡಿ ಬಂದರೂ ಸೇವಕರು ತೊರೆಯಲಾಗುವುದೇ? ಪರಿಚಾರಿಕೆಯರು ಮೈಯುಜ್ಜಿ ಜಲಕವಾಡಿಸುವಲ್ಲಿ ಇವನು ತಲೆ ಬಾಗಿಸಿಯೇ ಇದ್ದನು. ಅವರಲ್ಲವರಿಗೆ ನಗುಹಿಡಿಯಲಾರದೆ "ನಗುವೇಕೆ? ನಗುವೇಕೆ?" ಎಂಬೊಬ್ಬರನೊಬ್ಬರಾಕ್ಷೇಪಿಸಿಕೊಳ್ಳುತ, ತಾವು ಮಟ್ಟಿಗೆ ಏನೋ ನೆವವಿಟ್ಟು ಹೊರಗೆಹೋಗಿ ನೆಲದೆ ಕುಕ್ಕರಿಸಿ ಹೊಟ್ಟೆಹೊಡೆದಂತೆ ಹೊರಹೊರಳಿ ನಕ್ಕುನಕ್ಕು ಮರಳಿ ತಮ್ಮ ಕೆಲಸಗಳಲ್ಲಿ ನಡೆದರೂ ಹಿರಣ್ಯಗುಪ್ತನು ತಾನಾಕಡೆಗೇನದೆಂದುಸಿರಲಿಲ್ಲ.

ಉಪಕೋಶೆ ಚೇಟಿಯೊಬ್ಬಳೊಡನೆ ಹಿರಿಯರಿಗೆ ಹೇಳದೆಯೆ ಅಂದಿನುದಯದಲ್ಲಿ ನಂದಮಹಾರಾಜನ ನ್ಯಾಯಾಸ್ಥಾನಕ್ಕೆ ಹೋಗಿ ಅಲ್ಲಿ ಮಾರಾಯನೊಡನೆ ತಾನಾಗಿ "ಹಿರಣ್ಯಗುಪ್ತನೆಂಬ ವರ್ತಕನು ತನ್ನ ಬಳಿಯಲ್ಲಿ ನನ್ನ ಗಂಡನು ಭದ್ರಪಡಿಸಿದ ಧನವನ್ನು ಅಪಹರಿಸಿಕೊಂಡಿರುವನು" ಎಂದು ಬಿನ್ನವಿಸಿದಳು. ಒಡನೆಯೇ ಅರಸನು ಹಿರಣ್ಯಗುಪ್ತನನ್ನು ಕರೆಯಿಸಿ ವಿಚಾರಿಸಿದನು. ಆತನು "ಈಕೆಯ ಸೊತ್ತೇನೂ ನನ್ನಲ್ಲಿಲ್ಲವು" ಎಂದನು. ಆಗಳಾ ಸತಿ "ಪ್ರಭೂತ್ತಮನೇ! ನನಗೆ ಸಾಕ್ಷಿಗಳಿರುವರು. ನನ್ನ ಗಂಡನು ದೇಶಾಂತರಕ್ಕೆ ಹೋಗುವಾಗ ನಮ್ಮ ಗೃಹದೇವತೆಯರನ್ನು ಗೂಡು ಪೆಟ್ಟಿಗೆಯಲ್ಲಿ ಸ್ಥಾಪಿಸಿ ಹೋಗಿರುವನು. ಅವರಿದಿರಾಗಿ ಇವನು ತಾನಾಗಿ ನನ್ನಧನಗಳುಂಟೆಂದು ಒಪ್ಪಿಕೊಂಡಿರುವನು. ಆ ದೊಡ್ಡ ಪೆಟ್ಟಿಗೆಯನ್ನು ಇಲ್ಲಿಗೇ ತರಿಸಿ ದೇವತೆಗಳನ್ನು ತಾವೆ ಬೆಸಗೊಳ್ಳಿರಿ" ಎಂದು ಮೊರೆಯಿಟ್ಟಳು. ಅರಸು ಅದನಾಲಿಸಿ ಅಚ್ಚರಿಗೊಂಡು ಅದನ್ನು ಕೊಂಡುಬನ್ನಿರೆಂದು ಭಟರಿಗೆ ಅಪ್ಪಣೆಯಿತ್ತನು. ಅವರೂ ಅತಿ ಶೀಘ್ರವಾಗಿ ಅನೇಕರಾಗಿ ಸೇರಿ ಆ ಪೆಟ್ಟಿಗೆಯನ್ನು ತಂದು ಆ ಸ್ಥಾನದಲ್ಲಿಟ್ಟರು. ಉಪಕೋಶೆಯಾವೇಳೆಯಲ್ಲಿ "ದೇವತೆಗಳಿರಾ! ಈ ವರ್ತಕನು ಏನೆಂದೊಪ್ಪಿಕೊಂಡನೋ ಆ ಸಂಗತಿಯನ್ನು ಸತ್ಯವಾಗಿ ಹೇಳಿರಿ. ನೀವು ಮನೆಗೆ ಹೋಗಬಹುದು. ಸತ್ಯವೊರೆಯದಿದ್ದರೆ ನಿಮ್ಮನ್ನು ಸುಟ್ಟು ಬೂದಿಯಾದರೂ ಮಾಡುವೆನು. ಈ ಸಭೆಯಲ್ಲಿ ಬಾಕಲು ತೆರೆದು ನಿಮ್ಮನ್ನು ಭ್ರಷ್ಟರನ್ನಾಗಿಯಾದರೂ ಅಟ್ಟುವೆನು" ಎಂದು ನುಡಿಯಲು; ಆ ನುಡಿಗೇಳಿ ಗುಂಡಿಗೆ

ಯೊಡೆಯಲು ಒಳಗಿದ್ದ ಪುರೋಹಿತಾದಿದೇವತೆಗಳು "ಸತ್ಯವು. ಸತ್ಯವು ! ಈ ವರ್ತಕನು ನಮ್ಮಿದಿರಿಗೆ ಈಕೆಯ ಹಣಗಳನ್ನು ಒಪ್ಪಿಕೊಂಡಿರುವನು" ಎಂದು ಘೋಷಿಸಿದರು. ಅದಕ್ಕೆ ವರ್ತಕನು ನಿರುತ್ತರನಾಗಿ ಬೆರಗುವಟ್ಟನು. ಕ್ಷಿತಿಪನು ಅತಿಕುತೂಹಲದಿಂದ ಉಪಕೋಶೆಯನ್ನು ಕೃಪೆಮಾಡಿ ಪೆಟ್ಟಿಗೆಯನ್ನು ತೆರೆಯೆಂದು ತೆರೆಯಿಸಿದನು. ಆ ಮೂವರು ಕಗ್ಗತ್ತಲೆಯ ಕಪ್ಪಾಳುಗಳಂತೆ ಅದರಿಂದ ಹೊರಗೆ ಬಂದರು. ಅವರನ್ನು ಅರಸನೂ ಅಮಾತ್ಯನೂ ಅತಿಪ್ರಯಾಸದಿಂದ ಅರಸಿದವರಾಗಿ, ಇವರ ಸುದ್ದಿಯೇನೆಂದು ಆ ಹದಿಬದೆಯನ್ನು ಹಾರೈಸಿ ಕೇಳಿದರು. ಆಕೆಯೂ ಆ ನಿರ್ಭಾಗ್ಯರ ನೀಚವರ್ತನವನ್ನು ನಿರೂಪಿಸಿದಳು. "ಕುಲಕಾಂತಾಸಚ್ಚರಿತ್ರಂಸಲಿನೋಡಲಚಂತ್ಕಮ್ಯೈ" ಎಂದು ಸಭಿಕರೆಲ್ಲರೂ ಸತೀಮಣಿಯಾದ ಉಪಕೋಶೆಯನ್ನು ಅಭಿನಂದಿಸುತಭಿನಂದಿಸಿದರು. ನಂದ ಮಹಾರಾಜನು ಆ ಪರಸ್ತ್ರೀಕಾಮುಕರನ್ನು ಅವರ ಸರ್ವಸ್ವವನಪಹರಿಸಿಕೊಂಡು ದೇಶಭ್ರಷ್ಟರನ್ನಾಗಿ ಹೊರಡಿಸಿದನು. ದುರಾಚಾರದಿಂದಾರಿಗೆ ಕೇಡುಂಟಾಗದು ! ರಾಯನುಪಕೋಶೆಯನ್ನು ತಂಗೆಯೆಂದು ಸಂಭಾವಿಸಿ ಬಹುಧನಗಳಿಂದ ಸಂಮಾನಿಸಿ ಕಳುಹಿಸಿದನು. ಆ ಪತಿವ್ರತಾವೃತ್ತಾಂತದಿಂದ ವರ್ಷೋಪವರ್ಷರು ಅಮಂದಾನಂದಿ ಆಕೆಯನಾದರಿಸಿದರು. ನಾಗರಿಕರೆಲ್ಲರೂ ಆಶ್ಚರ್ಯಾನಂದವಾರಿಧಿಯಲ್ಲಿ ಮುಳುಗಾಡಿದರು, ಎಂದು ವರರುಚಿ ಕಾಣಭೂತಿಯೊಡನೆ ಮತ್ತಿಂತೆಂದನು :

## ವರರುಚಿ ವಾರ್ತಿಕಾಚಾರ್ಯನಾಗುವಿಕೆ

ನಾನಷ್ಟರಲ್ಲಿ ಮಂಜುಬೆಟ್ಟದೊಳಗೆ ತೀವ್ರತಪವಾಚರಿಸಿ ವರದಾಯಕನಾದ ಪರಮೇಶ್ವರನನ್ನು ಆರಾಧಿಸಿದೆನು. ಆ ಶಂಕರನು ನನಗೆ ಆ ಪಾಣಿನೀಯಶಾಸ್ತ್ರವನೇ ಅನುಗ್ರಹಿಸಿದನು. ನಾನೂ ತದಿಚ್ಛಾನುಗ್ರಹದಿಂದ ಅದನ್ನೇ ಪೂರ್ತಿಗೈದೆನು. (ಅದೇ ವರರುಚಿವಾರ್ತಿಕಂಗಳು). ಬಳಿಕ ನಾನು ಮಾರ್ಗಾಯಾಸವೇನೂ ಇಲ್ಲದೆ ಸಾಂಬಶಂಕರಸ್ವಾಮಿಯ ಪ್ರಸಾದಾನುಗ್ರಹಾನಂದದಿಂದ ತುಂಬಿತುಳ್ಕುತೆ ಬಂದು ಮನೆಗೆ ಸೇರಿದೆನು. ಹೀಗೆ ಬಂದು ತಾಯಿಗೂ ವರ್ಷೋಪಾಧ್ಯಾಯರಿಗೂ ಪೊಡಮಟ್ಟು, ಆ ಉಪಕೋಶೆಯ ಅತ್ಯಾಶ್ಚರ್ಯ ವೃತ್ತಾಂತವನ್ನು ಆಲಿಸಿದುದರಿಂದ ಆಶೆಯಲ್ಲಿ ಸಹಜಾನುರಾಗವನ್ನು ಆಶ್ಚಾರ್ಯಾನಂದಗಳು ಅತ್ಯಂತಾಭಿವೃದ್ಧಿಗೊಳಿಸಿತು. ವರ್ಷೋಪಾಧ್ಯಾಯರು ಆ ಹೊಸ ವ್ಯಾಕರಣವನ್ನು ನನ್ನಿಂದ ಕೇಳಲೆಳಸಿದರಾದರೂ ಕುಮಾರಸ್ವಾಮಿಯೇ ಅವರಿಗದನ್ನು ನಿರೂಪಿಸಿದನು. ಹೀಗಿರುವಲ್ಲಿ :

## ಇಂದ್ರದತ್ತನು ಪರಕಾಯ ಪ್ರವೇಶ ಮಾಡುವಿಕೆ

ವ್ಯಾಡೀಂದ್ರದತ್ತರು ಗುರುದಕ್ಷಿಣೆಯೇನೆಂದು ಬೇಡಿಬೆಸಗೊಳ್ಳುವಲ್ಲಿ ವರ್ಷೋಪಾಧ್ಯಾಯರು ಕೋಟಿ (ವರಹಾ) ಸುವರ್ಣಗಳನ್ನು ಕೇಳಿದರು. ಅವರೂ ಗುರುವಾಕ್ಯಕ್ಕಂಗೀಕರಿಸಿ ನನ್ನೊಡನೆ "ಮಿತ್ರನೇ ! ಬಾರ ! ಗುರುದಕ್ಷಿಣೆ ಕೊಡೆಂದು ನಂದರಾಯನಲ್ಲಿ ಯಾಚಿಸುವೆವು. ಮತ್ತೆಲ್ಲಿಯೂ ನಮಗಿಷ್ಟು ಬಂಗಾರವು ದೊರೆಯದು.

ಅವನಿಗೆ ೯೯ ಕೋಟಿದ್ರವ್ಯವಿದೆಯಷ್ಟೆ; ಆತನು ಉಪಕೋಶೆಯನ್ನು ಧರ್ಮದ ತಂಗೆಯನ್ನಾಗಿ ಹೆಸರಿಟ್ಟಿರುವನಲ್ಲವೆ ? ಅದರಿಂದ ನೀನವನಿಗೆ ಭಾವನೈದುನನಲ್ಲವೆ ? ನಿನ್ನ ಮೂಲಕವಾಗಿ ನಮಗೆ ಬೇಡಿದಷ್ಟು ಧನವು ದೊರೆವುದು." ಎಂದಾಲೋಚಿಸಲು, ಆಲೋಚಿತವೆಂದು ಹಾಗೆಯೇ ಎಲ್ಲರೂ ಸಮ್ಮತಿಸಿ ನಾವು ಮೂವರೂ ಅಯೋಧ್ಯಾಪುರದೊಳಗಣ ನಂದ ಕಟಕಕ್ಕೆ ನಡೆದೆವು. ಆ ರಾಯನೂರಿಗೆ ನಾವಡಿಯಿಟ್ಟೆವು, ಜವರಾಯನೂರಿಗೆ ಆತನಡಿಯಿಟ್ಟನು. ಲೋಕದ ಕೋಲಾಹಲವು ನಮಗೆ ಸಂಕಟಕರವಾಯಿತು. ಆಗ ಯೋಗಸಿದ್ಧನಾದ ಇಂದ್ರದತ್ತನು "ಈ ಪೃಥ್ವೀಶನ ದೇಹದಲ್ಲಿ ನಾನು ಪ್ರವೇಶಿಸುವೆನು. ನನ್ನ ಬಳಿಗೆ ವರರುಚಿ ಬಂದು ಯಾಚಿಸಬೇಕು. ಬಯಸಿದಷ್ಟು ಹಣವೀವೆನು. ನಾನು ಮರಳಿ ಬರುವ ವರೆಗೂ ನನ್ನೊಡಲನೀ ವ್ಯಾಡಿ ಸಲಹುತ್ತಿರುವುದು." ಎಂದು ನುಡಿದು ಇಂದ್ರದತ್ತನು ನಂದರಾಜನ ದೇಹದಲ್ಲಿ ಪ್ರವೇಶಿಸಿದನು. ಅರಸನು ಮರಳಿ ಬದುಕಲು ರಾಜ್ಯದಲ್ಲಿ ಮಹೋತ್ಸವ ರಭಸವು ರಾರಾಜಿಸಿತು. ವ್ಯಾಡಿ ಹಾಳು ದೇಗುಲದಲ್ಲಿ ದೇಹವನ್ನು ರಕ್ಷಿಸಿಕೊಂಡಿರಲು ನಾನು ಹೋಗಿ ರಾಜಾಸ್ಥಾನದಲ್ಲಿ ಯೋಗನಂದನನನ್ನು ಗುರುದಕ್ಷಿಣೆಯನ್ನು ಯಾಚಿಸಿದೆನು. ಆ ಸಮಯದಲ್ಲಿ ನನ್ನಾಶಿಷಗಳನಾಂತವನಾದ ಯೋಗನಂದನೂ ಸಹಜನಂದನ ಮಂತ್ರಿಯಾದ ಶಕಟಾಲನನ್ನು ಕೋಟಿಹಾಟಕವನ್ನು ಕೊಡಿಸೆನಗೆಂದು ಆಜ್ಞಾಪಿಸಿದನು. ಸತ್ತವನು ಬದುಕುವಿಕೆ, ಒಡನೆಯೇ ಬೇಡುವನು ಬರುವಿಕೆ, ಬಂದವನಿಗೆ ಬಯಸಿದಂತೆ ಕೊಡುವಿಕೆ, ಇವುಗಳಿಂದ ನಮ್ಮ ವೃತ್ತಾಂತವನ್ನು ಅವನು ಊಹಿಸಿಬಿಟ್ಟನು. ಮತಿಮಂತರರಿಯದ ಮಾಟವೊಂದುಂಟೇ ? ಮತ್ತವನು ಇತ್ತೆನಿದೊ ಭೂಪೋತ್ತಮ ! ಎಂದು, ತನ್ನೊಳಗೆ "ನಂದನ ಮಗನಾದರೋ ಇನ್ನೂ ನಂದನನು. ರಾಜ್ಯಕ್ಕಾದರೋ ಹಗೆಗಳು ಹಲವರಿರುವರು. ಅದರಿಂದ ಎಂತಾದರೇನು ? ಇಂತೀ ಮೆಯ್ಯ ನೊಯ್ಯನೆ ಸಲಹುವೆನು." ಎಂದು ನಿಶ್ಚಯಿಸಿ ಒಡನೆಯೇ ಎಲ್ಲಿ ಯಾವ ಹೆಣವಿದ್ದರೂ ಸುಡಿಸುತ್ತ ಬಂದನು. ಚಾರರು ಹಾಳು ದೇಗುಲದಲ್ಲಿ ಇಂದ್ರದತ್ತ ಶರೀರವನ್ನು ಕಂಡು ವ್ಯಾಡಿಯನೋಡಿಸಿ ಅದನ್ನು ಸುಟ್ಟರು. ಅಷ್ಟರಲ್ಲಿ ಕೋಟಿ ಸುವರ್ಣವಿನ್ನೂ ಕೊಟ್ಟಿಯ ಇಲ್ಲವೆಯೆಂದು ಎಂದಾತುರಗೊಳಿಸುವ ಯೋಗನಂದನನ್ನು ಶಕಟಾಲನು "ಜೀಯ ! ಪರಿಜನರೆಲ್ಲರೂ ಉತ್ಸವದಲ್ಲಿ ಮೈಯರಿಯದಿರುವರು, ಕ್ಷಣ ನಿರೀಕ್ಷಣದಲ್ಲಿ ಈ ವಿಪ್ರನಿಗೆ ಕೋಟಿಹೇಮವ ಕೊಡಿಸುವೆ"ನೆಂದು ಸಮಾಧಾನಗೊಳಿಸುತ್ತಿದ್ದನು. ಅಷ್ಟರಲ್ಲಿ ವ್ಯಾಡಿ ಬಂದು ಯೋಗನಂದನ ಮುಂದೆ "ಸಲಹು, ಸಲಹು, ಸರ್ವಂಸಹಾಧಿಪಾ ! ನಿನ್ನಭ್ಯುದಯದಲ್ಲಿ ರಾಜಭಟರು ಯೋಗಸ್ಥಿತನಾದ ಬ್ರಾಹ್ಮಣನನ್ನು ಅನಾಥಶವವೆಂದು ಬಲಾತ್ಕಾರಗೊಳಿಸಿ ದಹಿಸಿದರು." ಎಂದು ಮೊರೆಯಿಟ್ಟನು. ಆ ಮಾತು ಕಿವಿಗೆ ಪುಗುತಲೂ ದುಃಖವೇಗದಿಂದ ಯೋಗನಂದನಿಗೆ ಒರೆಯಲಾಗದ ದುರವಸ್ಥೆಯೊದಗಿತು. ಸ್ವದೇಹದ ದಾಹದಿಂದ ಬೇರೆ ದಾರಿದೋರದೆ ಆ ಶರೀರದಲ್ಲಿಯೇ ಇಂದ್ರದತ್ತನು ಸ್ಥಿರಪಡಲು ಮಹಾಮತಿಯಾದ ಶಕಟಾಲನು ನನಗೆ ಸುವರ್ಣ ಕೋಟಿಯನ್ನು ಕೊಟ್ಟುಬಿಟ್ಟನು.

## ಶಕಟಾಲನನಂಧಕೂಪದಲ್ಲಿ ತಳ್ಳುವಿಕೆ

ಹೀಗಿರುವಲ್ಲಿ ಯೋಗನಂದನು ಏಕಾಂತದೊಳಗೆ ವ್ಯಾಡಿಯೊಡನೆ "ಅಣ್ಣಾ! ಸ್ಥಿರವಾದರೂ ಈ ಸಿರಿಯಿಂದ ನನಗೇನು? ಬ್ರಾಹ್ಮಣ ಜನ್ಮವೆತ್ತಿದರೂ ಶೂದ್ರನಾಗಿ ಹೋದೆನು." ಎಂದು ದುಃಖಿಸಿದನು. ಅದಕ್ಕೆ ವ್ಯಾಡಿ ಸಮುಚಿತ ಸಮಾಧಾನಗಳಿಂದ ಶಾಂತನನ್ನಾಗಿಸಿ "ತಮ್ಮನೇ! ಶಕಟಾಲನು ನಿನ್ನನ್ನು ಕಂಡು ಹಿಡಿದನು. ಅದರಿಂದ ಪ್ರಕೃತಕಾರ್ಯವನಾಲೋಚಿಸು. ಈತನು ಮಹಾಮಂತ್ರಿ, ಸುಲಭವಾಗಿಯೇ ತ್ವರಿತದಲ್ಲಿ ನಿನ್ನಂ ನಿರ್ಮೂಲಿಸಿ ಹಿಂದಣ ನಂದನಿಗೆ ಮಗನಾದ ಚಂದ್ರಗುಪ್ತನನ್ನು ರಾಜ್ಯಪಟ್ಟದಿಂದಿಡುವನು. ಅದಕ್ಕಾಗಿ ವರರುಚಿಯನ್ನು ಪ್ರಧಾನಮಂತ್ರಿಯನ್ನಾಗಿ ನಿಯಮಿಸಿ ಕೊಳ್ಳೈ, ಆತನ ಮಹಿಮೆಯಿಂದ ನಿನಗೆ ರಾಜ್ಯವು ಸ್ಥಿರವಾಗಿರುವುದು." ಹೀಗೆ ಹೇಳಿ ವ್ಯಾಡಿ ಗುರುದಕ್ಷಿಣೆ ಕೊಡಲು ಹೊರಟುಹೋದನು. ಇಲ್ಲಿ ಯೋಗನಂದನು ನನಗೆ ಮುಖ್ಯಾಮಾತ್ಯಾಧಿಕಾರವಿತ್ತನು. ನಾನೂ ಅವನಿಗೆ "ನಿನಗೆ ಬ್ರಾಹ್ಮಣ್ಯವು ಹೋದರೂ ಶಕಟಾಲನಧಿಕಾರದಲ್ಲಿರುವ ವರೆಗೂ ರಾಜ್ಯವು ಸ್ಥಿರವಲ್ಲವಣ್ಣಾ! ಅದರಿಂದ ಉಪಾಯವಾಗಿವನಿಗೆ ಅಪಾಯವನಾಲೋಚಿಸು" ಎಂದು ಯೋಚನೆ ಹೇಳಿದನು. ಬಳಿಕ ಯೋಗನಂದನು ಶಕಟಾಲನ ಮೇಲೆ ಇವನು ಬದುಕಿದ್ದ ಬ್ರಾಹ್ಮಣನನ್ನು ಕೊಲ್ಲಿಸಿದನೆಂದು ತಪ್ಪು ಹೊರಿಸಿ, ಅವನನ್ನೂ ಅವನ ನೂರು ಮಂದಿ ಮಕ್ಕಳನ್ನೂ ಒಂದು ಆಳವಾದ ಕಗ್ಗತ್ತಲೆಯ ಹಾಳು ಬಾವಿಗೆ ತಳ್ಳಿಸಿ, ಅವರೆಲ್ಲರಿಗೂ ದಿನಕ್ಕೆ ಒಂದು ಸ್ರಾವೆ ಹಿಟ್ಟನ್ನೂ ಒಂದು ಸ್ರಾವೆ ನೀರನ್ನೂ ಜೀವನಾಧಾರವಾಗಿ ಒಳಕ್ಕೆಯಿಳಿಯಿಸುವಂತೆ ಕಟ್ಟಳೆಗೆಯ್ದನು. ಆಗಳಾ ಶಕಟಾಲನು ಮಕ್ಕಳೊಡನೆ "ಹುಡುಗರಿರಾ! ಈ ಹಿಟ್ಟು ಒಬ್ಬನಿಗೇ ಸಾಲದು. ಅನೇಕರ ಸುದ್ದಿಯಿನ್ನೇಕೆ? ಅದರಿಂದ ನಿಮ್ಮಲ್ಲಿ ಯೋಗನಂದನ ಮೇಲೆ ಹಗೆ ತೀರಿಸಿ ಕೊಳ್ಳುವನಾವನೋ ಅವನೊಬ್ಬನೇ ಈ ಆಹಾರವನ್ನು ಕೈಕೊಂಡು ಜೀವಿಸುವದು" ಎಂದು ವಿಧಿಸಿದನು. ಆ ಕುಮಾರರೆಲ್ಲರೂ "ಅಪ್ಪಾ! ನೀನೇ ಅದಕ್ಕೆ ಸಮರ್ಥನು, ನೀನೇ ಇವನ್ನು ಕೈಕೊಂಡು ಜೀವಿಸುವನಾಗು" ಎಂದು ನಿರಾಶೆ ನುಡಿದರು. ಅಹಾ! ಧೀರರಿಗೆ ಹರಣಕ್ಕಿಂತಲೂ ಹಗೆ ತೀರಿಸಿಕೊಳ್ಳುವದು ಎಷ್ಟು ಹರ್ಷವೋ! ಶಕಟಾಲನು ಪ್ರತಿನಿತ್ಯವೂ ಆ ಹಿಟ್ಟನುಂಡು ಆ ನೀರ ಕುಡಿದು ಶತ್ರುನಾಶೇಚ್ಛೆಯಿಂದ ತಾನೊಬ್ಬನೇ ಬದುಕಿದ್ದನು. ಮತ್ತವನು ಆ ಅಂಧಕೂಪದಲ್ಲಿ ತನ್ನಲ್ಲಿ ತಾನೇ "ಅಕ್ಕಟಾ! ತನ್ನೊಡೆಯನ ಮನವರಿಯದೆ ನಂಬಿಕೆಗೊಳ್ಳದೆ ಯಥೇಚ್ಛವಾಗಿ ಸಂಚರಿಸುವನಿಗೆ ಎಂದಿಗೂ ಕ್ಷೇಮವಾಗದು." ಎಂದು ಅನುತಪಿಸುತ್ತ, ಕ್ರಮಕ್ರಮವಾಗಿ ನೂರು ಮಕ್ಕಳೂ ತನ್ನಿದಿರಾಗಿಯೇ ಮಡಿಯಲು ತಾನು ಮಾತ್ರವವರ ಎಲುವುಗಳ ನಡುವೆ ಬದುಕಿದ್ದನು.

ಇತ್ತಲಾ ಯೋಗನಂದನೂ ಪ್ರಭುಪಟ್ಟದಲ್ಲಿ ಸ್ಥಿರನಾದನು. ಅಷ್ಟರೊಳಗೆ ವ್ಯಾಡಿ ಗುರುದಕ್ಷಿಣೆಯಿತ್ತು ಬಂದು, "ನಿನಗೆ ರಾಜ್ಯವು ಚಿರಕಾಲವಿರುವುದು" ಎಂದು

ಹರಸಿ, ತಪಸ್ಸಿಗೆ ನಡೆವೆನೆಂದು ತಮ್ಮನಿಗೆ ಹೇಳಿದನು. ಆಗಳಾ ಯೋಗನಂದನ ಕೊರಳೊಣಗಿ ನೆರೆ ಕಂಬನಿಸುರಿಸುತ "ಅಣ್ಣಾ ! ನೀನೇಕೆ ಹೋಗುವುದು ? ನನ್ನ ರಾಜ್ಯದಲ್ಲಿ ನಿನ್ನಿಚ್ಛೆ ಬಂದಂತೆ ಸಕಲ ಭೋಗಗಳನ್ನೂ ಸಲಿಸಿಕೊಂಡು ಸುಖವಾಗಿರಣ್ಣಾ ! " ಎಂದು ಬಹಳವಾಗಿ ಬೇಡಿಕೊಂಡನು. ಅದಕ್ಕೆ ವ್ಯಾಡಿ "ರಾಜ್ಯವೂ ಈ ದೇಹವೂ ಕ್ಷಣಭಂಗುರಗಳು, ಇಂತಹ ಅಸಾರವಿಷಯಗಳಿಲ್ಲಿ ಬುದ್ಧಿಶಾಲಿಯಾದವನು ಅಭಿಮಾನವಿಟ್ಟು ಕೆಡಲಾರನು. ಈ ಐಶ್ವರ್ಯಲಕ್ಷ್ಮಿ ಬಿಸಲ್ಗುದುರೆಗೆ ಸಾಟಿಯಾದವಳು, ವಿಜ್ಞಾನಿಗಳನ್ನು ವಿಭ್ರಾಂತಿಗೊಳಿಸಲಾರಳು" ಎಂದು ವಚಿಸಿ ತನ್ನ ತಪಸ್ಸಾಮ್ರಾಜ್ಯಕ್ಕೆ ನಡೆದೇ ನಡೆದನು.

ಆ ಮೇಲೆ ಯೋಗನಂದನು ತನ್ನ ರಾಜಧಾನಿಯಾದ ಪಾಟಲೀಪುತ್ರಕ್ಕೆ ಸಕಲೈಶ್ವರ್ಯಂಗಳೊಡನೆ ನನ್ನನೊಡಗೊಂಡು ಬಂದು ಸೇರಿದನು. ನಾನು ಅಲ್ಲಿ ಉಪಕೋಶೆಯಿಂದ ಸರ್ವೋಪಚಾರಗಳೂ ನಡೆಯುತ್ತಿರೆ, ಮಂತ್ರಿಪದವಿಯಿಂದ ಸರ್ವೋತ್ತಮಾಧಿಕಾರವು ನಡೆಯುತ್ತಿರೆ, ಮಜ್ಜನನಿಯೊಡನೆಯೂ ಸಜ್ಜನರೊಡನೆಯೂ ಸಂಪದಾನಂದವನನುಭವಿಸುತ್ತಿದ್ದೆನು. ನನಗೆ ಪ್ರತಿದಿನವೂ ತಪಃಪ್ರಸನ್ನೆಯಾದ ಗಂಗಾದೇವಿ ಬಂಗಾರ ಕೊಡುತ್ತಿರಲು, ಸರಸ್ವತೀದೇವಿ ನನ್ನ ಮೈಯಲ್ಲಿಯೇ ಪ್ರತ್ಯಕ್ಷವಾಗಿದ್ದು ಕಾರ್ಯಾಲೋಚನೆಗಳನ್ನು ಕಾರುಣ್ಯದಿಂದ ಕಾಣಿಸಿಕೊಡುತ್ತಿದ್ದಳು. ಕೇಳೈ, ಕಾಣಭೂತೀ !

ನೀತಿ – ಕಂದ || ಅಪಕೀರ್ತಿಯಾತ್ಮಸಂಕಟ
ಮಪಹಾಸ್ಯಂ ಭಾಗ್ಯನಾಶಮಕ್ಕುಂ ಪರದಾ |
ರಪರರ್ಗೆಳಿದೊಡೆನರಕಮು
ಮುಪಕೋಶೆಗೆ ಸೋಲ್ದು ಕಿಡರೆ ನಾಲ್ವರ್ದುರುಳರ್ || ೪ ||

ಕಂದ || ಪ್ರಕುಟಿಲನಾದವನೊಂದಂ
ಸುಕರದಿನಾ ಚರಿಸಿಯಳುತ ಮಂತಹನೂರಂ |
ಪ್ರಕಟಮೆನಲನುಭವಿಸುವಂ
ಶಕಟಾಲಂ ಪೆಣನ ಸುಡಿಸಿ ಪೆಣಗಳೊಳಿರನೇ || ೫ ||

೦

# ೫ ನೆಯ ತರಂಗವು

ಎಂದಿಂತು ಮರಳಿಯೂ ವರರುಚಿ ವಚಿಸುತ್ತಿರುವನು : ಯೋಗನಂದನು ಕಾಲಕ್ರಮದಿಂದ ಕಾಮಪರತಂತ್ರನಾಗಿ ಕಾಡಾನೆಯಂತೆ ಪ್ರಪಂಚವನೇ ಲಕ್ಷ್ಯವಿಡದಿದ್ದನು. ಅಂತರಾಳದೈಶ್ವರ್ಯವು ಅವನನ್ನು ವಿಭ್ರಾಂತಿಗೊಳಿಸದೆ ? ಆ ಸಮಯದಲ್ಲಿ ನನ್ನ ಮನದೊಳಗೆ "ವಿಶ್ವವಲ್ಲಭನಿವನು ವಿಶೃಂಖಲನು. ಇವನ ಕಾರ್ಯಗಳ ಚಿಂತೆಯಲ್ಲಿ ನನ್ನ ಸ್ವಧರ್ಮವು ಕೆಡುತ್ತಿದೆ. ಅದರಿಂದ ಬುದ್ಧಿಮಂತನಾದ ಶಕಟಾಲನನ್ನು ನನಗೆ ಸಹಾಯಕನನ್ನಾಗಿ ತಂದಿಟ್ಟುಕೊಳ್ಳುವುದು ಉಚಿತವಾಗಿದೆ. ನಾನಿರುವಲ್ಲಿ ಅವನೇನು ವಿರುದ್ಧವಾಚರಿಸಬಲ್ಲನು ?" ಎಂದು ಪರ್ಯಾಲೋಚಿಸಿ ರಾಯನನ್ನೂ ಸಮ್ಮತಿಗೊಳಿಸಿ ಶಕಟಾಲನನ್ನು ಅಂಧಕೂಪದಿಂದ ಹೊರತೆಗೆದೆನು. ಅವನೂ ಮರಳಿ ಮಂತ್ರಿಯಾಗಿ ನನ್ನನನುಸರಿಸಿ ರಾಜ್ಯಕಾರ್ಯಗಳನ್ನು ವಿಚಾರಿಸುತ್ತ ನಾನಿರುವಲ್ಲಿ ಯೋಗನಂದನನ್ನು ಜಯಿಸುವುದು ಅಸಾಧ್ಯವೆಂದು ಬಲ್ಲವನಾಗಿ ವೇತನವೃತ್ತಿಯನವಲಂಬಿಸಿ, ಕಾಲಕಳೆಯುತ್ತಿದ್ದನು. ಹೀಗಿರುವಲ್ಲಿ ಒಂದು ದಿನವಾಯೋಗನಂದನು ಊರಹೊರಗೆ ಸಂಚಾರವಿಹಾರಕ್ಕೆ ಹೊರಟು ಗಂಗಾಮಧ್ಯದಲ್ಲಿ ಐವೆರಳುಗಳನ್ನೂ ಜೋಡಿಸಿಕೊಂಡು ಮೇಲಕ್ಕೆ ಬಂದಿರುವ ಕೈಯೊಂದನ್ನು ತಾನು ನೋಡಿ, ನನಗೆ ತೋರಿಸಿ ಇದೇನೆಂದು ಬೆಸಸಿದನು. ನಾನದಕ್ಕೆ "ಆ ಕೈ ಐವರು ಸೇರಿ ಐಕಮತ್ಯದಿಂದಿರಲು ಅವರಿಗೀ ಲೋಕದಲ್ಲಿ ಅಸಾಧ್ಯವಾವುದೆಂದು ಕೇಳಿತು. ಐವರೇಕೆ ಇಬ್ಬರೈಕಮತ್ಯವೇ ಸಾಲದೇ ? ಎಂದುತ್ತರವಿತ್ತೆನು" ಎಂಬ ನುಡಿಗೇಳಿ ಆ ರಹಸ್ಯ ವಿಜ್ಞಾನಕ್ಕೆ ರಾಜನು ಸೋಜಿಗಪಟ್ಟನು. ನನ್ನ ಬುದ್ಧಿ ದುರ್ಜಯವೆಂದು ಬಲ್ಲವನಾಗಿ ಶಕಟಾಲನು ಚಿಂತಾಕ್ರಾಂತನಾದನು.

ಒಂದು ವೇಳೆಯಲ್ಲಿ ನಂದನಪಟ್ಟದರಸಿ ಕರುವಾಡದಲ್ಲಿ ನಿಂದು, ಬೀದಿಯಲ್ಲಿ ಮೋರೆಯೆತ್ತಿ ಮೇಲೆ ನೋಡುತ್ತಿರುವ ಬ್ರಾಹ್ಮಣನನ್ನು ಕಿಟಕಿಯಿಂದ ಕಂಡಳು. ಅದನ್ನು ನೋಡಿ ಯೋಗನಂದನು ಆಗ್ರಹಗೊಂಡು ಆ ವಿಪ್ರನಿಗೆ ಮರಣದಂಡನವನ್ನು ವಿಧಿಸಿದನು. ಅಸೂಯೆಯೆಂಬುದು ಅವಿವೇಕಕ್ಕೆಡೆಯಲ್ಲವೆ ? ಆ ದ್ವಿಜನನ್ನು ಕೊಲೆಗಾರನು ಅಂಗಡಿ ಬೀದಿಯಲ್ಲಿ ಕೊಂಡುಹೋಗುವಾಗ ಅಲ್ಲಿಯೊಂದು ಸತ್ತಮತ್ಸ್ಯವು ಅಟ್ಟಹಾಸವಾಗಿ ನಕ್ಕಿತು. ಆ ಸಂಗತಿ ರಾಜನಿಗೆ ತಿಳಿದು ಒಡನೆಯಾತನು ಕೊಲೆಯನ್ನು ನಿಲ್ಲಿಸಿ, ಮತ್ಸ್ಯಹಾಸಕ್ಕೆ ಕಾರಣವೇನೆಂದು ನನಗೆ ಪ್ರಶ್ನೆಯಿತ್ತನು. ನಾನೂ ತಿಳಿದು ಬರುವೆನೆಂದು ಬಂದು ಏಕಾಂತದಲ್ಲಿ ಸರಸ್ವತೀ ದೇವಿಯನ್ನು ಸಂಪ್ರಾರ್ಥಿಸಿಕೊಂಡೆನು. ಆ ದೇವಿ ಪ್ರಸನ್ನೆಯಾಗಿ "ಮಗನೇ ! ಈ ರಾತ್ರಿ ಯಾರಿಗೂ ಕಾಣಿಸದೆ ಈ ತಾಳವೃಕ್ಷದಲ್ಲಿರು. ಅಲ್ಲಿ ಮತ್ಸ್ಯಹಾಸ ಕಾರಣವು ನಿಸ್ಸಂದೇಹವಾಗಿ ನಿನಗರಿಕೆಯಾಗುವುದು" ಎಂದು ಅಂತರ್ಧಾನವಾದಳು. ನಾನು ಹಾಗೆಯೇ ಆ ರಾತ್ರಿ ಹೋಗಿ ತಾಳೆಯ ಮರವೇರಿರಲು ಅಲ್ಲಿಗೆ ಘೋರ ರಾಕ್ಷಸಿ, ಮಕ್ಕಳೊಡನೆ ಬಂದಳು. ಆಯಳಿ ರಕ್ಕಸರು

ತಾಯನ್ನು ತಿಂಡಿಯನೇನಾದರೂ ಕೊಂಡು ಕೊಡೆಂದು ಕಾಡಿದರು. ಅದಕ್ಕಾ ರಕ್ಕಸಿ "ನಾಳೆಯ ವರೆಗೆ ಸುಮ್ಮಗಿರಿ, ಬೆಳಕು ಹರಿಯಲಿ, ಬ್ರಾಹ್ಮಣ ಮಾಂಸವನ್ನು ತಂದು ಕೊಡುವೆನು. ಇಂದು ಅವನನ್ನು ಕೊಲ್ಲಲಿಲ್ಲ." "ಈ ಹಗಲಲ್ಲಿಯೇ ಏಕೆ ಕೊಲ್ಲಲಿಲ್ಲ" ವೆಂದು ಹುಡುಗರು ಕೇಳಲು— "ಇಲ್ಲಿಯೊಂದು ಒಣ ಮೀನು ನಕ್ಕಿತು. ಅದರಿಂದ ಅವನಿಗೆ ಶಿಕ್ಷೆ ನಿಂತಿತು" ಎಂದೂ; ಅದೇಕೆ ನಕ್ಕಿತೆಂದು ಅವರು ಕೇಳಲು "ರಾಜಾಂತಃ ಪುರದ ರಾಣಿಯರೆಲ್ಲರೂ ದುರ್ವ್ಯಾಪಾರದವರೇ ಸರಿ. ಅಲ್ಲಿ ಯಿಲ್ಲಿ ನೋಡಿದರೂ ಸ್ತ್ರೀ ವೇಷ ವಾಂತ ಪುರುಷರು ತುಂಬಿರುವರು. ಅವರೆಲ್ಲರೂ ಸುಖವಾಗಿರುವಲ್ಲಿ ನಿರಪರಾಧಿಯಾದ ಬ್ರಾಹ್ಮಣನಿಗೆ ನಿರ್ಹೇತುಕಮರಣ ಶಿಕ್ಷೆಯಾಯಿತೆಂದು ಮತ್ಸ್ಯಹಾಸದವಲಾಯಿ ದೈವದ ಮಾಟವಾಗಿದೆ" ಎಂದೂ, ಬಾಲಕರನ್ನು ಸಮಾಧಾನಗೊಳಿಸಿದಳು. ನಾನಲ್ಲಿಂದ ಬಂದು ಪ್ರಾತಃಕಾಲದಲ್ಲಿ ಮತ್ಸ್ಯಹಾಸ ಕಾರಣವನ್ನು ಮಹಾರಾಜನಿಗೆ ವಿಶದಗೊಳಿಸಿದೆನು. ಮಹಾರಾಯನೂ ಅಂತಃಪುರದ ಸ್ತ್ರೀವೇಷ ಪುರುಷರನ್ನು ಕಂಡು ಹಿಡಿದು ಶಿಕ್ಷಿಸಿ, ನನಗತ್ಯಂತ ಗೌರವವಿತ್ತು ಬ್ರಾಹ್ಮಣ ಹತ್ಯೆಯನ್ನು ತಪ್ಪಿಸಿ ರಕ್ಷಿಸಿದನು.

ಇಂತಹ ಯೋಗಾನಂದನನ ಕಡೆಯಿಲ್ಲದ ನಡೆವಳಿಗಳನರಿತು ನಾನು ಕಡುದುಗುಡ ವಾಂತು ಬಿಡಲಾರದಿರುವಲ್ಲಿ ಒಂದು ದಿನವಲ್ಲಿಗೆ ಚಿತ್ರಗಾರನೊಬ್ಬನು ಬಂದು ಯೋಗನಂದನ ಪಟದಲ್ಲಿ ಪಟ್ಟದರಸಿಯನ್ನು ನೆಟ್ಟಗೆ ಬರೆದನು. ಆ ಚಿತ್ರವು ನುಡಿಯೂ ನಡೆಯೂ ಒಂದಿಲ್ಲವಲ್ಲದೆ ಬದುಕಿರುವುದೆಂದೇ ತೋರಿ ಬಗೆಗೆ ಚಿತ್ರವಾಯಿತು. ರಾಯ ನವನಿಗೆ ಮೆಚ್ಚುಗೊಟ್ಟು ಪಟವನ್ನು ತನ್ನ ಮಲಗುವ ಮನೆಯ ಗೋಡೆಯಲ್ಲಿ ಗೂಢ ವಾಗಿಟ್ಟನು. ಒಂದು ದಿನವಾಕಸ್ಮಿಕವಾಗಿ ನಾನಲ್ಲಿಗೆ ಹೋಗಿ ಚಿತ್ರದಲ್ಲಿ ಮಹಾರಾ ಣಿಯ ಲಕ್ಷಣವು ಸಂಪೂರ್ಣವಾಗಿರುವುದನರಿತು ಇತರ ಲಕ್ಷಣಗಳಿಂದ ಅಲ್ಲಿರುವ ಲೋಪವನಾಲೋಚಿಸಿ ಉಡಿನೂಲ ಬಳಿಯಲ್ಲಿ ಇರಲುಳ್ಳ ತಿಲಕಾಕೃತಿಯ ಮಚ್ಚೆ ಯೊಂದನ್ನು ಬರೆದು ಮನೆಗೆ ನಡೆದನು. ಅತಿಕ್ರಮ ಪ್ರವೇಶವು ಅನರ್ಥಕರವಾಗದಿರು ವುದೇ? ಬಳಿಕ ಯೋಗನಂದನಲ್ಲಿಗೆ ಬಂದು ಅದನೀಕ್ಷಿಸಿ, ಇದನಾರು ಬರೆದರೆಂದು ವಿಚಾರಿಸಿ ಅಂತಃಪುರದಾಳುಗಳಿಂದ ವರರುಚಿಯೆಂದರಿತು "ದೇವಿಯ ಗುಟ್ಟಾದೆಡೆಯ ಹುಟ್ಟು ಮಚ್ಚೆಯದು ನನಗಲ್ಲದಾರಿಗೂ ತಿಳಿಯಲು ನ್ಯಾಯವಿಲ್ಲ ವರರುಚಿಗೆ ಹೇಗೆ ತಿಳಿಯಿತು? ಇವನು ರಹಸ್ಯವಾಗಿ ಅಂತಃಪುರ ದ್ರೋಹಕನೇ ಸರಿ. ಅದರಿಂದಲೇ ಹಿಂದೆ ರಾಣಿವಾಸ ಸ್ತ್ರೀವೇಷದ ಪುರುಷರನ್ನು ಕಂಡು ಹಿಡಿದನು" ಎಂದು ನಿಶ್ಚಯಿಸಿ ಕೊಂಡನು. ಮನುಷ್ಯರಿಗೆ ಕಾಣಿಸುವ ನಿದರ್ಶನಗಳೆಲ್ಲವೂ ಅವರ ವಿಭ್ರಾಂತಿಯನ್ನೇ ದೃಢೀಕರಿಸುವುದಲ್ಲವೇ? ಯೋಗನಂದನನೊಡನೆಯೇ ಶಕಟಾಲನನ್ನು ಕರೆಯಿಸಿ "ವರರುಚಿ ಅಂತಃಪುರ ದ್ರೋಹವನ್ನು ಮಾಡಿದನು. ಈಗಳೆ ಅವನನ್ನು ಕೊಲಿಸಿಬಿಡು" ಎಂದು ಕಠಿನಾಜ್ಞೆಗೆಯ್ದನು. ಅಪ್ಪಣೆಯೆಂದಾತನು ಹೊರಗೆ ಬಂದು ತನ್ನೊಳಗೆ "ವರರುಚಿಯಾದರೋ ಮಹಾಮಹಿಮನು, ಅವನನ್ನು ಕೊಲ್ಲುವಷ್ಟು ಶಕ್ತಿ ನನಗಿಲ್ಲವು, ಮತ್ತೆ ನನ್ನನ್ನು ವಿಪತ್ತಿನಿಂದ ಉದ್ಧರಿಸಿದವನು, ಮೇಲೆ ಬ್ರಾಹ್ಮಣನು, ಅದರಿಂದಾತ

ನನ್ನು ಗೂಢವಾಗಿಟ್ಟು ಕಾಪಾಡುವೆನು, ಇದು ನನಗೆ ತಕ್ಕುದಾಗಿದೆ" ಹೀಗೆ ನಿಶ್ಚಯಿಸಿ ಬಂದು ನನ್ನೊಡನೆ ರಾಯನ ನಿಷ್ಕಾರಣ ಕೋಪವನ್ನೂ ವಧಾಜ್ಞೆಯನ್ನೂ ಹೇಳಿ, "ಬೇರೆ ಯಾವನಾದರೊಬ್ಬನನ್ನು ಕೊಂದಂತಾಗಿಸಿ ನಿನ್ನ ವಧೆಯಾಯಿತೆನಿಸುವೆನು. ನೀನು ನನ್ನ ಮನೆಯಲ್ಲಿ ಅಡಗಿಕೊಂಡಿರು. ಎಂದು ಹಾಗೆಯೇ ಮಾಡಿದನು. ನಾನೂ ಅವನ ಮನೆಯಲ್ಲಿ ಅಡಗಿದ್ದೆನು. ಅವನ ನೀತಿಗೆ ಸಂತೋಷಿಸಿ "ಎಲೈ ನೀನೊಬ್ಬನೇ ಮಂತ್ರಿ, ಏಕೆಂದರೆ ನನ್ನನ್ನು ಕೊಲ್ಲಿಸುವ ಬುದ್ಧಿ ಹುಟ್ಟಲಿಲ್ಲವು. ನನ್ನನ್ನು ಕೊಲ್ಲಲಾಗಲೂ ತರವಲ್ಲ; ನನಗೆ ರಾಕ್ಷಸನೊಬ್ಬನು ಗೆಳೆಯನಿರುವನು. ಅವನು ಎಣಿಸಿದರಷ್ಟರಲ್ಲಿ ಬಂದು ನನ್ನಿಚ್ಛೆ ಬಂದಂತೆ ಲೋಕವೆಲ್ಲವನ್ನೂ ಧ್ವಂಸ ಮಾಡಿ ಹೋಗಲುಳ್ಳವನು. ಈ ಯೋಗ ನಂದನು ನನ್ನ ಮಿತ್ರನಾದ ಇಂದ್ರದತ್ತನೆಂಬ ಬ್ರಾಹ್ಮಣನು. ಇದರಿಂದ ಇವನನ್ನು ಕೊಲಿಸಲಾರೆನು. ಎಂದು ಶಕಟಾಲನನ್ನು ಪ್ರಶಂಸಿಸಿದೆನು. ಅವನಾ ರಕ್ಕಸನ ತೋರಿ ಸೆಂದು ಬೇಡಿಕೊಂಡನು. ಹಾಗೆಯೇ ನಾನೆಣಿಸಿದಷ್ಟರಲ್ಲಿ ಅವನೂ ಬಂದನು. ನೋಡಿದ ಶಕಟಾಲನು ಭಯಾಶ್ಚರ್ಯಗಳಲ್ಲಿ ಭ್ರಾಂತನಾಗಿ ಹೋದನು. ರಾಕ್ಷಸನು ಅಂತರ್ಧಾನ ವಾಗುತಲೂ, ಶಕಟಾಲನೂ ಅವನು ನಿನಗೆ ಹೇಗೆ ಗೆಳೆಯನಾದನೋ ಹೇಳೆಂದು ಕೇಳಿ ದನು. ಅದಕ್ಕೆ ನಾನು "ಈ ನಗರದಲ್ಲಿ ಪ್ರತಿರಾತ್ರಿಯಲ್ಲಿಯೂ ಊರ ಕಾವಲುನುತ್ತಿುವ ವೀರಭಟನೊಬ್ಬೊಬ್ಬನಾಗಿ ಸಾಯುತ್ತ ಬರಲು ಅದನರಿತು ಯೋಗನಂದನು, ಒಂದು ರಾತ್ರಿಯಲ್ಲಿ ಆ ಕೆಲಸಕ್ಕೆ ನನ್ನನ್ನು ನಿಯಮಿಸಿದನು. ನನ್ನನ್ನು ಆ ರಾತ್ರಿ ಈ ರಾಕ್ಷಸನು ಕಾಣಿಸಿಕೊಂಡು ಈಯೂರಲ್ಲಿ ನೀರೆಯಾ ಹೆಂಗಸಾವಳೆಂದು ಕೇಳಿದನು. ನಾನು ನಕ್ಕು "ಎಲೈ ಮೂರ್ಖನೇ ! ಆವ ಹೆಂಗಸು ಆವ ಪುರುಷನಿಗೆ ಮನೋಹರೆಯಾಗುವಳೋ ಅವಳವನಿಗೆ ಸುಂದರಿಯೆನಿಸುವಳು ಎಂದುತ್ತರವಿತ್ತೆನು. ಅದರಿಂದ ನನ್ನ ಸಾವು ತಪ್ಪಿತು. ಬಳಿಕಾತನು "ನಿನಗೊಬ್ಬನಿಗೇ ನಾನು ಸೋತು ಹೋದೆನು. ನಿನ್ನನ್ನು ನಾನೊಲಿದು ಮೆಚ್ಚಿರುವೆನು. ನೀನು ನನ್ನ ಮಿತ್ರನು ನೆನಸಿದಾಗಳೈತರುವೆನು" ಎಂದು ಅಂತರ್ಧಾನನಾದನು. ಬಳಿಕ ಶಕಟಾಲನು ಗಂಗಾದೇವಿಯನ್ನು ಪ್ರಾರ್ಥಿಸಲು ಆಕೆ ಯನ್ನೂ ಧ್ಯಾನಿಸಿದೆನು. ಆಕೆಯೂ ದೇವತಾಕೃತಿಯಿಂದ ದರ್ಶನವಿತ್ತು, ನನ್ನಿಂದ ಸ್ತೋತ್ರಗಳನ್ನು ಪಡೆದು ಸಂತೋಷದೊಡನದೃಶ್ಯೆಯಾದಳು. ಹೀಗೆ ನನ್ನಲ್ಲಿ ಬದ್ಧ ಗೌರವವಾದರನಾದ ಶಕಟಾಲನು ಒಂದು ದಿನದಲ್ಲಿ ಚಿಂತಾಕ್ರಾಂತನಾದ ನನ್ನನವ ಲೋಕಿಸಿ, ಏಕಾಂತಸ್ಥಳದಲ್ಲಿ ಬಂದು ನನ್ನೊಡನೆ "ಮಿತ್ರನೇ ! ನೀನು ಸರ್ವಜ್ಞನಾದರೂ ಏಕೆ ಹೀಗೆ ಚಿಂತಿಸುವೆ? ಅರಸರಿಗೆ ಅವಿವೇಕವು ಅತಿಶಯವೆಂದು ಅರಿಯೆಯಾ ? ತ್ವರಿತದಲ್ಲಿಯೇ ನಿನ್ನ ಮೇಲಣ ದೋಷವು ಬಿಟ್ಟು ಹೋಗುವುದು. ಇದಕ್ಕೀ ದೃಷ್ಟಾಂತ ಚರಿತವನ್ನು ಆಲಿಸೈ ಎಂದು ಹೇಳತೊಡಗಿದನು.

## ಶಿವವರ್ಮನೆಂಬ ಮಂತ್ರಿಯ ಕಥೆ

ಮುನ್ನಿಲ್ಲಿ ಆದಿತ್ಯವರ್ಮನೆಂಬ ಅರಸನಿದ್ದನು. ಅವನಿಗೆ ಶಿವವರ್ಮನೆಂಬ ಮಹಾನಿಪುಣನಾದ ಮಂತ್ರಿಯಿದ್ದನು. ಒಂದು ವೇಳೆಯಲ್ಲಿ ರಾಣಿಯರೊಳಗೊಬ್ಬಳು

ಬಸುರಿಯಾಗಲು ರಾಯನುಅಂತಃಪುರ ಪಾಲಕರನ್ನು "ಈಕೆಯು ಬಳಿಗೆ ನಾನು ಬಂದು ಎರಡು ವತ್ಸರಗಳಾಗಿವೆ. ಈಕೆ ಗರ್ಭಿಣಿಯೆಂತಾದಳು ?" ಎಂದು ಕೇಳಿದನು. ಅವರು "ಜೀಯ ! ಇಲ್ಲಿ ನೊಣಕ್ಕಾದರೂ ಪುಗಲಳವಲ್ಲ. ನಿನ್ನ ಮಂತ್ರಿ ಶಿವವರ್ಮನು ಮಾತ್ರವು ನಿರಾತಂಕವಾಗಿ ನಿಖಿಲಸ್ಥಳಗಳಲ್ಲಿಯೂ ಸಂಚರಿಸುತ್ತಿರುವನು" ಎಂದು ಬಿನ್ನವಿಸಿದರು. ರಾಯನದನಾಲಿಸಿ ಆತನೇ ತನಗೆ ದ್ರೋಹಿಯೆಂದು ತರಿಸಂದು ಆತನನ್ನು ಬಹಿರಂಗ ವಾಗಿ ಕೊಲಿಸಿದರೆ ತನಗೆ ಅಪವಾದ ಉಂಟಾಗುತ್ತೆಂದು ಸಂದೇಹಿಸಿ, ಯುಕ್ತಿಯಾಗಿ ಆತನನ್ನು ತನ್ನ ಮಿತ್ರನಾದ ಭೋಗವರ್ಮನೆಂಬ ಸಾಮಂತರಾಯನ ಬಳಿಗೆ ಸಾಗಿಸಿ, ರಹಸ್ಯದಲ್ಲಿ ಆ ರಾಯನಿಗೆ ಪತ್ರ ಬರೆದು ಕಳುಹಿದನು. ಮಂತ್ರಿ ಹೊರಟು ಹೋದ ಏಳನೆಯ ದಿವಸದಲ್ಲಿ ಆ ರಾಣಿ ಹೆಣ್ಣೊಡಿಗೆ ತೊಟ್ಟಿರುವ ಒಬ್ಬ ಗಂಡಸಿನೊಡನೆ ಹೊರಗೆ ಹೊರಡುತ್ತಿರುವಲ್ಲಿ ಕಾವಲ್ಗಾರರ್ಬಂದು ಹಿಡಿದು ಭೂವರನಿಗೊಪ್ಪಿಸಿದರು. ಆಗಳಾ ದಿತ್ಯವರ್ಮನು "ಅಕ್ಕಟಾ ! ಅಂತಹ ಮಂತ್ರಿವರ್ಯನನ್ನು ಕೊಲ್ಲಿಸಿದೆನಲ್ಲವೆ ?" ಎಂದು ಅತ್ಯಂತ ಖಿನ್ನನಾದನು. ಇಷ್ಟರಲ್ಲಿ ಶಿವವರ್ಮನೂ ಭೋಗವರ್ಮನ ಬಳಿಗೆ ಸೇರಿದನು. ಪತ್ರಿಕೆಯೂ ಸೇರಿತು. ಭೋಗವರ್ಮನನ್ನು ಶಿವವರ್ಮನಿಗೆ ತೋರಿಸಿ, ಮರಣಾಜ್ಞೆ ಯನ್ನು ತಿಳಿಸಿದನು. ಮಂತ್ರಿಪುಂಗವನು "ಭೋಗವರ್ಮನೇ ! ನೀನು ನನ್ನನೀಕ್ಷಣ ದಲ್ಲಿಯೇ ಕೊಲ್ಲುವನಾಗು, ಇಲ್ಲವೇ ನಾನೇ ಆತ್ಮಹತ್ಯೆ ಮಾಡಿಕೊಳ್ಳುವೆನು" ಎಂದು ನಿರ್ಬಂಧಿಸಿದನು. ಅವನದನಾಲಿಸಿ ಅಚ್ಚರಿಗೊಂಡು "ಹೀಗೇಕೆ ಹೇಳುವೆ ? ವಿಪ್ರವರ್ಯಾ ! ಕಾರಣವನ್ನು ಕರುಣಿಸೈ" ಎಂದು ಕಾಡಿಸಿದನು. ಶಿವವರ್ಮನು, "ಮತ್ತೇನಿಲ್ಲ ಮಹಿಪತೀ ! ನನ್ನನೆಲ್ಲಿ ಕೊಲ್ಲುವರೋ ಆ ದೇಶದಲ್ಲಿ ಹನ್ನೆರಡು ವರುಷಗಳ ಬರವು ಬರುವುದು, ಮಳೆ ಸುರಿಯದು" ಎಂದು ನಿರೂಪಿಸಿದನು. ಬಳಿಕಾನೃಪನು ತನ್ನ ಮಂತ್ರಿ ಗಳೊಡನೆ ಆಲೋಚಿಸಿ, "ಆದಿತ್ಯವರ್ಮನು ದುಷ್ಟಾಗ್ರಣಿ, ನಮ್ಮ ದೇಶವನ್ನು ನಾಶ ಗೊಳಿಸಲೆಳಸಿರುವನು. ರಹಸ್ಯವಾಗಿ ಸಂಹರಿಸುವ ಘಾತಕರಲ್ಲಿಲ್ಲವೇ ? ಅದರಿಂದ ಇವ ನನ್ನು ನಾವು ಕೊಲ್ಲಬಾರದುದು ಸರಿಯಷ್ಟೆ; ಆತ್ಮಹತ್ಯೆಗೂ ಅವಕಾಶವಿಡಬಾರದು" ಎಂದು ನಿಶ್ಚಯಿಸಿಕೊಂಡು ಶಿವವರ್ಮನನ್ನು ದೊಡ್ಡ ಕಾವಲಿನೊಡನೆ ಒಡನೆಯೇ ತನ್ನ ದೇಶದಿಂದ ಹೊರಡಿಸಿದನು. ಆ ಪ್ರಕಾರವಾ ಮಂತ್ರಿ ತನ್ನ ಪ್ರಜ್ಞೆಯಿಂದುಳಿದು ಮರಳಿ ಸ್ವಸ್ಥಾನಕ್ಕೈತಂದನು. ಅಷ್ಟರಲ್ಲಿ ಆತನ ಮೇಲಣ ದೋಷವೂ ಬಗೆಹರಿದು ಹೋಯಿ ತಲ್ಲವೇ ? ಧರ್ಮವೆಂದಿಗೂ ಬೇರೆ ಬಗೆಯಾಗಿ ನಿಷ್ಫಲವೆನಿಸಲಾರದು. ಹೀಗೆಯೇ ನಿನಗೂ ಶುದ್ಧಿಯುಂಟಾಗುವುದು. ತನ್ನ ಮನೆಯಲ್ಲಿ ಸುಖವಾಗಿರು; ವರರುಚೀ ! ದಿಟವು ಹೊರಗೆ ಬಂದು ನಿಶ್ಚಯವಾಗಿ ರಾಯನಿಗೆ ಪಾಶ್ಚಾತ್ತಾಪವಾಗುವದು. ಹೀಗೆಂದು ಹೇಳಿದ ಶಕಟಾಲನ ಮಾತಿನ ಮೇಲೆ ನಾನೂ ಸಮಯನಿರೀಕ್ಷಣೆಯಿಂದ ಆತನ ಮನೆ ಯಲ್ಲಿಯೇ ಕಾಲ ಕಳೆಯುತ್ತಿದ್ದೆನು.

ಕಾಣಭೂತಿಯೇ ! ಒಂದು ದಿನವಾ ಯೋಗನಂದನ ಕುಮಾರನು ಹಿರಣ್ಯಗುಪ್ತನು ಕಾಡಿಗೆ ಬೇಟೆಯಾಡಲೆಯ್ದಿದನು. ಕುದುರೆಯನ್ನು ಹಾರಿಸಿಕೊಂಡು ಹೋಗಿ ಪರಿವಾರ

ವೆಲ್ಲ ಹಿಂದೆಯೇ ದೂರದಲ್ಲಿ ನಿಂತು ಹೋಗಲು, ಅವನು ಅಡವಿಯಲ್ಲಿ ಅನ್ಯ ಸಹಾಯ ವಿಲ್ಲದೆ ಅಳವಲ್ಲದಿಳಿದನು. ರವಿಯೂ ಅಸ್ತಮಿಸಿದನು. ಆ ರಾತ್ರಿ ಆ ಕುವರನು ಒಂದು ಗಿಡದ ಕೆಳಗೆ ಕುಳಿತಿದ್ದನು. ಒಡನೆಯೇ ಸಿಂಹವೊಂದಟ್ಟಿಕೊಂಡು ಬರಲು ಅದೇ ಗಿಡ ವನ್ನು ಇವನೂ ಹತ್ತಿಕೊಂಡನು. ಸಿಂಹಕ್ಕೆ ಹೆದರಿ ಒಂದ ಕರಡಿಯೂ ಹತ್ತಿಕೊಂಡಿತು. ಕುಮಾರನು ಕರಡಿಗೆ ಹೆದರಿ ನಡುಗಿದನು. ಅದನರಿತು ಕರಡಿ "ಎಲೆ ಮಾನವ ! ನಿನಗೆ ನಾನು ಮಿತ್ರನು, ಹೆದರಬೇಡ" ಎಂದಭಯ ಕೊಟ್ಟಿತು. ನಿರ್ಭಯವಾಗಿ ರಾಜಪುತ್ರನು ಗಿಡದ ರಂಬೆಗಳಲ್ಲಿ ಮಲಗಿ ಬಳಲಿಕೆಯಿಂದ ನಿದ್ದೆಗೆ ಪಕ್ಕಾದನು. ಕರಡಿ ಎಚ್ಚತ್ತು ಕಾವಲಿರುವಲ್ಲಿ ಕೆಳಗಿರುವ ಸಿಂಗವು "ಕರಡೀ ! ಆಳನ್ನು ಕೆಳಗೆ ತಳ್ಳು, ನಾನು ನಡೆವೆನು" ಎನಲು; "ಎಲೆ ಪಾಪಿ ! ನಾನು ಮಿತ್ರದ್ರೋಹವಮಾಡೆ"ನೆಂದು ಕರಡಿ ಗುರುಗುಟ್ಟಿತು. ಬಳಿಕ ಕರಡಿ ಮಲಗಿ ನಿದ್ರಿಸುವಲ್ಲಿ ಎಚ್ಚತ್ತಿರುವ ಅರಮಗನೊಡನೆ "ನರನೇ ! ಕರಡಿ ಯನ್ನು ನನ್ನ ಕಡೆಗುರುಳಿಸು" ಎನಲು, ಆದಕ್ಕಾತನು ತನ್ನ ಪ್ರಾಣಕ್ಕೆ ಹೆದರಿ ಸಿಂಹಕ್ಕೆ ಮೇಲೆಸಗಿ ಮೆಚ್ಚುವಡೆಯಲು ಸಮ್ಮತಿಸಿ ಭಲ್ಲೂಕವನ್ನು ಕೆಳಗೆ ತಳ್ಳಿದನು. ಆದರೂ ದೈವಯೋಗದಿಂದ ಕರಡಿಯೆಚ್ಚತ್ತು ಕೆಳಗೆ ಬೀಳದೆ ರಂಬೆಗಳಲ್ಲಿ ನಿಂತು "ಎಲೈ, ಮಿತ್ರದ್ರೋಹೀ ! ಹುಚ್ಚನಾಗಿ ಹೋಗು" ಎಂದು ಶಾಪವಿತ್ತು; ಆ ವೃತ್ತಾಂತವ ನಾರಾದರೂ ತಿಳಿದು ಹೇಳಿದರೆ ನಿನಗೀ ಶಾಪವು ಪರಿಹರವಾಗುವುದೆಂದು ಅನುಗ್ರಹಿಸಿತು. ಮಾರನೆಯ ದಿನಮಾದಿತ್ಯನುದಯದಲ್ಲಿ ರಾಯಕುವರನು ನಿಜನಗರಕ್ಕೆ ಒಂದು ಹುಚ್ಚ ನಾಗಿ ಹೋದನು. ಆ ಸ್ಥಿತಿಯಲ್ಲಿದ್ದ ಮಗನನವಲೋಕಿಸಿ, ಯೋಗನಂದನು ದುಃಖ ಸಮುದ್ರದಲ್ಲಿ ಮುಳುಗಿ "ಈ ವೇಳೆಯಲ್ಲಿ ವರರುಚಿಯಿದ್ದರೆ ಇದರ ಕಾರಣವ ನರಸಿ ತಿಳಿವನು. ಅಕಟಾ ! ಅವನನೇಕೆ ಕೊಂದು ಹಾಕಿಸಿದೆನು ! ಹಾಳು ಕೆಲಸ ಮಾಡಿದೆನು !" ಎಂದು ಕಳವಳಿಸುತ್ತಿದ್ದನು. ಅದನ್ನು ಕೇಳಿ ಶಕಟಾಲನು "ಭಲೇ ! ಕಾತ್ಯಾಯನನನ್ನು ಹೊರಗಿಡಲು ಕಾಲವೇರ್ಪಟ್ಟಿತು. ಆತನು ಮಾನವಂತನು, ಇನ್ನಿವನ ಒಳಿಯಲ್ಲಿರನು. ಆತನೂ ನನ್ನಲ್ಲಿ ನಂಬಿಕೆಗೆಯ್ಯನು." ಎಂದು ಪರ್ಯಾಲೋಚಿಸಿ ಅರಸನಿಂದ ಅಭಯವ ನಾಂತು "ಮಹೀಪತೀ ! ಮರುಗಬೇಡ, ವರರುಚಿ ಜೀವಿಸಿಯೇ ಇರುವನು" ಎಂದು ಹೇಳೆ. ಯೋಗನಂದನು ಒಡನೆಯೇ ಕರೆಯಿಸೆಂದನು. ಶಕಟಾಲನು ಕರೆದೊಯ್ಯಲು ನಾನು ಹೋಗಿ ದುರವಸ್ಥೆಯಲ್ಲಿರುವ ಅರಮಗನನೀಕ್ಷಿಸಿ "ಧರಣೀರಮಣಾ ! ಇವನು ಮಿತ್ರದ್ರೋಹವನ್ನು ಮಾಡಿದನು" ಎಂದು ಸರಸ್ವತೀ ಪ್ರಸಾದದಿಂದ ಸಿಖಿಲವೃತ್ತಾಂತ ವನ್ನೂ ನಿರೂಪಿಸಿದೆನು. ಬಳಿಕ ರಾಯಕುವರನು ಶಾಪಮುಕ್ತಿಯನ್ನು ಪಡೆದು ಸ್ತುತಿಸಿದನು. ನಿನಗೀ ವೃತ್ತಾಂತವು ಹೇಗೆ ತಿಳಿಯಿತೆಂದು ಯೋಗನಂದನೆಂದನು. ನಾನು "ನಾಡೊಡೆಯ ! ಪ್ರಜ್ಞಾವಂತರು ಪ್ರತಿಭೆಯಿಂದ ಲಕ್ಷಣಗಳನ್ನು ಊಹಿಸಿ ಸಕಲ ರಹಸ್ಯಗಳನ್ನೂ ಪ್ರಕಟವಾಗಿ ಬಲ್ಲರು. ತಿಲಕಾಕಾರದ ಹುಟ್ಟುಮಚ್ಚೆಯನ್ನು ತಿಳಿದು ಕೊಂಡ ಹಾಗೆಯೇ ತಿಳಿದೆನಯ್ಯಾ ತಿರೆಯೆರೆಯ !" ಎಂದು, ಆ ರಾಯನೆಷ್ಟು ಲಜ್ಜೆ ಗೊಂಡು ಪಶ್ಚಾತ್ತಾಪಪಟ್ಟರೂ, ನಾನಲ್ಲಿರದೆ ಆತನು ಮಾಡಿದ ಸಕಲ ಸತ್ಕಾರಗಳನ್ನೂ

ಲಕ್ಷಿಸದೆ ನನ್ನಲ್ಲಿ ಅಪವಾದ ತಪ್ಪುವಿಕೆಯೇ ಪರಮ ಲಾಭವೆಂದುಕೊಂಡು ನನ್ನ ಮನೆಗೆ ನಡೆದನು. ವಿದ್ವಾಂಸರಿಗೆ ತಮ್ಮ ಸೌಶೀಲ್ಯವೇ ಹಣವಲ್ಲದೆ ಈ ರನ್ನ ಚಿನ್ನಗಳು ಹಣಗಳೇ ?

ನಾನು ಮನೆಗೆ ಹೋಗುತಲೂ ಅಲ್ಲಿನವರು ನನ್ನನಾಲೋಕಿಸಿ ಅಳತೊಡಗಿದರು. ಏನೂ ತೋರದೆ ವಿಭ್ರಾಂತನಾಗಿರುವ ನನ್ನೊಡನೆ ಉಪವರ್ಷನು "ಗುಣರತ್ನನೇ! ಧರಾವಲ್ಲಭನು ನಿನ್ನನ್ನು ಕೊಲ್ಲಿಸಿದನೆಂಬ ಸುದ್ದಿ ಕಿವಿಗೆ ಬರುತ್ತಲೂ ಉಪಕೋಶೆ ಅಗ್ನಿಪ್ರವೇಶವನೆಸಗಿದಳು. ನಿನ್ನ ತಾಯಿ ಗುಂಡಿಗೆಯೊಡೆದು ಸತ್ತಳು, ಎಂದನು. ಆಕಸ್ಮಿಕವಾಗಿ ಬಂದ ಅನೂತನ ದುಃಖದಿಂದ ನಾನು ಸ್ಮೃತಿಮರೆತು ಬಿರುಗಾಳಿಯಿಂದ ಬಿದ್ದ ಮರದಂತೆ ನೆಲಕುರುಳ್ದೆನು. ಕ್ಷಣಕಾಲದೊಳಗೆ ಅಳುವಿನ ರಸಾನುಭವವನ್ನು ಬಲ್ಲವನಾದೆನು. ನಲಿವ ನಂಟರ ನಾಶದಿಂದಾದ ದುಃಖವೇಗವಾರನ್ನು ಸುಡದಿರುವುದು ? ವರ್ಷಾಚಾರ್ಯರವರು ಬಂದು "ಅಪ್ಪಾ! ಸಂಸಾರವಿರುವಷ್ಟು ಕಾಲವೂ ಈ ಪ್ರಪಂಚ ದಲ್ಲಿ ಅನಿತ್ಯತೆಯೆಂಬುದೊಂದೇ ನಿತ್ಯವಾಗಿದೆ. ಇಂತಹ ದೈವ ಮಾಯೆ ಬಲ್ಲವನಾದರೂ ಚಿಂತಿಸುತೇಕೆ ಅಜ್ಞಾನದಲ್ಲುರುಳುವೆ ?" ಎಂದೀ ರೀತಿಯಾಗಿ ತತ್ತ್ವಾರ್ಥಸೂಕ್ತಿಗಳಿಂದ ಸಮಾಧಾನಗೊಳಿಸಲು, ಕಡೆಗೆ ನಾನು ಧೈರ್ಯ ತಂದುಕೊಂಡು, ವಿರಕ್ತಿವೇಗದಿಂದ ಸಕಲ ಸಂಗಗಳನ್ನೂ ಬಿಟ್ಟು ಪ್ರಶಾಂತಿಯೇ ಪ್ರಾಣಸಹಾಯವೆಂದು ತಪೋವನಕ್ಕೆ ತೆರಳಿದೆನು. ಹೀಗೆಯೇ ಕಾಲಕಳೆಯಲು ಆ ತಪೋವನಕ್ಕೆ ಒಂದು ದಿನದಲ್ಲಿ ಅಯೋಧ್ಯೆ ಯಿಂದ ಬ್ರಾಹ್ಮಣನೊಬ್ಬನು ಬಂದನು.

## ಚಾಣಕ್ಯನು ನಂದನನ್ನು ನಿರ್ಮೂಲ ಮಾಡುವಿಕೆ

ನಾನು ಯೋಗನಂದನ ವೃತ್ತಾಂತವೇನೆಂದು ಆ ವಿಪ್ರನನ್ನು ವಿಚಾರಿಸಲು ಆತನಿಂತೆಂದನು : "ಕಾತ್ಯಾಯನನೇ ! ನೀನು ಹೊರಟು ಬಂದ ಮೇಲೆ ನಡೆದ ನಂದನ ಗತಿಯನವಧಾರಿಸು. ಬಳಿಕ ಬಹಳ ಕಾಲಕ್ಕೆ ಶಕಟಾಲನಿಗೆ ಅವಕಾಶವು ಸಿಕ್ಕಿತು. ಆತನು ಯೋಗನಂದನನ್ನು ಯುಕ್ತಿಯಿಂದ ಕೊಲ್ಲುವ ಬಗೆಯನ್ನು ಪರಿಭಾವಿಸುತ್ತ ಒಂದು ದಾರಿಯಲ್ಲಿ ನೆಲವನಗಿಯುತ್ತಿದ್ದ ಚಾಣಕ್ಯನೆಂಬ ಬ್ರಾಹ್ಮಣನನ್ನು ಕಂಡು "ಏಕೆ ನೆಲವನಗಿವೆ" ಎಂದು ಕೇಳಿ, "ಈ ದರ್ಭೆಯ ತುದಿ ನನ್ನ ಕಾಲಿಗೆ ಚುಚ್ಚಿತ್ತು, ಇದನ್ನು ನಿರ್ಮೂಲ ಮಾಡುವೆನು" ಎಂದು ಚಾಣಕ್ಯನೊರೆಯಲು, "ಸರಿ, ಯಿವನು ಕ್ರೂರ ಕೋಪನನೂ ದೃಢನಿಶ್ಚಯನೂ ಸಮರ್ಥನೂ ಆಗಿರುವನು. ನಂದ ನಿರ್ಮೂಲನಕ್ಕೆ ತಕ್ಕವನೇ ಸರಿ" ಯೆಂದು ನಿಶ್ಚಯಿಸಿಕೊಂಡನು. ಮತ್ತೆಯವನ ಹೆಸರೇನೆಂದು ವಿಚಾರಿಸಿ ಕೊಂಡು, "ಚಾಣಕ್ಯರೇ ! ನಿಮಗೆ ನಂದನ ಮಂದಿರದಲ್ಲಿ ತ್ರಯೋದಶಿಯ ಶ್ರಾದ್ಧ ಕೊಡಿಸುವೆನು. ಲಕ್ಷ ಸ್ವರ್ಣಗಳ ದಕ್ಷಿಣೆ ದೊರೆಯುವುದು. ಎಲ್ಲರಿಗಿಂತಲೂ ಮೊದಲೂಟ ಮಾಡುವೆ. ಆ ವರೆಗೆ ನಮ್ಮ ಮನೆಗೆ ಬಂದಿರಬಹುದು, ಎಂದು ಶಕಟಾಲನು ಚಾಣಕ್ಯ ನನ್ನು ತನ್ನ ಮನೆಯಲ್ಲಿಟ್ಟುಕೊಂಡಿದ್ದು ಶ್ರಾದ್ಧ ದಿನದಲ್ಲಿ ನಂದರಾಜನಿಗೆ ಕಾಣಿಸಿದನು.

ಆತನೂ ಅಂಗೀಕರಿಸಿದನು. ಬಳಿಕ ಚಾಣಕ್ಯನು ಹೋಗಿ ಶ್ರಾದ್ಧದಲ್ಲಿ ಮೊದಲು ಕುಳಿತು ಕೊಂಡನು. ಸುಬಂಧುವೆಂಬ ಬ್ರಾಹ್ಮಣನು ಆ ಅಗ್ರಭೋಜನವನ್ನು ತಾನಪೇಕ್ಷಿಸಿದನು. ಶಕಟಾಲನು ಹೋಗಿ ಆ ವೃತ್ತಾಂತವನರುಹಿಸಲು, ಬೇರೆಯೊಬ್ಬನು ಯೋಗ್ಯನಲ್ಲ, ಸುಬಂಧುವೇ ಅಗ್ರಭೋಜನಕ್ಕೆ ಅರ್ಹನೆಂದು ನಂದನೆಂದನು. ಶಕಟಾಲನು ಚಾಣಕ್ಯನ ಬಳಿಗೆ ಬಂದು ಭಯಕಂಪಿತನಾಗಿ ರಾಜಾಜ್ಞೆಯನ್ನು ಆತನಿಗರಿಕೆಗೆಯ್ದು ನನ್ನಿಂದಪರಾಧ ವಿಲ್ಲವೆಂದು ನಮ್ರವಾಗಿ ಬಿನ್ನವಿಸಿದನು. ಅದರಿಂದ ಚಾಣಕ್ಯನು ಉರಿದೆದ್ದು ಜುಟ್ಟು ಗಂಟು ಬಿಚ್ಚಿ ಮಹಾಕ್ರುದ್ಧನಾಗಿ "ತಪ್ಪದೆಯೆನ್ನೇಳು ದಿನಗಳೊಳಗೆ ಈ ನಂದನನ್ನು ನಿರ್ಮೂಲ ಮಾಡಿ ಹಗೆ ತೀರಿಸಿಕೊಂಡು ಆ ಮೇಲೆ ಈ ತಲೆಗೆ ಮುಡಿಗಟ್ಟುವೆನು" ಎಂದು ಪ್ರತಿಜ್ಞೆಗೆಯ್ದು, ಯೋಗನಂದನನ ಅಗ್ರಹಕ್ಕೆ ಹೆದರಿ ಓಡಿ ಹೋದನು. ಶಕಟಾಲನು ಮೆಲ್ಲನೆ ಕರತಂದು ಗುಟ್ಟಾಗಿ ತನ್ನ ಮನೆಯಲ್ಲಿಟ್ಟುಕೊಂಡನು. ಅಲ್ಲಿಯೇ ಬೇಕಾದ ಸಾಮಗ್ರಿಗಳನ್ನು ಆ ಮಂತ್ರಿಯೇ ತರಿಸಲು ಚಾಣಕ್ಯನಲ್ಲಿಗೋ ಹೋಗಿ ನಂದನ ಮೇಲೆ ಕ್ಷುದ್ರ ಪ್ರಯೋಗ ಮಾಡಿದನು. ಅದರಿಂದ ಯೋಗನಂದನು ಏಳನೆಯ ದಿನದಲ್ಲಿ ದಾಹಜ್ವರ ಬಂದು ಸತ್ತನು. ಶಕಟಾಲನು ಆತನ ಮಗನಾದ ಹಿರಣ್ಯಗುಪ್ತನನ್ನೂ ಸಂಹರಿಸಿ, ಪೂರ್ವನಂದಪುತ್ರನಾದ ಚಂದ್ರಗುಪ್ತನಿಗೆ ರಾಜ್ಯಾಭಿಷೇಕ ಮಾಡಿಸಿ, ಅವನಿಗೆ ಮಂತ್ರಿಯಾಗಿರುವಂತೆ ದೇವಗುರುವಿನಂತೆ ಮಹಾಮೇಧಾವಿಯಾದ ಚಾಣಕ್ಯನನ್ನು ಬಹು ಪ್ರಾರ್ಥನೆಗಳಿಂದ ಸಂಸ್ಥಾಪಿಸಿ, ಯೋಗನಂದ ವಿನಾಶದಿಂದ ಕೃತಾರ್ಥನಾಗಿ ಪುತ್ರ ಶೋಕಾದಿಗಳಿಂದ ಮಹಾವಿರಕ್ತನಾಗಿ ಮಹಾರಣ್ಯಕ್ಕೆ ಹೊರಟು ಹೋದನು.

ವರರುಚಿ ಮತ್ತಿಂತೆಂದನು : ಕಾಣಭೂತೀ ! ಆ ವಿಪ್ರನಿಂದ ಈ ವಿಧವಾಗಿ ಕೇಳಿ, ಸಕಲವೂ ಅಶಾಶ್ವತವಾಗಿ ಹೋಗುವುದನರಿತು ಪರಿತಪಿಸಿದೆನು. ಆ ಪರಿತಾಪ ದಿಂದ ವಿಂಧ್ಯವಾಸಿನಿಯ ದರ್ಶನಕ್ಕೆ ಬಂದು ಆಕೆಯನುಗ್ರಹದಿಂದ ನಿನ್ನ ನವಲೋಕಿಸಿ ದೆನು. ನಿನ್ನ ನಿಟ್ಟಿಸುತಲೂ ಪೂರ್ವಜನ್ಮ ಸ್ಮರಣೆಯೂ ದಿವ್ಯಜ್ಞಾನವೂ ಉಂಟಾಯಿತು. ಮಿತ್ರನೇ ! ಈ ವಿದ್ಯಾಧರ ಮಹಾಚರಿತ್ರವನ್ನು ನಿನಗೆ ಹೇಳಿದೆನು. ಈಗ ನನ್ನ ಶಾಪವು ತೀರಿತು; ಇನ್ನು ನಾನು ದೇಹತ್ಯಾಗಕ್ಕೆ ಪ್ರಯತ್ನಿಸುವೆನು. ಮೂರು ಭಾಷೆ ಗಳನ್ನು ತೊರೆದ ಗುಣಾಢ್ಯನೆಂಬ ಬ್ರಾಹ್ಮಣನು ನಿನ್ನ ಬಳಿಗೆ ಶಿಷ್ಯಸಹಿತವಾಗಿ ಬರುವ ವರೆಗೂ ನೀನಿಲ್ಲಿರುವನಾಗು. ಆತನು ಮಾಲ್ಯವಂತನೆಂಬ ಪ್ರಮಥನು. ನನ್ನ ನಿಮಿತ್ತ ವಾಗಿ ಗೌರೀದೇವಿಗೆ ಸಮಾಧಾನ ಹೇಳತೊಡಗಿ ತದ್ದೋಷದಿಂದ ಆಕೆ ಶಪಿಸಲು ಮನುಷ್ಯ ನಾಗಿ ಹುಟ್ಟಿರುವನು. ಪರಮೇಶ್ವರ ಪ್ರೋಕ್ತವಾದ ಈ ಮಹಾ ಕಥೆಯನ್ನು ಆ ಮಹಾನುಭಾವನಿಗೆ ಹೇಳುವನಾಗು. ಬಳಿಕ ನಿಮ್ಮಿಬ್ಬರಿಗೂ ಶಾಪಮುಕ್ತಿಯಾಗುವುದು.

ಬಳಿಕ ವರರುಚಿ ಕಾಣಭೂತಿಗೆ ಹೀಗೆಂದು ಹೇಳಿ, ನಿಜ ಶರೀರವನ್ನು ತ್ಯಜಿಸಲು ಪುಣ್ಯಕರವಾದ ಬದರಿಕಾಶ್ರಮಕ್ಕೆ ಹೋಗುತ್ತ ಗಂಗೆಯಲ್ಲಿ ಶಾಕಭೋಜನನಾದ ಮುನಿ ಯನ್ನು ಕಂಡನು. ಆಗಳಾ ಮುನಿಗೆ ಕೈಯಲ್ಲಿ ದರ್ಭೆ ಚುಚ್ಚಿಕೊಂಡು ರಕ್ತವು ಸುರಿ

ಯಿತು. ಆ ಮುನಿಯ ಅಹಂಕಾರವನ್ನು ಪರೀಕ್ಷಿಸುವದಕ್ಕಾಗಿ ಆ ರಕ್ತವನ್ನು ವರರುಚಿ ತನ್ನ ಮಹಿಮೆಯಿಂದ ಶಾಕರಸವನ್ನಾಗಿ ಬದಲಿಸಿ ಬಿಟ್ಟನು. ಅದನ್ನು ನೋಡಿ ಆ ಮುನಿ ಅಹಹಾ! ನಾನು ಸಿದ್ಧನಾದೆನೆಂದು ಗರ್ವಿಸಿದನು. ಅದರಿಂದ ವರರುಚಿ ಕಿರುನಗೆ ನಗುತ್ತ ಆತನೊಡನೆ "ಪರೀಕ್ಷೆಗಾಗಿ ನಿನ್ನ ರಕ್ತವನ್ನು ಶಾಕರಸವನ್ನಾಗಿ ವಿಸಿಮಾರ್ಯ ಗೊಳಿಸಿದೆನು; ಎಲೈ, ನಿನಗಿನ್ನೂ ಅಹಂಕಾರವು ಬಿಡಲಿಲ್ಲ. ಜ್ಞಾನಮಾರ್ಗಕ್ಕೆ ಅಹಂಕಾರ ವೆಂಬುದು ಅತಿಕ್ರಮಿಸಲಾಗದ ಅಗಳಿಯಾಗಿರುವುದು. ವಿಜ್ಞಾನವಿಲ್ಲದೆ ನೂರು ನೋಹಿ ಗಳನೋಂತರೂ ಮುಕ್ತಿಯಾಗಲಾರದು. ಮುಮುಕ್ಷುಗಳ ಮಾನಸವನ್ನು ಅನಿತ್ಯವಾದ ಸ್ವರ್ಗವು ಅಪಹರಿಸಲಾರದು. ಅದರಿಂದ, ಎಲೈ ಮುನಿಯೇ! ಅಹಂಕಾರವನ್ನು ತ್ಯಜಿಸಿ, ವಿಜ್ಞಾನ ಸಿದ್ಧಿಗೆ ವಿಶೇಷವಾಗಿ ಯತ್ನಿಸು" ಎಂದಿಂತು ಉಪದೇಶಿಸಿ, ಆ ಮುನಿಯೂ ಸಾಷ್ಟಾಂಗವೆರಗಿ ಸದುಪದೇಶವೆಸಗಿದೆಯೆಂದು ಸಂಸ್ತುತಿಸಲು, ಉಪಶಾಂತಚಿತ್ತನಾಗಿ ಪ್ರಶಾಂತವಾದಾ ಬದರಿಕಾಶ್ರಮಕ್ಕೆ ಸೇರಿದನು. ಬಳಿಕಲ್ಲಿ ನರಶರೀರವನ್ನು ತೊರೆವನಾಗಿ ಪರಮಭಕ್ತಿಯಿಂದ ಶರಣಾಗತವತ್ಸಲೆಯಾದ ಶರ್ವಾಣಿಯನ್ನು ಮರೆಹೊಕ್ಕನು. ಆಕೆಯೂ ಪ್ರತ್ಯಕ್ಷನಾಗಿ ದೇಹ ತ್ಯಾಗಕ್ಕಾಗಿ ಅಗ್ನಿಧಾರಣವನರುಹಿದಳು. ವರರುಚಿ ಯಾಕ್ರಮದಿಂದ ದೇಹವನ್ನು ದಹಿಸಿ ದಿವ್ಯಗತಿವಡೆದನು. ವಿಂಧ್ಯಾರಣ್ಯದಲ್ಲಿತ್ತ ಕಾಣ ಭೂತಿಯೂ ಗುಣಾಢ್ಯಪಂಡಿತನ ಬರವನಿದಿರು ನೋಡುತ್ತಿದ್ದನು.

ನೀತಿ : ಕಂದ || ಅಪವಾದದಿ ನಾತ್ಮಾಂಗ |
ಕೃಪಾಯಮೊದಗಿದೊಡಮಲ್ಲಿ ಮರುಳಾಗದವಂ ||
ನಿಪುಣಂ ಸೊಗಮಾಂಪಂ ಕಡೆ |
ಗುಪಾಯವಿದನೆನಿಪನಲ್ತೆ ಶಿವವರ್ಮಂಬೋಲ್ || ೫ ||

ಕಂದ || ತಿಳಿದುದುಮನನುಚಿತಸ್ಥಳ
ದೊಳಗುಪಯೋಗಿಸಲಲಕ್ಷ್ಯದಿಂದದು ತಾನೇ |
ಅಳಿವಂತನರ್ಥಮಪ್ಪುದು
ತಿಳಕಂ ಬರೆ ಚಿತ್ರಪಟದೆ ವರರುಚಿ ಕಿಡನೇ || ೬ ||

ಕಂದ || ಕಾಣಿಸಿ ಮಹಾನುಭಾವ
ರ್ಗಾಣಂಪ್ರತ್ಯಾಶೆಯಂ ಬಳಿಕ್ಕದನಾವಂ |
ಕ್ಷೋಣಿಪನವನನ್ಯರ್ಗಿಡೆ
ಚಾಣಿಕ್ಯನಿನಳಿದ ಯೋಗನಂದನ ತೆರದಿಂ || ೭ ||

೦

# ೬ ನೆಯ ತರಂಗವು

ಆ ಬಳಿಕ ಮಾಲ್ಯವಂತನು ಮನುಷ್ಯ ಜನ್ಮವೆತ್ತಿ ಹೆಸರಾಂತು ಸಾತವಾಹನ ರಾಯನನ್ನು ಸೇವಿಸಿ ಆತನ ಮುಂದೆ ಮಾಡಿದ ಪ್ರತಿಜ್ಞೆಯಿಂದ ಸಂಸ್ಕೃತವೇ ಮೊದಲಾದ ಮೂರು ಭಾಷೆಗಳನ್ನು ತೊರೆದು ಖಿನ್ನನಾಗಿ ವಿಂಧ್ಯವಾಸಿನಿಯನ್ನು ದರ್ಶನ ಮಾಡಲು ಕಾಡಿಗೆ ಬಂದನು. ಆ ಭಗವತಿಯಾಜ್ಞೆಯಿಂದ ಪೋಗಿ ಆತನು ಕಾಣಭೂತಿಯ ಕಂಡು ತನ್ನ ಪೂರ್ವಜನ್ಮವು ಸ್ಮರಣೆಗೆ ಬರಲು ಮೂರು ಭಾಷೆಗಳಿಗಿಂತಲೂ ವಿಲಕ್ಷಣವಾದ ಪೈಶಾಚೀ ಭಾಷೆಯಿಂದ ತನ್ನ ಹೆಸರು ಹೇಳಿ ಕಾಣಭೂತಿಯೊಡನೆ "ಎಲೈ ಮಿತ್ರನೇ ! ಪುಷ್ಪದಂತನಿಂದ ಕೇಳಿದ ದಿವ್ಯಕಥೆಗಳನ್ನು ನನಗೆ ಹೇಳೈ, ಅದರಿಂದ ನಾವು ಇಬ್ಬರೂ ಶಾಪಮುಕ್ತರಾಗಬಹುದು" ಎಂದು ಬೆಸಗೊಂಡನು. ಕಾಣಭೂತಿಯೊಡನೆಯೇ ಸಂತೋಷಿಸಿ ನಮಸ್ಕಾರಪೂರ್ವಕವಾಗಿ ಅದಕ್ಕೆ "ಮಹಾನುಭಾವನೇ ! ನಾನು ಆ ಕಥೆಯನ್ನು ಹಾಗೇಯೇ ನುಡಿವೆನು. ಆದರೆ ನನ್ನ ಕುತೂಹಲವನ್ನು ನೆರವೇರಿಸು. ಏನೆಂದರೆ ನೀನು ಜನಿಸಿದಂದಿನಿಂದ ನಡೆದ ನಿನ್ನ ಪುಣ್ಯಚರಿತ್ರವನ್ನು ಸಂಗ್ರಹಿಸಿ ನುಡಿದು ನನ್ನನನುಗ್ರಹಿಸುವುದು" ಎಂದು ಬೇಡಿಕೊಂಡನು.

## ಗುಣಾಢ್ಯನ ಚರಿತ್ರವು

ಕಾಣಭೂತಿಯೊಡನೆ ಗುಣಾಢ್ಯನಿಂತು ಸ್ವಕಥೆ ನುಡಿದನು : ಪ್ರತಿಷ್ಠಾನ ದೇಶದಲ್ಲಿ ಸುಪ್ರತಿಷ್ಠಿತವೆಂಬ ನಗರವಿರುವುದು. ಅದರಲ್ಲಿ ಸೋಮಶರ್ಮನೆಂಬ ವಿಪ್ರವರ್ಯ ನಿದ್ದನು. ಅವನಿಗೆ ವತ್ಸನೆಂದೂ ಗುಲ್ಮಕನೆಂದೂ ಇಬ್ಬರು ಮಕ್ಕಳು, ಶ್ರುತಾರ್ಥೆಯೆಂಬ ಮಗಳೊಬ್ಬಳು. ಕಾಲಕ್ರಮದಿಂದ ಆ ಸುಶರ್ಮನು ಪತ್ನಿಯೊಡನೆ ಪರಲೋಕಗತ ನಾದನು. ಆ ವತ್ಸಗುಲ್ಮಕರು ತಂಗಿಯನ್ನು ಸಲಹಿಕೊಂಡು ಕಾಲ ಕಳೆಯುತ್ತಿದ್ದರು. ಆಕೆಯಾಕಸ್ಮಿಕವಾಗಿ ಬಸುರಿಯಾದಳು. ಆ ಅಣ್ಣತಮ್ಮಂದಿರಿಗೆ ಅಲ್ಲಿ ಅನ್ಯ ಪುರುಷ ರಾರೂ ಇಲ್ಲದಿರುವದರಿಂದ ಒಬ್ಬನಲ್ಲೊಬ್ಬನಿಗೆ ಅನುಮಾನವುಂಟಾಯಿತು. ಇವರ ಇಂಗಿತವರಿತು ಶ್ರುತಾರ್ಥೆ ಅಣ್ಣಂದಿರೊಡನೆ "ಸಹೋದರರೇ ? ನಿಮಗೆ ದುರಾಲೋಚನೆ ಬೇಡ, ನಾಗರಾಜನಾದ ವಾಸುಕಿಗೆ ತಮ್ಮನ ಮಗನಾದ ಕೀರ್ತಿಸೇನನೆಂಬ ಕುವರನಿರು ವನು. ಆತನೊಂದು ದಿನದಲ್ಲಿ ನಾನು ಸ್ನಾನಕ್ಕೆ ಹೋಗುವಲ್ಲಿ ನನ್ನನವಲೋಕಿಸಿ, ಕಾಮವಶನಾಗಿ ನನಗೆ ತನ್ನ ಕುಲಗೋತ್ರಗಳನ್ನು ತಿಳಿಸಿ ಗಾಂಧರ್ವವಿಧಿಯಿಂದ ಗಂಡ ನಾದನು. ಅದರಿಂದ ನನಗೀ ಗರ್ಭವು ವಿಪ್ರಜಾತಿಯಿಂದ ಉಂಟಾಗಿದೆ" ಎಂದು ನಿಜ ಸ್ಥಿತಿಯ ನಿವೇದಿಸಿದಳು. ವತ್ಸಗುಲ್ಮಕರು ಅದಕ್ಕೇನು ದೃಷ್ಟಾಂತವೆಂದು ಗದ್ದಿಸಲು, ಆಕೆ ಏಕಾಂತದಲ್ಲಿ ನಾಗಕುಮಾರನನ್ನು ಸ್ಮರಿಸಿಕೊಂಡಳು. ಆತನೂ ಪ್ರತ್ಯಕ್ಷನಾಗಿ ಬಂದು ವತ್ಸಗುಲ್ಮಕರೊಡನೆ "ಎಲೈ ಬ್ರಾಹ್ಮಣರೇ ! ನಿಮ್ಮ ತಂಗೆ, ಈಕೆ ಒಬ್ಬ ಅಪ್ಸರ.

ಸ್ತ್ರೀ ಶಾಪದಿಂದೀ ಜನ್ಮವೆತ್ತಿರುವಳು. ನೀವೂ ಶಾಪದಿಂದ ಭೂಮಿಯಲ್ಲಿ ಹುಟ್ಟಿರುವಿರಿ. ಈಕೆಗೆ ಪುತ್ರನು ಹುಟ್ಟುವನು. ಅದರಿಂದ ನಿಮ್ಮ ಮೂವರಿಗೂ ಶಾಪವಿಮುಕ್ತಿಯಾಗುವುದು," ಎಂದು ನುಡಿದು ನಾಗಕುಮಾರನು ಅಂತರ್ಧಾನನಾದನು. ಬಳಿಕ ಕೆಲವು ದಿವಸಗಳಲ್ಲಿಯೇ ಆಕೆಗೆ ಮಗನೂ ಜನಿಸಿದನು. ಆ ಸುಪುತ್ರನೇ ನಾನೆಂದು ತಿಳಿವನಾಗು. ನಾನು ಹುಟ್ಟಿದ ಸಮಯದಲ್ಲಿ ಆಕಾಶವಾಣಿ "ಇವನೊಬ್ಬ ಪ್ರಮಥನವತಾರವನ್ನು ತಾಳಿದ ಬ್ರಾಹ್ಮಣನು, ಇವನಿಗೆ ಗುಣಾಢ್ಯನೆಂದು ಹೆಸರು" ಎಂದೊರೆದಳಂತೆ. ಬಳಿಕ ಕೆಲವು ಕಾಲಕ್ಕೆ ನನ್ನ ತಾಯೂ ತಾಯೊಡಹುಟ್ಟಿದವರೂ ಶಾಪವಿಮುಕ್ತರಾಗಿ ದೇಹಗಳನ್ನು ತ್ಯಜಿಸಿದರು.

ತರುವಾಯ ನಾನು ಬಾಲಕನಾದರೂ ಧೈರ್ಯ ತಂದುಕೊಂಡು ವಿದ್ಯಾಭಿಚಾರವಾಗಿ ದಕ್ಷಿಣಾಪಥಕ್ಕೆ ತೆರಳಿದೆನು. ಅಲ್ಲಿ ಕ್ರಮವಾಗಿ ಸಕಲ ವಿದ್ಯೆಗಳನ್ನೂ ಕಲಿತು ಪ್ರಸಿದ್ಧಿ ಪಡೆದು ನನ್ನ ಮಹಿಮೆಯನ್ನು ಪ್ರಕಟಗೊಳಿಸಿಕೊಳ್ಳುತ್ತ ಸ್ವದೇಶಕ್ಕೆ ಬಂದೆನು. ಬಹಳ ಕಾಲಕ್ಕೆ ನಾನು ಶಿಷ್ಯರೊಡನೆ ಕೂಡಿ ಪ್ರತಿಷ್ಠಿತ ಪುರವನ್ನು ಪ್ರವೇಶಿಸುತ್ತಿರುವಲ್ಲಿ ಆ ನಗರವು ಅಪೂರ್ವವಾದ ಪರಿಪರಿಯ ಪರಿಶೋಭೆಗಳಿಂದ ಪ್ರಕಾಶಿಸುತ್ತಿರಲು; ಒಂದೆಡೆಯಲ್ಲಿ ಸಾಮವೇದಿಗಳು ವಿಧಿಪ್ರಕಾರವಾಗಿ ಸಾಮಗಾನ ಮಾಡುತ್ತಿದ್ದರು; ಒಂದು ಕಡೆ ವೇದಾರ್ಥಗಳನ್ನು ಕುರಿತು ಬ್ರಾಹ್ಮಣರು ವಾದಿಸುತ್ತಿದ್ದರು; ಮತ್ತೊಂದೆಡೆ ಜೂದಗಾರರು 'ನೆತ್ತದ ಜಾಣಿದು ನೆತ್ತಿಗೆ ನಿಧಿಯೆನೆ ಹುತ್ತಿದೆ ಕಂಡಿರೆ' ಎಂದು ಹೀಗೆ ಠಕ್ಕುಸೊಲ್ಲುಗಳಿಂದ ದ್ಯೂತವನ್ನು ಕೊಂಡಾಡಿಕೊಳ್ಳುತ್ತಿದ್ದರು. ಬೇರೆಂದೊಂದು ತಾಣದಲ್ಲಿ ಕೋಮಟಿಗರು ವರ್ತಕತನದಲ್ಲಿ ತಮ್ಮ ಜಾಣತನವನ್ನು ಹೊಗಳಿಕೊಳ್ಳುತ್ತಿದ್ದರು. ಅವರಲ್ಲಿ ಸೆಟ್ಟಿಯೊಬ್ಬನು ಹೀಗೆ ಹೇಳಿಕೊಂಡನು :

## ಇಲಿಸೆಟ್ಟಿಯ ಕಥೆ

ಲೋಕದಲ್ಲಿ ಬುದ್ಧಿಶಾಲಿಯಾದವನು ಬಂಡವಾಳವಿಟ್ಟ ಹಣದಿಂದ ಹಣವನ್ನು ಸಂಪಾದಿಸುವುದು ಏನಾಶ್ಚರ್ಯವು? ನಾನು ಪೂರ್ವದಲ್ಲಿ ಧನವಿಲ್ಲದೆಯೇ ಸಂಪಲ್ಲಕ್ಷ್ಮಿಯನ್ನು ಸಂಪಾದಿಸಿದೆನು. ಅದು ಹೇಗೆಂದರೆ– ನಾನು ಬಸಿರಲ್ಲಿರುವಾಗಲೇ ನನ್ನ ತಂದೆ ಮಡಿದನು. ಪಾಪಿಗಳಾದ ಜ್ಞಾತಿಗಳು ನನ್ನ ತಾಯಿಯಾಸ್ತಿಯನ್ನು ಅಪಹರಿಸಿ ಬಿಟ್ಟರು. ಬಿಟ್ಟರು. ಆಕೆಯವರ ಭಯದಿಂದ ಗರ್ಭರಕ್ಷೆ ಮಾಡಿಕೊಳ್ಳುತ್ತ ನನ್ನ ತಂದೆಯ ಗೆಳೆಯನಾದ ಕುಮಾರದತ್ತನ ಮನೆಯಲ್ಲಿ ಮಾನವತಿಯಾಗಿರುತ್ತಿದ್ದಳು. ಆ ಹದಿಬದೆಗೆ ನಾನು ಮಗನಾದೆನು. ಬಳಿಕಾಕೆ ನಾನಾಕಷ್ಟಗಳನ್ನು ಸಹಿಸಿಕೊಂಡು ಪರಮದಾರಿದ್ರ್ಯದಲ್ಲಿಯೂ ನನ್ನನ್ನು ಪರಿಪೋಷಿಸಿಕೊಂಡು ಬಂದು ದೀನೆಯಾದ ತಾನೆ ಒಂದು ಮಠದಯ್ಯನವರ ಬಳಿಯಲ್ಲಿ ಬೇಡಿಕೊಂಡು ನನಗೆ ಬರಹಲೆಕ್ಕಗಳನ್ನು ಕಲಿಸಿದಳು. ಒಂದು ದಿನದಲ್ಲಿ ನನ್ನೊಡನೆ ನಮ್ಮಮ್ಮನು "ಮಗೂ! ನೀನು ಕೋಮಟಿಗರ ಕೂಸು. ಇನ್ನು ವರ್ತಕತನಕ್ಕೆಳಿಯದೆ ಸುಮ್ಮನಿರಲಾಗದು. ಈ ದೇಶದಲ್ಲಿ ವಿಶಾಖಿಲನೆಂಬ

ಮಹಾಧನಿಕನಾದ ಕೋಮಟಿಗನಿರುವನು. ಆ ಹಣವಂತನು ಬಡವರಾದ ದೊಡ್ಡ ಮನೆತನದ ಕೋಮಟಿಗರಿಗೆ ಬಂಡವಾಳದ ಹಣ ಕೊಡುವನು. ಹೋಗಿ ಆತನ ಬಳಿ ಮೂಲ ಧನದ ಚೀಲವ ಬೇಡು" ಎಂದು ಉಪದೇಶಿಸಿದಳು. ಒಡನೆಯೇ ನಾನು ಆತನ ಬಳಿಗೆ ಹೋದೆನು. ಆ ಸಮಯದಲ್ಲಿ ಆತನು ಒಬ್ಬ ಕೋಮಟಿ ಹುಡುಗನನಾವನನ್ನೋ "ಎಲೈ ನೋಡಿಲ್ಲಿ, ನೆಲದಲ್ಲಿ ಸತ್ತು ಬಿದ್ದಿರೆ ಈಯಿಲಿ, ಇದನ್ನು ಕೂಡ ಸರಕು ಮಾಡಿಕೊಂಡು ಬುದ್ಧಿಶಾಲಿಯಾದವನು ಹಣವಾರ್ಜಿಸಬಲ್ಲನು. ನೀನು ನಿಷ್ಪ್ರಯೋಜಕನು. ನಿನಗೆಷ್ಟೋ ಹೊನ್ನುಗಳನ್ನಿತ್ತು ನೋಡಿದೆನು. ಅವುಗಳಿಗೆ ಬಡ್ಡಿ ಹಾಗಿರಲಿ, ಅಸಲಿಗೆ ಕೂಡ ಮೋಸವಾಗಿಯೆಲ್ಲಾ ಹಾಳು ಮಾಡಿದೆ" ಎಂದಿಂತು ಕಸರಿ ಗದ್ದಿಸುತ್ತಿದ್ದನು. ನಾನು ಅದನಾಲಿಸಿ ಆತನ ಮುಂದೆ ನಿಂದು "ಯಜಮಾನರೇ ! ಧಣಿಗಳಪ್ಪಣೆ ಕೊಟ್ಟಂತೆ ನಿಮ್ಮ ಬಳಿ ಈ ಸತ್ತಿಲಿಯನ್ನು ಚೀಲದೊಡನೆ ಬಂಡವಾಳವಾಗಿ ಕೈಕೊಂಡಿರುವೆನು" ಎಂದು ಹೇಳಿ, ಲೆಕ್ಕಕ್ಕೆ ಬರೆಯಿಸಿ, ಆತನು ನಗುತ್ತಿರಲು ಆ ಇಲಿಯನ್ನು ಬಂಡವಾಳದ ಚೀಲಕ್ಕೆ ಹಾಕಿ ಕೈಕೊಂಡು ಹೊರಟೆನು. ಆ ಮೂಷಕವನ್ನು ಎರಡು ಬಗನೆ ಕಡಲೆಗಳಿಗೆ ಒಬ್ಬ ವರ್ತಕನ ಬಳಿಯವನು ಸಾಕುವ ಬೆಕ್ಕಿನೂಟಕ್ಕಾಗಿ ಮಾರಿದೆನು. ಆ ಕಡಲೆಗಳನ್ನು ಹುರಿದುಕೊಂಡು ಒಂದು ಕೊಡದಲ್ಲಿ ಸೀನೀರನ್ನು ತುಂಬಿಕೊಂಡು ಊರಾಚೆಯೊಂದು ನೆರಳತಾಣದಲ್ಲಿ ಕುಳಿತುಕೊಂಡೆನು. ಬಾಯಾರಿ ಆ ದಾರಿಯಲ್ಲಿ ಬರುವ ಸೌದೆಯ ಹೊರೆಯವರು ನನ್ನ ಸವಿನುಡಿಗಳಿಗೆ ಸಿಕ್ಕಿ ನಾನು ಕೊಡುವ ಕೆಲವು ಕಡಲೆ ಕಾಳುಗಳನ್ನು ತಿಂದು ತಣ್ಣಗೆ ಸೀನೀರು ಕುಡಿದು ಹೋಗುವಾಗ ತಮ್ಮ ಹೊರೆಯಿಂದ ಎರಡು ಕಟ್ಟಿಗೆ ತೆಗೆದು ಕೊಟ್ಟು ಹೋಗತೊಡಗಿದರು. ಹೀಗೆ ಆ ದಿನದಲ್ಲಿ ೪೦ ಕಟ್ಟಿಗೆ ಸೇರಿ ಮಾರಲು ೪ ಆಣೆ ದೊರೆಯಿತು. ಅದರಲ್ಲಿ ನಾನೂ ಜೀವಿಸಿ, ೨ ಸೇರು ಕಡಲೆ ಕೊಂಡುತಂದು ಮಾರನೆಯ ದಿನವೂ ಹೀಗೆಯೇ ಮಾಡಿದೆನು. ೧೨ ಆಣೆ ಸಿಕ್ಕಿತು. ಹೀಗೆಯೇ ನಿತ್ಯವೂ ಮಾಡುತ್ತ ಬಂದು ಕಡೆಗೆ ಬಂದು ಸಮಯದಲ್ಲಿ ವರಸೆಯಾಗೆ ಮೂರು ದಿವಸಗಳಲ್ಲಿ ಬರುವ ಹೊರೆಗಳೆಲ್ಲವನ್ನೂ ನಾನೇ ಬೆಲೆಗೆ ಕೊಂಡೆನು. ಅದಕ್ಕೆ ತಕ್ಕಂತೆ ಜಡಿಮಳೆ ಹಿಡಿದು ಊರಿಗೆ ಹೊರಗಣ ಸುವುದೆಯೊಂದೂ ಬಾರದೆ ಒಣಸೌದೆಯ ಬೆಲೆ ಹೆಚ್ಚಲು, ನಾನು ಅಪಾರ ಲಾಭವಿಟ್ಟು ಆ ಹೊರೆಗಳೆಲ್ಲವನ್ನೂ ಮಾರಿದೆನು. ಅದರಿಂದ ಸಾವಿರಾರು ಹಣ ಕೈಗೆ ಸಿಕ್ಕಿತು. ಅದರಿಂದ ಅಂಗಡಿಯಿಟ್ಟು ಕ್ರಮವಾಗಿ ವರ್ತಕ ಮಾಡುತ್ತ ಬರಲು, ಕೆಲವು ವರುಷಗಳಿಗೆ ಮಹಾಧನಿಕನಾದೆನು. ಬಳಿಕ ನಾನು ಬಂಗಾರದಲ್ಲಿ ಇಲಿಯೊಂದನ್ನು ಮಾಡಿಸಿಕೊಂಡು ವಿಶಾಖಿಲನಿಗೆ "ಬಡ್ಡಿಯೊಡನೆ ತಾವು ಕೊಟ್ಟ ಬಂಡವಾಳವನ್ನು ಕೈಕೊಳ್ಳಿರಿ" ಎಂದು ಸಮರ್ಪಿಸಿದೆನು. ಆತನೂ, ನನ್ನ ಜಾಣತನಕ್ಕೆ ಮೆಚ್ಚಿ ತನ್ನ ಮಗಳನ್ನು ನನಗಿತ್ತು ಮದುವೆ ಮಾಡಿ ಆ ಮಡದಿಗೆ ಆ ಕನಕ ಮೂಷಕವನ್ನು ಕ್ರೀಡಾರ್ಥವಾಗಿ ಬಳುವಳಿಯೊಡನೆ ಕೊಟ್ಟು ಕಳುಹಿದನು. ಅದರಿಂದ ಇಲಿಸೆಟ್ಟಿಯೆಂದು ಹೆಸರು ಬಂದಿದೆ. ನಾನು ಹೀಗೆ ಕೈಯಲ್ಲಿ ಒಂದು ಕಾಸಾದರೂ ಇಲ್ಲದೆ ಎಷ್ಟೋ ಹಣವನ್ನು ಸಂಪಾದಿಸಿದೆನು, ಎಂದು ಅವನ ಕಥೆಯನ್ನು ಹೇಳಿಕೊಳ್ಳಲು ಕೇಳಿದ

ವರ್ತಕರೆಲ್ಲರೂ ಅತ್ಯಾಶ್ಚರ್ಯಗೊಂಡರು. ಗೋಡೆ ಇಲ್ಲದೆ ಚಿತ್ರ ಬರೆದರೆ ಆಶ್ಚರ್ಯ ವಲ್ಲವೇ ? ಬೇರೆಯೊಂದು ಕಡೆ ನಡೆದ ವಿಷಯವನಾಲಿಸು ಕಾಣಭೂತೀ !

## ಸಾಮವೇದಿಯಾದ ಮೂಢನ ಕಥೆ

ಎಲ್ಲಿಯೋ ಎಂಟು ಹಣ ಬಂಗಾರವನ್ನು ದಾನ ಕೈಕೊಂಡ ಸಾಮವೇದಿ ಬ್ರಾಹ್ಮ ಣನು ಬರುತ್ತಿರಲು, ವಿಟನೊಬ್ಬನು ಅವನನ್ನು ನೋಡಿ "ಎಲೈ, ಬ್ರಾಹ್ಮಣನೇ ನೀನು ಬ್ರಾಹ್ಮಣನಾಗಿರುವುದರಿಂದ ಎಲ್ಲಿ ಹಿಡಿದರೂ ಮೃಷ್ಟಾನ್ನದೂಟ ದೊರೆವುದು. ಆದುದ ರಿಂದ ಈ ನಿನ್ನ ಬಳಿಯ ಚಿನ್ನವಿತ್ತು ಇಲ್ಲಿ ಲೋಕಯಾತ್ರೆಯನ್ನು ಕಲಿತುಕೊಂಡು ಬಹಳ ಜಾಣನಾಗಬಹುದಲ್ಲವೆ ?" ಎಂದು ಯೋಚನೆ ಹೇಳಿದನು. ಆ ಮೂಢ ವಿಪ್ರನು ನನಗಾರು ಹೇಳುವರೆಂದು ಕೇಳಲು, ವಿಟನು "ಇದೋ ! ಇಲ್ಲಿಯೇ ಚತುರಿಕೆಯೆಂಬ ಸೂಳೆಯಿರುವಳು. ಅವಳ ಮನೆಗೆ ಹೋಗು" ಎಂದು ಕಳುಹಿದನು. ಅಲ್ಲಿಗೆ ಹೋಗಿ ನಾನೇನು ಮಾಡಬೇಕೆಂದು ದ್ವಿಜನು ಕೇಳಲು, ವಿಟನು "ಚಿನ್ನವಿತ್ತು ಸರಸವಾಡುತ ಮಾವುದಾದರೂ ಸಾಮವನ್ನು ಪ್ರಯೋಗಿಸು" ಎಂದು ನಗುತ ನುಡಿದನು. ಒಡನೆಯೇ ಆ ಸಾಮವೇದಿ ಚತುರಿಕೆಯ ಮನೆಗೆಯ್ತಂದನು. ಅವಳೂ ಆತನನ್ನು ಗೌರವದಿಂದ ಬರಮಾಡಿಕೊಂಡಳು. ಭೂಸುರನಲ್ಲಿ ಕುಳಿತುಕೊಂಡು "ಇದನ್ನು ಕೈಕೊಂಡು ನನಗೆ ಲೋಕಯಾತ್ರೆಯನ್ನು ಕಲಿಸು" ಎಂದು ಆ ಚಿನ್ನವನಾಕೆನ್ನೆಗೆ ಒಪ್ಪಿಸಿದನು. ಆದಕ್ಕೆ ಅಲ್ಲಿನವರೆಲ್ಲರೂ ನಗುತ್ತಿರಲು ಆ ಮೂಢ ಬ್ರಾಹ್ಮಣನು ಕೊಂಚವಾಲೋಚಿಸಿ ತೋಳು ಗಳನ್ನು ತನ್ನ ಪದ್ಮಾಸನದ ತೊಡೆಗಳ ಮೇಲಕ್ಕೆ ಚಾಚಿಕೊಂಡು ಅಂಗೈಗಳನ್ನು ಗೋಕರ್ಣದಂತೆಯಿಟ್ಟುಕೊಂಡು ಉಚ್ಚಸ್ವರದಿಂದ ಸಾಮವೇದವನ್ನು ಹಾಡತೊಡಗಿ ದನು. ಆ ಹಾಸ್ಯವನ್ನು ನೋಡುವುದಕ್ಕೆ ಎಲ್ಲಾ ಕಡೆಯಿಂದಲೂ ವಿಟಪುರುಷರು ವಿನೋದವೆಂದು ಸೇರಿದರು. "ಈ ನರಿಯಿಲ್ಲಿಗೇಕೆ ಬಂದಿದೆ ? ಬೇಗನೆ ಇದರ ಕಂಠಕ್ಕೆ ಅರ್ಧಚಂದ್ರ (ಅರೆರೂಪಾಯಿ) ವನ್ನು ಕೊಟ್ಟು ಕಳಿಹಿಸಿರಿ" ಎಂದು ವಿಟರು ನಗೆಸರಸ ವಾಡಿಕೊಂಡರು. ಅರ್ಧಚಂದ್ರವೆಂದರೆ ಬಾಣವೆಂದೂ ತನಗೆ ಶಿರಶ್ಛೇದವಾಗುವುದೆಂದೂ ಹೆದರಿ "ಬಂದು ಹೋಯಿತು ಲೋಕಯಾತ್ರೆ" ಎಂದು ಕೂಗಿಕೊಳ್ಳುತ್ತ, ಆ ಬ್ರಾಹ್ಮಣ ನಲ್ಲಿಂದ ಓಡಿಹೋದನು. ಮೊದಲಿವನನ್ನು ಇಲ್ಲಿಗೆ ಕಳುಹಿಸಿದ ವಿಟನ ಬಳಿಗೆ ಮರಳಿ ಹೋಗಿ ನಡೆದ ಸುದ್ದಿಯನ್ನು ಅರಿಕೆಗೆಯ್ದನು. ಆದಕ್ಕಾತನು "ಎಲೈ ಬ್ರಾಹ್ಮಣನೇ ! ಸಾಮವೆಂದರೆ ಒಳ್ಳೆಯ ಮಾತು. ಸವಿನುಡಿಯಾಡೆಂದು ನಾನು ನುಡಿದೆನೇ ಹೊರತು ವೇಶ್ಯಾಗೃಹದಲ್ಲಿ ವೇದ ಪ್ರಸಕ್ತಿಯೇತರದು ? ಸರಿ ಸರಿ, ವೈದಿಕರ ಬುದ್ಧಿಮಾಂದ್ಯವು ಲೋಕಪ್ರಸಿದ್ಧವಾಗಿದೆ" ಎಂದು ನಕ್ಕು, ಆ ಬೆಡಗುಗಾತಿಯ ಮನೆಗೆ ಬಂದು ಈ ಯೆರಡು ಕಾಲೆತ್ತಿಗೆ ಆತನ ಕಸವರವೆಂಬ ಕಸವನ್ನು ಬಿಸುಡು "ಎಂದುಸಿರಲು; ಆ ಗಣಿ ಕೆಯೂ ನಗುತ್ತ ಆ ಚಿನ್ನವನ್ನು ಕೊಟ್ಟುಬಿಟ್ಟಳು. ಆ ಹಾರುವನದನ್ನು ಕೈಕೊಂಡು ಸತ್ತು ಹುಟ್ಟಿದಂತೆ ಸಂತೋಷಿಸುತ್ತ ಮನೆಗೆ ನಡೆದನು.

ಎಲ್ಲೈ, ಕಾಣಭೂತಿಯೇ ! ನಾನು ಎಲ್ಲಿ ಹಿಡದರಲ್ಲಿ ಹೀಗೆ ವಿನೋದಗಳನು ನೋಡುತ್ತೆ ಇಂದ್ರಮಂದಿರದಂತಿರುವ ರಾಯನರಮನೆಗೆಯ್ತ್ದೆನು. ಮೊದಲು ಶಿಷ್ಯರ ದೆಸೆಯಿಂದ ತಿಳಿಯಪಡಿಸಿಕೊಂಡು ಒಳಕ್ಕೆ ಹೋಗಿ, ಅಲ್ಲಿಯೊಡ್ಡೋಲಗದಲ್ಲಿ ದೇವ ಸಮೂಹದಿಂದ ಪರಿವೃತನಾದ ದೇವೇಂದ್ರನಂತೆ ಶರ್ವವರ್ಮನೇ ಮೊದಲಾದವರಿಂದ ಬಳ ಸಲ್ಪಟ್ಟವನೂ ರನ್ನಸಿಂಗಮಣೆಯೇರಿದವನೂ ಆದ ಸಾತವಾಹನ ಮಹಾರಾಜನ ದರ್ಶನ ವನ್ನು ಮಾಡಿದೆನು. ರಾಯನನಾಶೀರ್ವದಿಸಿ ಸುಖಾಸೀನನೂ ಆದೆನು. ಅರಸನೂ ನನ್ನನ್ನು ವಿಶೇಷವಾಗಿ ಗೌರವಿಸಿದನು. ಆಗಳಲ್ಲಿ ಶರ್ವವರ್ಮಾದಿಗಳೂ ರಾಯನೊಡನೆ "ಜೀಯ, ಈ ಗುಣಾಢ್ಯ ಪಂಡಿತೋತ್ತಮನು ಎಲ್ಲಾ ಕಡೆಯಲ್ಲಿಯೂ ಸುಪ್ರಸಿದ್ಧಿ ಪಡೆ ದಿರುವನು. ಸಕಲ ಕಲಾಕುಶಲನು. ಇದರಿಂದಲೇ ಈತನ ಹೆಸರು ಅನ್ವರ್ಥವಾಗಿದೆ", ಎಂದಿಂತು ನನ್ನನ್ನು ಸಂಶ್ಲಾಘಿಸಿದರು. ಅದರಿಂದ ಸಾದರ ಚಿತ್ತನಾದ ಸಾತವಾಹನನು ಆಗಲೇ ನನ್ನನ್ನು ಸತ್ಕರಿಸಿ ಮಂತ್ರಿಯನ್ನಾಗಿ ನೇಮಿಸಿದನು. ಅದು ಮೊದಲ್ಗೊಂಡು ಅರಸುಗೆಲಸವನ್ನು ವಿಚಾರಿಸಿಕೊಳ್ಳುತ ಪಾಠಪ್ರವಚನದಿಂದ ಶಿಷ್ಯವರ್ಗವನ್ನೂ ಅಭಿ ವೃದ್ಧಿಗೊಳಿಸುತ್ತ, ಮದುವೆ ಮಾಡಿಕೊಂಡಲ್ಲಿಯೇ ಸುಖಿಯಾಗಿದ್ದೆನು.

## ದೇವೀ ಕೃತೋದ್ಯಾನ ಕಥೆ

ಹೀಗಿರಲೊಂದು ದಿನದಲ್ಲಿ ನಾನು ಗೋದಾವರೀ ತೀರದಲ್ಲಿ ವಿಹಾರವಾಗಿ ಹೊರಟು ಅಲ್ಲಿ ದೇವೀಕೃತಿಯೆಂಬ ಒಂದುದ್ಯಾನವನ್ನು ಕಂಡೆನು. ಅದು ಭೂಮಿಗಿಳಿದು ಬಂದ ನಂದನವನವೋ ಎಂಬಂತೇ ಬಹಳ ರಮಣೀಯವಾಗಿರಲು ಅದರ ಕಾವಲುಗಾರನನ್ನು ಈಯುದ್ಯಾನವು ಹೇಗುಂಟಾಯಿತೆಂದು ಕೇಳಿದೆನು. ಅವನು ಹೀಗೆ ಬಿನ್ನವಿಸಿದನು – ಸ್ವಾಮೀ ! ನಾನು ಹಿರಿಯರಿಂದ ಕೇಳಿರುವ ಸಂಗತಿಗಳನ್ನು ಅರಿಕೆಗೆಯ್ವೆನು. ಚಿತ್ತೈಸಿರಿ ! ಪೂರ್ವಕಾಲದಲ್ಲಿ ಮೌನವ್ರತವೂ ನಿರಾಹಾರವ್ರತವೂ ಉಳ್ಳವನಾದ ಬ್ರಾಹ್ಮಣನೊಬ್ಬನು ಇಲ್ಲಿಗೆ ಬಂದನು. ಆತನು ಈ ವಿಚಿತ್ರೋದ್ಯಾನವನ್ನೂ ಈ ದೇವಾಲಯವನ್ನೂ ನಿರ್ಮಿಸಿ ದನು. ಈಯಚ್ಚರಿ ನೋಡಲು ಬ್ರಾಹ್ಮಣರೆಲ್ಲರೂ ಬಂದು ಆತನನ್ನು ನಿಮ್ಮ ವೃತ್ತಾಂತ ವನ್ನು ನಿರೂಪಿಸಿರೆಂದು ನಿರ್ಬಂಧಿಸಲು ಹೀಗೆ ಹೇಳಿದನಂತೆ : "ಇಲ್ಲಿ ನರ್ಮದಾ ನದೀತೀರ ದಲ್ಲಿ ಭರುಕಚ್ಛಪವೆಂಬ ದೇಶವಿರುವುದು. ಅದು ನನ್ನ ಜನ್ಮಭೂಮಿ. ನಾನು ಬಡವ ನಾಗಿದ್ದರೂ ಮೈಗಳ್ಳನಾಗಿದ್ದೆನು. ನನಗೆ ಯಾರೂ ಭಿಕ್ಷವಿಡದೆ ಹೋದರು. ಅದರಿಂದ ನಾನು, ನನ್ನ ಬದುಕಿಗೆ ಬೇಸರುಗೊಂಡವನಾಗಿ ಮನೆ ಬಿಟ್ಟು ಹೊರಟು ನಾನಾ ತೀರ್ಥ ಪ್ರದೇಶಗಳನ್ನು ಸೇವಿಸುತ್ತ ಕಡೆಗೆ ವಿಂಧ್ಯವಾಸಿನಿಯ ದರ್ಶನಕ್ಕೆ ಹೋಗಿಯಾ ಜಗದಂಬೆಯನ್ನು ಬಗೆದಣಿಯ ನೋಡಿ ಈ 'ದೇವಿಗೆ ನಾಡಿಗರೆಲ್ಲರೂ ಬೇಟೆಯಾಡಿದ ಮಿಗಗಳನ್ನು ಬಲಿಕೊಟ್ಟು ಮೆಚ್ಚಿಪರು. ಮೂರ್ಖನಾದ ನಾನು ನನ್ನನ್ನೇ ಕೋಣ ಕಾಣಿಕೆಯ ಬಲಿ ಕೊಡುವೆನು' ಎಂದು ನಿಶ್ಚಯಿಸಿ ನೆತ್ತಿಯ ಕತ್ತರಿಸಲು ಕತ್ತಿಯನ್ನೆತ್ತಿ ದೆನು. ಒಡನೆಯೇ ಆ ದೇವಿ ಪ್ರಸನ್ನೆಯಾಗಿ ಇದಿರಿಗೆ ಬಂದು "ಮಗೂ ! ನೀನು

ಸಿದ್ಧನಾದೆ, ಆತ್ಮಹತ್ಯೆಗೊಳ್ಳಬೇಡ, ನನ್ನ ಬಳಿಯಿರು" ಎಂದು ವರವಿತ್ತು ವರದೆ ಯಾದಳು. ಆಗಲೇ ನನಗೆ ದೇವತ್ವವುಂಟಾಯಿತು. ಅದು ಮೊದಲು ನನಗೆ ಹಸಿವು ಬಾಯಾರಿಕೆಗಳ ಹಾವಳಿ ತಪ್ಪಿತು. ಬಳಿಕೊಂದು ದಿನದಲ್ಲಿಯಾದೇವಿ "ವತ್ಸಾ, ನೀನು ಪ್ರತಿಷ್ಠಾನದಲ್ಲಿ ಒಂದು ಮನೋಹರೋದ್ಯಾನವನ್ನು ನಿರ್ಮಿಸುವನಾಗು" ಎಂದಾಜ್ಞಾಪಿಸಿ ನನಗೊಂದು ದಿವ್ಯಬೀಜವನ್ನಿತ್ತಳು. ಬಳಿಕ ಅದನ್ನು ತಂದು ಇಲ್ಲಿ ನೆಟ್ಟೆನು. ಅದರ ಮಹಿಮೆಯಿಂದೀಯುದ್ಯಾನವಾಯಿತು. ಇದನ್ನು ನೀವು ಕಾಪಾಡಿಕೊಳ್ಳುವುದು" ಎಂದು ಹೇಳಿ ಆ ಬ್ರಾಹ್ಮಣನು ಅದೃಶ್ಯನಾಗಿ ಹೋದನು: ಸ್ವಾಮಿಾ ! ಇದೀ ತೋಟ ದೇರ್ಪಟ್ಟ ಸಮಾಚಾರವೆಂದು ಉದ್ಯಾನಪಾಲಕನು ಬಿನ್ನವಿಸಲು ಅಲ್ಲಿಯಾ ದುರ್ಗಾಂಬೆ ಗೊಗೆದ ಅನುಗ್ರಹವನ್ನು ಕೇಳಿ ಆಶ್ಚರ್ಯಪಟ್ಟು ಮನೆಗೆ ಬಂದೆನು. ಎಂದು ಗುಣಾ ಢ್ಯನು ಈ ಕಥೆ ಮುಗಿಸುತಲೂ, ಕಾಣಭೂತಿ "ಸಾತವಾಹನನಿಗೆ ಆ ಹೆಸರೇಕೆಯಾಯಿತು" ಎಂದು ಬೆಸಗೊಂಡನು.

## ಸಾತವಾಹನನ ಪೂರ್ವ ವೃತ್ತಾಂತವು

ಗುಣಾಢ್ಯನು ಹೇಳುತ್ತಿರುವನು : ಕಾಣಭೂತೀ ! ಪೂರ್ವದಲ್ಲಿ ದೀಪಕರ್ಣಿ ಯೆಂಬ ಭೂಪನಿದ್ದನು. ಆತನಿಗೆ ಪ್ರೀತಿಪಾತ್ರೆಯಾದ ಶಕ್ತಿಮತಿಯೆಂಬ ರಕ್ತಿಗೊಂಡು ರಂಜಿಸುವ ರಮಣಿ ಪತ್ನಿಯಾಗಿದ್ದಳು. ಒಂದು ದಿನವಾತನಾಕೆಯೊಡನೆ ಕಾಮಕೇಳಿ ಕೊಂಡು ನಿದ್ರಿಸುತ್ತಿರಲು ಕಾಲಸರ್ಪವು ಕಚ್ಚಿಯಾಕೆ ಕಾಲಗತಿಗೈದಿದಳು. ಸೊಗದ ಬೆಳೆ ಕಡೆಗೆ ಬಗೆ ಮುರಿವುದಲ್ಲವೆ ? ಆಕೆಯಲ್ಲಿಯೆ ಅತ್ಯಂತಾನುರಕ್ತನಾದ ದೀಪಕರ್ಣಿ ಭೂಪನು ತಾನು ಅಪುತ್ರನಾದರೂ ಆ ಶೋಕವೇಗದಿಂದ ಬ್ರಹ್ಮಚರ್ಯವ್ರತವನವ ಲಂಬಿಸಿದನು. ಬಳಿಕ ತನ್ನನಂತರದಲ್ಲಿ ರಾಜ್ಯವಾಳಲು ರಾಯಕುವರನಿಲ್ಲದೆ ಹೋದ ನೆಂಬ ಚಿಂತೆಯಿಂದ ಕೊರಗುತ್ತಿದ್ದ ದೀಪಕರ್ಣಿಗೆ ಕನಸಿನಲ್ಲಿ ವರದನಾದ ಶಂಕರನು ಪ್ರಸನ್ನನಾಗಿ "ಎಲೈ ಅರಸೇ ! ಈ ಕಾಡಿನಲ್ಲಿ ಸಂಚರಿಸುತ್ತಿದ್ದರೆ ಅಲ್ಲಿ ಸಿಂಹದ ಮೇಲೆ ಸಂಚರಿಸುವ ಬಾಲಕನೊಬ್ಬನಿರುವನು. ಅವನನ್ನು ಮನೆಗೆ ಕರೆದು ತಂದುಕೊಳ್ಳೈ, ಅವನೇ ನಿನಗೆ ಕುವರನು." ಎಂದು ಅನುಗ್ರಹಿಸಿದನ್ನು ರಾಯನು ಎಚ್ಚೆತ್ತು ಬಳಿಕ ಆ ಸ್ವಪ್ನವನ್ನೇ ಸ್ಮರಿಸಿಕೊಳ್ಳುತ್ತ ಸಂತೋಷಿಸುತ್ತಿದ್ದು ಒಂದು ದಿನದಲ್ಲಿ ಕಾಡಿನೊಳಗೆ ಬೇಂಟೆಯುತ್ಸಾಹ ದಲ್ಲಿ ಬಹು ದೂರ ಹೋಗಿ ನಡುವಗಲಲ್ಲಿ ಸಿಂಹದ ಮೇಲೆ ಹತ್ತಿಕೊಂಡು ಸೂರ್ಯನಂತೆ ದೇದೀಪ್ಯಮಾನನಾದ ಬಾಲಕನೊಬ್ಬನನ್ನು ಕಂಡನು. ಒಡನೆಯೇ ದೀಪಕರ್ಣಿಗೆ ಕನಸು ನೆನಪಿಗೆ ಬಂದುದು. ಸಿಂಹವು ಬಾಲಕನನಿಳಿಸಿ ನೀರು ಕುಡಿಯಲು ಅಲ್ಲಿರುವ ಸರೋವರಕ್ಕೆ ಇಳಿಯಿತು. ದೀಪಕರ್ಣಿಯಾ ಸಿಂಗದ ಮೇಲೆ ಬಾಣ ಪ್ರಯೋಗ ಮಾಡಿದನು. ಕೂಡಲೆಯಾಮೃಗೇಂದ್ರನು ಆ ದೇಹವನುಳಿದು ಮಾನವದೇಹವಾಂತು, ಇದೇ ನಾಶ್ಚರ್ಯವೆಂದು ರಾಯನು ಬೆಸಗೊಳ್ಳಲು, ಹೀಗೆ ಹೇಳಿದನು— "ಎಲೆಯರಸೇ ! ನಾನು ಕುಬೇರನ ಮಿತ್ರನಾದ ಯಕ್ಷನು. ನನ್ನ ಹೆಸರು ಸಾತನು. ನಾನು ಪೂರ್ವದಲ್ಲಿ

ಗಂಗೆಯಲ್ಲಿ ಮೀನಳಾದ ಮುನಿಕನ್ಯೆಯನ್ನು ಕಂಡೆನು. ಆಕೆಯೂ ನನ್ನನವಲೋಕಿಸಿ ಕಾಮವಶೆಯಾದಳು. ನಾವಿರ್ವರೂ ಗಾಂಧರ್ವವಿಧಿಯಿಂದ ಮದುವೆ ಮಾಡಿಕೊಂಡೆವು. ಆ ಸುದ್ದಿಗೇಳಿ ಆಕೆಯ ನಂಟರೆಲ್ಲರೂ ಕ್ರೋಧದಿಂದ "ಪಾಪಿಗಳಿರಾ ! ಸ್ವೇಚ್ಛಾವಿಹಾರಿಗಳಾದ ನೀವಿಬ್ಬರೂ ಸಿಂಹಗಳಾಗಿ ಹೋಗಿರಿ ಎಂದು ಶಪಿಸಿ, ಆಕೆಗೆ ಪುತ್ರಜನನವಾಗುವವರೆಗೂ ನನಗೆ ನಿನ್ನ ಬಾಣವು ಸೋಂಕುವವರೆಗೂ ಶಾಪದವಧಿಯನ್ನು ಅಪ್ಪಣೆಯಿತ್ತರು. ಬಳಿಕ ನಾವಿಬ್ಬರೂ ಸಿಂಹದಂಪತಿಗಳಾಗಿ ಜನಿಸಿದೆವು. ಕಾಲಕ್ರಮದಿಂದಾಕೆ ಬಸಿರಿಯಾಗಿ ಈ ಹುಡುಗನನ್ನು ಹೆತ್ತು ಮಡಿದಳು. ನಾನೇ ಇವನನ್ನು ಇತರ ಸಿಂಹಿಕೆಯರ ಹಾಲಿನಿಂದ ಬೆಳೆಯಿಸಿದೆನು. ನಿನ್ನಂಬು ಬೀಳಲು ಶಾಪ ಮುಕ್ತಿಯಾಯಿತು. ಇದೋ ನೋಡೀ ಮಹಾಪುರುಷನನ್ನು ನಿನಗೆ ಕೊಡುವೆನು. ಇವನನ್ನು ಮಗನನ್ನಾಗಿ ಕೈಕೊಳ್ಳಿ. ಹೀಗೆಂಬೀ ನಡೆವಂತೆ ಆ ಮುನೀಂದ್ರರ ಕಟ್ಟಳೆಯುಂಟು" ಎಂದು ನುಡಿದು ಸಾತನು ಅಂತರ್ಧಾನವಾಗುತಲೂ ರಾಯನಾಕುವರನನ್ನು ನಿಜಮಂದಿರಕ್ಕೆ ಕರೆದೊಯ್ದನು. ಸಾತನವನಿಗೆ ವಾಹನವಾದುದರಿಂದ ಸಾತವಾಹನನೆಂದು ಹೆಸರಿಟ್ಟು ಉಚಿತ ವಯಸ್ಸು ಬರಲು ರಾಜ್ಯಪಟ್ಟವನವನಿಗೆ ಕಟ್ಟಿ ದೀಪಕರ್ಣಿ ಭೂಪತಿ ಅರಣ್ಯಕ್ಕೆ ತೆರಳಿದನು. ಅದು ಮೊದಲ್ಗೊಂಡು ಸರ್ವಭೂಮಂಡಲವನ್ನೂ ಈ ಮಹಾರಾಜನಾಳುತ್ತಿರುವನು. ಇವನಿಗೆ ಸಾತವಾಹನನಾಮವು ಬರಲಿದುವೆ ಕಾರಣವು. ಎಂದೀ ಮೇರೆ ಗುಣಾಢ್ಯನು ಅವಾಂತರ ಕಥೆ ಹೇಳಿ, ಪ್ರಕೃತ ಸಂದರ್ಭವನನುಸರಿಸಿ ಮರಳಿಯಿಂತೆಂದನು :

## ಸಾತವಾಹನನಿಗೆ ರಾಣಿಯಿಂದ ಮೂರ್ಖನೆಂಬವಮಾನವು

ಕಾಣಭೂತಿಯೇ ! ಆ ಬಳಿಕೊಂದು ವೇಳೆಯಲ್ಲಿ ಸಾತವಾಹನನು ವಸಂತ ಕಾಲವು ಬರಲು ಆ ದೇವೀಕೃತೋದ್ಯಾನಕ್ಕೆ ಹೋಗಿ ನಂದನವನದಲ್ಲಿ ಮಹೇಂದ್ರನು ದಿವ್ಯಾಂಗನೆಯರೊಡನೆ ವಿಹರಿಸುವಂತೆ ತಾನು ರಾಣಿಯರೊಡನೆ ಬಹಳ ಹೊತ್ತು ವನ ವಿಹಾರವನ್ನು ನಡೆಯಿಸಿ ಅವರೊಡನೆ ಜಲಕ್ರೀಡೆಗಾಗಿ ಹೊಕ್ಕನು. ಆಗಳಾ ನೀರೆಯರ ಮೇಲೆ ನೀರೆರೆಯುತ್ತ ಜಲಕೇಳಿಗೊಂಡನು. ಅವರೂ ಆತನ ಮೇಲೆ ಪಿಡಿಗಳು ನೀರನ್ನು ಸಲಗನ ಮೇಲೆ ಚಲ್ಲುವಂತೆ ನೀರೆರಚುತ್ತಿದ್ದರು. ಕಣ್ಣ ಕಾಡಿಗೆ ಕರಂಗಿ ಹೋಗಿ ಕೆಂಪೇರಿದ ಕೆಂದಾವರೆಗಳೂ ಸ್ನಾನದಿಂದ ಬಣ್ಣವೇರಿದ ಮುಖಾದ್ಯವಯವಂಗಳೂ ಒದ್ದೆ ಬಟ್ಟೆಗಳು ಹೊದ್ದಿರುವ ಮೈಯಲ್ಲಿ ಕಂಗೊಳಿಸುವ ನಿಮ್ನೋನ್ನತ ವಿಭಾಗಗಳೂ ಉಂಟಾಗಿ ಆ ಸುಂದರಿಯರು ಆತನ ಮನಸ್ಸನ್ನು ಅಪಹರಿಸಿದರು. ಬಳ್ಳಿಗಳನ್ನು ಗಾಳಿಯಂತೆ ವನಮಧ್ಯದಲ್ಲಿ ಸಾತವಾಹನನು ತನ್ನ ಪ್ರೇಯಸಿಯರನ್ನು ಗಳಿತತಿಲಕ ಪತ್ರೆಯರನ್ನಾಗಿಯೂ ಚ್ಯುತಾಭರಣಪುಷ್ಪೆಯರನ್ನಾಗಿಯೂ ಮಾಡಿದನು. ಅವರಲ್ಲಿ ಪಯೋಧರಭರಾಲಸೆಯೂ ಶಿರೀಷಸುಮಕೋಮಲೆಯೂ ಆದ ರಾಣಿಯೊಬ್ಬಳು ಜಲ ಕೇಳಿಯಿಂದ ಬಳಲಿದವಳಾಗಿ ತನ್ನ ಮೇಲೆ ರಾಯನು ನೀರೆರೆಯುತ್ತಿರಲು ತಡೆಯಲಾರದೆ ಸಂಸ್ಕೃತದಲ್ಲಿ "ರಾಜನ್ ಮಾಮೋದಕೈಸ್ತಾಡಯ" ಎಂದು ಬೇಡಿದಳು.

ಮಾರಾಯನೊಡನೆಯೇ ವಿಸ್ತಾರವಾಗಿ ಮೋದಕಗಳನ್ನು ತರಿಸಿದನು. ಅದರಿಂದ ಆಕೆ ನಕ್ಕು, "ರಾಯನೇ! ನೀರಲ್ಲಿ ಮೋದಕಗಳಿಗೆ ಸಂದರ್ಭವೇನು (ಮಾ+ಉದಕೈಃ+ ತಾಡಯ=ನೀರಿನಿಂದ ಹೊಡೆಯಬೇಡ.) ಎಂದಲ್ಲವೆ ನಾನು ಬೇಡಿಕೊಂಡೆನು. ಮಾಶಬ್ದೋದಕ ಶಬ್ದಗಳ ಸಂಧಿಯನ್ನೂ ಕಾಣೆಯಾ? ಸಮಯೌಚಿತ್ಯವನ್ನೂ ಅರಿಯದಿರುವೆ. ನೀನೇನಿಷ್ಟು ಮೂರ್ಖನಾಗಿರುವೆ?" ಎಂದು ಪರಿಹಾಸ ಮಾಡಿದಳು. ಶಬ್ದಶಾಸ್ತ್ರದಲ್ಲಿ ಜಾಣೆಯಾದ ರಾಣಿಯಾಡಿದ ನುಡಿಯಿಂದ ಪರಿಜನರೆಲ್ಲರೂ ಪರಿಹಾಸವಾಗಿ ನಕ್ಕರು. ಬಳಿಕ ರಾಯನು ಲಜ್ಜಾಕ್ರಾಂತಚಿತ್ತನಾಗಿ ಒಡನೆಯೇ ಜಲಕ್ರೀಡೆ ಬಿಟ್ಟು ಉತ್ಸಾಹವುಡುಗಿ ತನ್ನ ಮೇಲೆ ತಾನೇ ಬೇಸರಗೊಳ್ಳುತ್ತ ತನ್ನರಮನೆಗೆ ತೆರಳಿದನು. ಅಲ್ಲಿಯೂ ಚಿಂತಾಕ್ರಾಂತನಾಗಿ ಭುಜಿಸದೆ ಯಾರೇನು ಕೇಳಿದರೂ ಚಿತ್ರದ ಗೊಂಬೆಯಂತೆ ಪಡಿನುಡಿಯದೆ ಪಟ್ಟಿದ್ದನು. "ಪಾಂಡಿತ್ಯವುಂಟಾಗುವುದೋ ಮರಣ ಉಂಟಾಗುವುದೋ ಇವೆರಡರಲ್ಲಿ ನನಗೊಂದೆಶರಣು" ಎಂಬುದೆ ಆತನ ಭಾವನೆಯಾಗಿರುತ್ತಿರಲು, ಆಕಸ್ಮಿಕವಾಗಿ ರಾಯನಿಗೆ ಉಂಟಾದೀಯವಸ್ಥೆ ಕಂಡು ಪರಿಜನರೆಲ್ಲರೂ ಏನೂ ತೋರದೆ ಹೆದರಿಕೊಂಡಿದ್ದರು.

## ಶರ್ವವರ್ಮನು ಸಾತವಾಹನನನ್ನು ಪಂಡಿತನಾ ಮಾಡುವಿಕೆ

ಹೀಗಿರುವಲ್ಲಿ ನಾನೂ ಶರ್ವವರ್ಮನೂ ಆ ವೃತ್ತಾಂತವನ್ನು ತಿಳಿದುಕೊಂಡೆವು. ಹಾಗೆಯೇ ಅಂದಿನ ಹಗಲಿರುಳು ಕಳೆಯಿತು. ಅಲ್ಲಿಗೂ ಅರಸನು ಸಮಾಹಿತನಾಗಲಿಲ್ಲವೆಂದು ಬಲ್ಲವರಾಗಿ ರಾಜಹಂಸನೆಂಬ ರಾಜಭಟನನ್ನು ಕರೆದು ರಾಯನ ದೇಹಸ್ಥಿತಿಯೇನೆಂದು ಕೇಳಿದೆವು. ಅವನು "ಆಳುವವರಿಗೆ ಇಷ್ಟು ಮನೋವ್ಯಥೆಯಿಂದಿನವರೆಗೆಂದೂ ಬಂದಿರಲಿಲ್ಲ. ವಿಷ್ಣು ಶಕ್ತಿಯ ಮಗಳು ತನ್ನಯಲ್ಪಪಾಂಡಿತ್ಯದಿಂದ ಗರ್ವಿಸಿ ಮಾರಾಯನನ್ನು ಈ ತೆರನಾಗಿ ಅವಮಾನಿಸಿದಳೆಂದು ಮಿಕ್ಕರಾಣಿಯರು ಆಕೆಯ ಮೇಲೆ ಕಕ್ಕುಲಿತೆಗೊಂಡು ನುಡಿವರು" ಎಂದು ಅರಿಕೆಗೆಯ್ದನು. ಅದನರಿತು ನಾನು ಅನುತಾಪಗೊಂಡು ಸಂದೇಹಿಸುತ್ತ ಶರ್ವವರ್ಮನೊಡನೆ "ರಾಯನಿಗೆ ವ್ಯಾಧಿಯಾದರೆ ವೈದ್ಯರು ಬಂದಿರುವರು. ಆಧಿಯಾದರೆ ಅದಕ್ಕೆ ಪ್ರಕೃತದಲ್ಲಿ ಕಾರಣವೇನಿಲ್ಲ. ರಾಜ್ಯವು ನಿಷ್ಕಂಟಕವಾಗಿದೆ. ಹಗೆಯೆಂಬ ಸುದ್ದಿಯೇ ಇಲ್ಲ. ಪ್ರಜೆಗಳೆಲ್ಲರೂ ಸಾನುರಾಗರಾಗಿರುವರು, ಎಲ್ಲಿಯೂ ಕುಂದೇನೂ ಇಲ್ಲ. ಆಕಸ್ಮಿಕವಾಗಿ ಈತನಿಗೆ ಇಷ್ಟು ಚಿಂತೆಯೇಕೆ?" ಎಂದು ಬೆಸಗೊಂಡೆನು. ಅದಕ್ಕೆ ಮಹಾಬುದ್ಧಿಯಾದ ಶರ್ವವರ್ಮನು "ನನಗೆ ತಿಳಿದಿದೆ. ರಾಯನು ತಾನು ಮೂರ್ಖನಾದೆನೆಂದು ದುಃಖಿಸುತ್ತಿರುವನು. ಈತನು ತಾನು ಮೂರ್ಖನೆಂದು ಮೊದಲೇ ಬಲ್ಲವನಾಗಿ ತನಗೆ ಹೇಗಾದರೂ ಪಾಂಡಿತ್ಯವುಂಟಾಗುವುದೇ ಎಂದು ಅನವರತವಪೇಕ್ಷಿಸುತ್ತಿರುವನು. ಆತನಿಂಗಿತವನ್ನು ನಾನು ಮೊದಲೆ ಬಲ್ಲೆನು. ಆ ಮೂರ್ಖತೆಗಾಗಿಯೆ ರಾಣಿ ಈತನನವಮಾನಗೊಳಿಸಿದಳೆಂದೂ ಕೇಳಿದೆವಲ್ಲವೆ?" ಎಂದೊರೆದನು. ಹೀಗೆ ನಾವಿಬ್ಬರೂ ಆಲೋಚಿಸಿಕೊಂಡು ಆ ರಾತ್ರಿ ಕಳೆಯಲು ಮೂರನೆಯ ದಿನದ ಪ್ರಾತಃಕಾಲದಲ್ಲಿ ರಾಯನರಮನೆಗೆ ಹೋದೆನು. ಅಲ್ಲಿ ಯಾರೂ ಒಳಪುಗ

ಲಾಗವೆಂದು ಅರಸನಪ್ಪಣೆಯಾಗಿದ್ದರೂ ಏನೋ ಒಂದುಪಾಯದಿಂದ ನಾನು ಒಳಪೊಕ್ಕು ಹೋದೆನು. ಶರ್ವವರ್ಮನೂ ನನ್ನ ಹಿಂದೆಯೇ ಬೇಗನೆ ಬಂದು ಸೇರಿದನು. ನಾನು ಹೋಗಿ ಹತ್ತಿರದಲ್ಲಿ ಕುಳಿತು, "ಪ್ರಭೂತ್ತಮಾ! ಏಕೆ ಹೀಗೆ ನಿಷ್ಕಾರಣವಾಗಿ ಸಂಕಟಗೊಳ್ಳುತ್ತಿರುವೆ" ಎಂದು ಬೆಸಗೊಂಡೆನು. ಅದಕ್ಕೂ ಆತನುತ್ತರವೀಯದೆ ಮುನ್ನಿನಂತೆ ಮೌನವಾಗಿದ್ದನು. ಆಗಳಾ ಶರ್ವವರ್ಮನು, "ಪ್ರಭುವರ್ಯನೇ! ನೀನು ಮುನ್ನೊಂತಾದರೂ ನನಗೆ ವಿದ್ಯೆ ಲಭಿಸುವುದೇ? ಎಂದು ಕೇಳಿದೆಯಲ್ಲವೆ. ಅದಕ್ಕಾಗಿ ನಾನು ನಿನ್ನೆ ರಾತ್ರಿ ಸ್ವಪ್ನ ಮಾಣವಕನನ್ನು ಮಾಡಿದೆನು. ಕನಸಿನಲ್ಲಿ ಗಗನದಿಂದ ಒಂದು ತಾವರೆ ಇಳಿಯಿತು. ದಿವ್ಯಕುಮಾರನೊಬ್ಬನದನ್ನು ಅರಳಗೊಳಿಸಿದನು. ಬಳಿಕ ಅದರೊಳಗಿನಿಂದ ಬಿಳು ಬಟ್ಟೆಯುಟ್ಟ ಬಾಲೆಯೊಬ್ಬಳು ಬಯಲಿಗೆ ಬಂದು ಒಡನೆಯೇ ನಿನ್ನ ಬಾಯೊಳಕ್ಕೆ ಪೊಕ್ಕಳು" ಎಂಬ ಅದ್ಭುತವನಾಡಿದನು. ರಾಯನೂ ಆ ನುಡಿಯ ಕಡೆಗೆ ತಿರುಗಿದನು. ಶರ್ವವರ್ಮನು "ಹೀಗೆ ಕನಸುಗಂಡು ಎಚ್ಚತ್ತು ಸಾಕ್ಷಾತ್ಸರಸ್ವತಿಯೇ ನಿನ್ನ ಮುಖಕಮಲಕ್ಕವತರಿಸಿದಳೆಂದು ತರಿಸಂದು ಬಗೆದುಂಡು ಇಲ್ಲಿಗೆ ಬಂದು ಬಿನ್ನವಿಸಿದೆ"ನೆಂದು ತನ್ನ ಕನಸನ್ನು ಬಣ್ಣಿಸಿದನು. ಸಾತವಾಹನನು ಒಡನೆಯೇ ಮೌನಬಿಟ್ಟು ನನ್ನೊಡನೆ ಸಾಭಿಪ್ರಾಯವಾಗಿ, "ಆರ್ಯನೇ! ಅಕ್ಕರೆಯಿಂದೋದಿಸಿದರೆ ಪುರುಷನಿಗೆ ಪಾಂಡಿತ್ಯವೆಷ್ಟು ಕಾಲದಲ್ಲಿ ಉಂಟಾಗುವುದು? ವಿದ್ಯೆಯಿಲ್ಲದೆ ಈ ನನ್ನಯೈಶ್ವರ್ಯವು ಶ್ರೀ ಬೆಳಗದು. ಕೊರಡಿಗೆ ಮಾಡುವ ಅಲಂಕಾರದಂತೆ ಈ ವಿಭವಗಳು ಮೂರ್ಖನಿಗೇಕೆ?" ಎಂದು ಬೆಸಗೊಂಡನು. ನಾನು "ಲೋಕದಲ್ಲಿ ಮನುಷ್ಯರು ಸರ್ವವಿದ್ಯೆಗಳಿಗೂ ಮುಖ್ಯವಾಗಿ ವ್ಯಾಕರಣವನ್ನು ಹನ್ನೆರಡು ಸಂವತ್ಸರಗಳಲ್ಲಿ ಗ್ರಹಿಸುವರು. ಪೊಡವಿಯೊಡೆಯನೇ! ನಾನು ನಿನಗೆ ಅದನ್ನು ಆರು ವರುಷಗಳೊಳಗೆ ಕಲಿಸುವೆನು." ಎಂದು ನುಡಿವಷ್ಟರಲ್ಲಿಯೇ ಶರ್ವವರ್ಮನು ಅಸೂಯೆಯೊಡನೆ "ಸುಕುಮಾರನೂ ಸುಖಾರ್ಹನೂ ಆದ ರಾಯನು ಇಷ್ಟು ಕಾಲವು ವಿದ್ಯಾಭ್ಯಾಸದ ಸಂಕಷ್ಟವನ್ನು ಹೇಗೆ ಸೈರಿಸುವನು? ಭೂಪತೀ! ನಾನು ನಿನ್ನನಾರುತಿಂಗಳೊಳಗೆ ಪಂಡಿತನನ್ನಾಗಿಸುವೆನು" ಎಂದು ದೃಢವಾಗಿ ನುಡಿದನು. ನಾನು ಅಸಂಭಾವ್ಯನಾದ ಆ ನುಡಿಯನಾಲಿಸಿ ಕನಲ್ದು "ನೀನು ಪ್ರಭುವಿಗೆ ಆರು ತಿಂಗಳಲ್ಲಿ ಪಾಂಡಿತ್ಯವನೊದವಿಸಿಕೊಟ್ಟರೆ ನಾನು ಮನುಷ್ಯವ್ಯವಹಾರದಲ್ಲಿರುವ ಸಂಸ್ಕೃತವು ಪ್ರಾಕೃತವು ದೇಶಭಾಷೆ ಎಂಬೀ ಮೂರು ಭಾಷೆಗಳನ್ನೂ ತ್ಯಜಿಸುವೆನೆಂದು ನಂಬು" ಎಂದು ಶಪಥ ಮಾಡಿದೆನು. "ನನ್ನ ಮಾತಿನಂತೆ ನಾನು ಮಾಡಲಾರದೆ ಹೋದರೆ ೧೨ ಸಂವತ್ಸರಗಳು ನಿನ್ನ ಮೆಟ್ಟುಗಳನ್ನು ತಲೆಯೊಳಿಟ್ಟುಕೊಂಡು ಬಾಳುವೆನು" ಎಂದು ಆತನೂ ಪ್ರತಿಜ್ಞೆಗೆಯ್ದನು. ನಾವಿಬ್ಬರೂ ಹೀಗೆ ಶಪಥಮಾಡಿ ಮನೆಗಳಿಗೆ ಹೋದೆವು. ಮಾರಾಯನು ನಮ್ಮಿಬ್ಬರಿಂದಲೂ ತನ್ನ ಬಯಕೆ ಸಿದ್ಧಿಸುವುದೆಂದು ಭಾವಿಸಿ ಸಮಾಹಿತನಾಗಿದ್ದನು.

ಮನೆಗೆ ಹೋದ ಶರ್ವವರ್ಮನು ತಾನು ಮಾಡಿದ ಅಸಾಧ್ಯ ಪ್ರತಿಜ್ಞೆಗಾಗಿ ಹೆದರಿ ಪಶ್ಚಾತ್ತಾಪಪಡುತ ತನ್ನವಸ್ಥೆಯನ್ನು ಪತ್ನಿಗೆ ಹೇಳಿ ಪರಿತಪಿಸಿದನು. ಆಕೆಯೂ

ದುಃಖಿಸಿ "ನನ್ನೊಡೆಯ ! ಸಂಕಟದಲ್ಲಿ ಬಿದ್ದೆವು. ನಮಗೀ ಅಪಾಯದಲ್ಲಿ ಕುಮಾರ ಸ್ವಾಮಿಗಿಂತಲೂ ಬೇರೆ ಶರಣಿಲ್ಲ" ಎಂದು ಬಗೆಗೊಟ್ಟೆವು. ಆದರೆ ಆತನೂ ತರಿಸಂದು ನಿರಾಹಾರನಾಗಿ ಆ ರಾತ್ರಿಯಲ್ಲಿಯೇ ಬೆಳಗಿನ ಜಾವದೊಳಗೆ ಕುಮಾರ ಕ್ಷೇತ್ರಕ್ಕೆ ಹೊರ ಟನು. ನೇಸರು ಮೂಡುತಲೂ ನಾನಾಸುದ್ದಿಯನರಿತು ರಾಯನಿಗರಿಕೆಗೆಯ್ದನು. ಅರಸನೂ ಇದರ ಪರ್ಯವಸಾನವೇನಾಗುವುದೋ ನೋಡುವೆನೆಂದು ಚಿಂತಿಸುತ್ತಿದ್ದನು. ಹೀಗಿರುವಲ್ಲಿ ಅನವರತವೂ ಅರಸನ ಅಭ್ಯುದಯವನ್ನೇ ಅಪೇಕ್ಷಿಸುವನಾದ ಸಿಂಹಗುಪ್ತ ನೆಂಬ ರಾಜಪುತ್ರನು ಬಂದು "ಮಹಾರಾಯನೇ ! ಆಳುವವರು ದುಃಖಾಕ್ರಾಂತರಾಗಿರು ವುದನರಿತು ತಡೆಯಲಾರದೆ ಪರಿತಪಿಸುತ್ತ ಊರಹೊರಗೆ ಹೋಗಿ ತಮ್ಮ ಶ್ರೇಯಸ್ಸಿ ಗಾಗಿ ಚಂಡಿಕಾದೇವಿಗೆ ಬಲಿಕೊಡುವೆನೆಂದು ನನ್ನ ತಲೆ ಕಡಿಯಲು ಕತ್ತಿಯ ಹಿರಿದೆನು. ಆ ಸಮಯದಲ್ಲಿ ಆಕಾಶವಾಣಿ 'ಎಲೈ, ಹುಡುಗನೇ ! ಸಾಹಸಗೊಳ್ಳಬೇಡ. ನಿನ್ನೊಡೆ ಯನ ಬಯಕೆ ಸಫಲವಾಗುವುದು' ಎಂದು ಹೇಳಿ ನನ್ನ ಸಾಹಸಕ್ಕೆ ತಡೆಯಾಯಿತು. ಅದರಿಂದ ನಿನಗೆ ಕಾರ್ಯಸಿದ್ಧಿ ನಿಶ್ಚಯವು," ಎಂದು ಬಿನ್ನವಿಸಿದನು. ಮತ್ತೆ ರಾಯನ ಮನ್ನಣೆನಡೆದು ಶರ್ವವರ್ಮನ ಬಳಿಗೆ ಇಬ್ಬರು ಚಾರರನ್ನೂ ಕಳುಹಿಸಿದನು. ಶರ್ವ ವರ್ಮನೂ ವಾಯುಭಕ್ಷಕನೂ ದೃಢಮನಸ್ಕನೂ ಮೌನವ್ರತನೂ ಆಗಿ ಹೋಗಿ ಶ್ರೀ ಕುಮಾರಸ್ವಾಮಿಯ ಸನ್ನಿಧಿಗೆ ಸೇರಿದನು. ಅಲ್ಲಿ ಮೈಮೇಲೆ ಮನವಿಡದೆ ಉಗ್ರತಪವ ನಾಚರಿಸಿ ದೇವರನ್ನು ಮೆಚ್ಚಿಸಿದನು. ಬಳಿಕ ಷಣ್ಮುಖ ಸ್ವಾಮಿ ಪ್ರಸನ್ನನಾಗಿ ಶರ್ವ ವರ್ಮನಿದಿರಲ್ಲಿ ಮೂರ್ತೀಭವಿಸಿ ಬಯಸಿದ ಬಯಕೆಗಳಿತ್ತನು. ಶರ್ವವರ್ಮನ ಆ ಅಭ್ಯುದಯ ವಾರ್ತೆಯನ್ನು ಸಿಂಹಗುಪ್ತನ ಚಾರರು ಬಂದು ಮಹಾರಾಜನಿಗರಿಕೆಗೆಯ್ದರು. ಆ ಸುದ್ದಿಯನಾಲಿಸುತಲೂ ರಾಯನಿಗೂ ನನಗೂ ಮೋಡ ಮಾಡುತಲೂ ಜಾದಗೆಗೂ ಅಂಚೆಗೂ ಆಗುವಂತೆ ಸುಖದುಃಖಗಳುಂಟಾದುವು. ಹೀಗೆ ಕುಮಾರ ಸ್ವಾಮಿಯಿಂದ ವರವಾಂತು ಸಿದ್ಧಿಗೊಂಡ ಶರ್ವವರ್ಮನು ಸಂತಸದಿಂದಯ್ತಂದು ಎಣಿಸಿದ ಮಾತ್ರ ದಲ್ಲಿಯೇ ರಾಜನನ್ನು ಸಕಲ ಕಲಾ ನಿಪುಣನನ್ನಾಗಿ ಮಾಡುತ್ತ ಬಂದನು. ಅಹಹ ! ಪರಮೇಶ್ವರಾನುಗ್ರಹವಿದ್ದರೆ ಸಿದ್ಧಿಸಲಾರದಷ್ಟು ಅಸಾಧ್ಯವೇನಿರುವುದು ? ಮಹಾ ರಾಜನ ಅತ್ಯಂತಾದ್ಭುತ ವಿದ್ಯಾಲಾಭ ವೃತ್ತಾಂತವನ್ನು ಕೇಳಿ ರಾಷ್ಟ್ರದಲ್ಲೆಲ್ಲಿ ನೋಡಿ ದರೂ ಎಲ್ಲಾ ಜನರುಲ್ಲಾಸದಿಂದ ಮಹೋತ್ಸವಗಳನ್ನು ಮಹದಾನಂದವಾಗಿ ಮಾಡಿ ದರು. ಮನೆಮನೆಯ ಮೇಲೆಯೂ ಮಹೋತ್ಸವದ ಪಳವಿಗೆಗಳನ್ನು ಮರುದ್ದೇವನು ತಾಂಡವವಾಡಿಸುತ್ತಿದ್ದನು. ಸಾತವಾಹನನು ಶರ್ವವರ್ಮನನ್ನು ಗುರುವರನೆಂದು ನಮ ಸ್ಕರಿಸಿ ರಾಜಾರ್ಹಂಗಳಾದ ಮಣಿಕನಕ ವಸ್ತ್ರಾಲಂಕಾರಗಳಿಂದ ಪರಿಪೂಜಿಸಿ, ಆತನನ್ನು ನರ್ಮದಾ ನದೀ ತೀರದ ಭರುಕಚ್ಛಪದೇಶಕ್ಕೆ ರಾಜನನ್ನಾಗಿ ಮಾಡಿದನು. ಕುಮಾರ ಸ್ವಾಮಿಯ ವರ ವೃತ್ತಾಂತವನ್ನು ಚಾರರಿಂದರಿತು ತನಗರಿಕೆಗೆಯ್ದ ಸಿಂಹಗುಪ್ತನನ್ನು ಸಾತವಾಹನನು ನಿಜ ಸಮಾನವಾದ ಸಂಪದವಿತ್ತು ಸಲಹಿದನು, ತನಗೆ ವಿದ್ಯೆ ಬರಲು

ಕಾರಣವಾದ ವಿಷ್ಣುಶಕ್ತಿ ಪುತ್ರಿಯಾದ ರಾಣಿಯನ್ನು ತನ್ನ ಎಲ್ಲಾ ರಾಣಿಯರಿಗೂ ಪೂಜ್ಯೆಯಾಗಿರುವಂತೆ ತಾನೇ ದೇವೀ ಪಟ್ಟವಿತ್ತು ಸಂಮಾನಿಸಿದನು.

ನೀತಿ : ಕಂದ || ಒಡವುಟ್ಟಿದರಾದೊಡಮೇ
ನೆಡೆಗುಡಲೇಕಾಂತಚರ್ಯೆಗೋರ್ವ್ಯರ್ಪರರೊಳ್ ||
ಕಿಡುವಗೆ ಗಡಂ ಶ್ರುತಾರ್ಥಿಗೆ |
ಪೊಡೆ ಬೆಳೆದಿರೆ ವತ್ಸಗುಲ್ಮರಳಿವೆಣಿಸಿದವೋಲ್ || * ||

ಕಂದ || ಸದುಪಾಯ ಶಕ್ತಿಯಿರ್ದ್ದವ |
ನೊದಗಿದುದಂ ಪಿರಿದು ಮಾಡಿ ವೃದ್ಧಿಗೆ ಬರ್ಪಂ ||
ಪದೆದಳಿದಿಲಿಯಂ ಕೈ ಕೊಂ |
ಡದರಿನೆಯಿಲಿಸೆಟ್ಟಿ ಧನಿಕನಾಗೊಪ್ಪಿರನೇ || * ||

ಕಂದ || ಬಲವುಡುಗಿ ತನ್ನ ಗಂಡಂ |
ವಿಲಾಪಿಸಲ್ ಗರುತೆ ಜಾಣೆ ಯುಕ್ತಿಯಸೊರೆವಳ್ ||
ಕುಲದೇವತಾ ಭಜನೆಯಂ |
ಲಲನಾಮಣಿ ಶರ್ಮವರ್ಮ ಸತಿ ತೋರಿದವೋಲ್ || * ||

ಕಂದ || ಈರ್ವರ ಶಪಥಾಲಾಪದೊ |
ಳೋರ್ವಂ ಮೂರನೆಯನಾಂಪನುತ್ತಮ ಫಲಮಂ ||
ಈರ್ವರ್ಮಂತ್ರಿಗಳಾಪಿರ್ಪಂ |
ಪೋರ್ವಾಗಳ್ ಸಾತವಾಹನಂ ಬುಧನಾದಂ || ೬ ||

# ೭ ನೆಯ ತರಂಗವು

ಗುಣಾಢ್ಯನು ಮತ್ತೆಯಿಂತೆಂದು ಹೇಳುವನು : ಕಾಣಭೂತಿಯೇ! ಬಳಿಕ ನಾನು ಮೌನವನಾಶ್ರಯಿಸಿ ರಾಜಸನ್ನಿಧಿಗೆ ಹೋದೆನು. ಅಲ್ಲಿ ಬ್ರಾಹ್ಮಣನೊಬ್ಬನು ತಾನು ರಚಿಸಿದ ಶ್ಲೋಕವನೋದಿದನು. ಅದರರರ್ಥವನ್ನು ರಾಯನು ತಾನಾಗಿಯೆ ಸಂಸ್ಕೃತ ಭಾಷೆಯಲ್ಲಿ ಹೇಳಿದನು. ಅದನವಲೋಕಿಸಿ ಅಲ್ಲಿನವರೆಲ್ಲರೂ ಸಂತೋಷಿಸಿದರು. ಆ ಸಮಯದಲ್ಲಿ ಶರ್ವವರ್ಮನನ್ನು ಕುರಿತು "ಸ್ವಾಮಿ! ತಮಗೆ ಕುಮಾರಸ್ವಾಮಿ ಪ್ರಸನ್ನನಾದ ಪ್ರಕಾರವನ್ನು ಪ್ರಕಟಗೊಳಿಸಿರಿ" ಎಂದು ಪ್ರಭು ಪ್ರಾರ್ಥಿಸಿದನು.

## ಸ್ವಾಮಿ ಶರ್ವವರ್ಮನಿಗೆ ಪ್ರಸನ್ನನಾದ ಪ್ರಕಾರವು

ಶರ್ವವರ್ಮನೊರೆವನು : ಅರಸನೇ! ನಾನಿಲ್ಲಿಂದ ಮೌನವಾಂತು ನಿರಾಹಾರನಾಗಿ ಹೊರಟೆನಲ್ಲವೆ? ಪಯಣದ ದಾರಿ ಕೊಂಚವೇ ಉಂಟೆಂಬವರೆಗೆ ನಡೆದು ತೀಕ್ಷ್ಣ ತಪಸ್ಸಿನಿಂದೊಣಗಿ ಬಳಲಿ ಬಾಯಾರಿಯೊಂದೆಡೆಯಲ್ಲಿ ನೆಲದ ಮೇಲೆ ಮೂರ್ಛಿತನಾಗಿ ಬಿದ್ದು ಹೋದೆನು. ಅಲ್ಲಿ "ಏಳೆಲೆ ವತ್ಸ! ನಿನ್ನಯಿಷ್ಟ ಸಿದ್ಧಿಯಾಗುವುದು" ಎಂದು ಶಕ್ತ್ಯಾಯುಧನಾಂತ ಮಹಾಪುರುಷನೊಬ್ಬನು ಕಾಣಿಸಿ ಹೇಳಿದಂತಾಗಲು, ಅಮೃತ ವೃಷ್ಟಿಯಿಂದ ನನೆದೇಳುವವನಂತೆಯೆದ್ದು, ಹಸಿವು ಬಾಯಾರಿಕೆಗಳಿಲ್ಲದೆ ಸುಸ್ಥಿತನಾಗಿದ್ದೆನು. ಬಳಿಕ ನಾನು ಭಕ್ತಿ ಪರವಶನಾಗಿ ದೇವರ ಸನ್ನಿಧಿಗೆ ಹೋಗಿ, ಸ್ನಾನ ಮಾಡಿ ಗರ್ಭಗೃಹದೊಳಕ್ಕೆ ಪ್ರಕುತೂಹಲದಿಂದ ಪ್ರವೇಶಿಸಿದೆನು. ಅಲ್ಲಿ ಭಗವಂತನು ನನಗೆ ದರ್ಶನವಿತ್ತನು. ಆಗಳೆನ್ನ ಬಾಯ್ಗೆ ಸರಸ್ವತಿ ತನ್ನೊಡಲೊಡನೊಳಪೊಕ್ಕಳು. ಆ ಮೇಲೆ ಸ್ವಾಮಿ ಆರು ಬಾಯ್ಗಳಿಂದಲೂ ಸ್ಪಷ್ಟವಾಗಿ "ಸಿದ್ಧೋವರ್ಣ ಸಮಾಮ್ನಾಯಃ" ಎಂದು ಸುಸೂತ್ರವನುಚ್ಚರಿಸಿದನು. ಅದನವಧಾರಿಸಿದನಾದ ನಾನು ಚಃ, ಮನುಷ್ಯ ಜಾತಿ ಸ್ವಭಾವವಾದ ಚಾಪಲ್ಯದಿಂದ ಆ ಮುಂದಣ ಸೂತ್ರವನ್ನು ಊಹಿಸಿ ಹೇಳಿದೆನು. ಅದರಿಂದ ಅರುಮುಗನು "ಎಲೈ, ನೀನು ಸ್ವತಂತ್ರಿಸಿ ಎರಡನೆಯ ಸೂತ್ರವನು ಹೇಳದೆಯಿದ್ದಲ್ಲಿ ನಿನ್ನ ಶಾಸ್ತ್ರವು ಪಾಣಿನಿಶಾಸ್ತ್ರವನಣಗಿಸತಕ್ಕುದು. ನೀನೆರಡನೆಯ ಸೂತ್ರವನ್ನು ಹೇಳಿದುದರಿಂದ ಇದು ಅಲ್ಪ ತಂತ್ರವಾಗಿ ಕಾತಂತ್ರವೆಂಬ ಹೆಸರನೊಂದುವುದು. ನನ್ನ ವಾಹನವಾದ ನವಿಲ ಹೆಸರಿನಿಂದ ಕಾಲಾಪವೆಂದೂ ಪ್ರಸಿದ್ಧಿ ಪಡೆವುದು" ಎಂದು ಹೇಳಿ ನೂತನವಾದ ಆ ಶಬ್ದ ಶಾಸ್ತ್ರವನ್ನು ನನಗೆ ಕ್ಷಣದೊಳಗೆ ಅಂತರ್ಬುದ್ಧವಾಗುವಂತೆ ಅನುಗ್ರಹಿಸಿ ಹೇಳಿ, ಮರಳಿಯೂ "ನಿನ್ನರಸನು ಮುನ್ನೊಬ್ಬ ಮುನೀಂದ್ರನು. ಈತನು ಭರದ್ವಾಜ ಮಹಾಮುನಿಗಳ ಶಿಷ್ಯನು. ಮಹಾತಪಸ್ವಿಯಾದವನು. ಈತನಿಗಾಸಮಯದಲ್ಲಿ ಕೃಷ್ಣನೆಂದು ಹೆಸರು. ಈತನೊಂದು ವೇಳೆ ತನ್ನನ್ನು ಕಾಮಿಸಿದ ಮುನಿಕನ್ನೆಯೋರ್ವಳನ್ನು ನೋಡಿ ಆಕಸ್ಮಿಕವಾಗಿ ಇಂಗೋಲ್ವಿಲ್ಲಿನ ಚೆಂಗೋಲ್ಬಾರಿಗೆ ಬೀಳ್ಪ

ಬಗೆಯ ಸೊಬಗನರಿದವನಾದನು. ಅದರಿಂದ ಮುನಿಗಳೆಲ್ಲರೂ ಶಪಿಸಲು ಆ ಇಬ್ಬರೂ ಮನುಜರಾಗಿ ಹುಟ್ಟಿದರು. ಆತನೇ ನಿನ್ನರಸು ಸಾತವಾಹನನು. ಆ ಮುನಿಕನ್ನೆಯೇ ಆತನ ರಾಣಿ ವಿಷ್ಣು ಶಕ್ತಿಯ ಮಗಳು. ನಿನ್ನನವಲೋಕಿಸುತಲೂ ನಿನ್ನಿಚ್ಛೆಯಿಂದ ಆತನಿಗೆ ಸಕಲ ವಿದ್ಯೆಗಳೂ ಬರುವವು. ಮಹಾತ್ಮರಿಗೆ ಉತ್ತಮಾರ್ಥಗಳೆಲ್ಲವೂ ಜನ್ಮಾಂತರಾರ್ಜಿತಗಳಾಗಿ ತತ್ಸಂಸ್ಕಾರದಿಂದ ಈಗ ಸಿದ್ಧಿಸುವುದಾಗಿ ಕಷ್ಟವಿಲ್ಲದೆಯೆ ಕೈಗೂಡುವುವಲ್ಲವೆ?" ಎಂದು ತತ್ತ್ವವನುಪದೇಶಿಸಿ ಅಂತರ್ಧಾನವೆಯ್ದಿದನು. ನಾನೂ ಹೊರಗೆ ಬಂದೆನು. ನನಗಲ್ಲಿಯಣ ಪೂಜಕರು ಕೊಂಚವಕ್ಕಿ ಕೊಟ್ಟರು, ಒಡನೆಯೇ ನಾನೂ ಇಲ್ಲಿಗೆ ಪಯಣವಾಗಿ, ದಾರಿಯಲ್ಲಿ ಬರುತ ಆ ಅಕ್ಕಿಯನ್ನು ನಿತ್ಯವೂ ಅಟ್ಟುಣುತ ಬಂದರೂ ಅದೇನು ವಿಚಿತ್ರವೋ! ಕಡಿಮೆಯಾಗದೆ ಅಂದಂದಿಗಷ್ಟೇಯಿರುತೆ ಬಂದು ಇಲ್ಲಿಗೆಯ್ದಿದ ಮೇಲೆ ಮುಗಿಯಿತು."

ಎಂದಿಂತು ಶರ್ವವರ್ಮನು ನಿಜವೃತ್ತಾಂತವನ್ನು ಹೇಳಿ ವಿರಮಿಸುತಲೂ ಸಾತವಾಹನ ಮಹಾರಾಜನು ಸಂತೋಷಿಸಿದವನಾಗಿ ಮಾಧ್ಯಾಹ್ನಿಕಸ್ನಾನಕ್ಕಾಗಿ ಒಡ್ಡೋಲಗವಾಗಿಸಿಕೊಂಡು ಒಳಯಿಂಕೆ ಹೋದನು. ಬಳಿಕ ನಾನು ಮೌನವಾಂತಿರುವನಾದುದರಿಂದ ರಾಜಕಾರ್ಯಗಳನ್ನು ನೋಡಲು ಸಾಧ್ಯವಾಗದೆ ರಾಯನೊಡನೆ ಶಿರೋನತಿಯಿಂದಲೇ ಹೋಗಿ ಬರುವೆನೆಂದು ಆತನಿಗೆ ಎಳ್ಳಷ್ಟಾದರೂ ಒಳ್ಳಿತೆಂಬ ಸಮಾಧಾನವಿಲ್ಲದಿದ್ದರೂ ಆ ನಗರದಿಂದ ಇಬ್ಬರು ಶಿಷ್ಯರೊಡನೆಯೇ ಹೊರ ಹೊರಟು ತಪಸ್ಸಿಗೆ ಬಗೆದಂದು ವಿಂಧ್ಯವಾಸಿನಿಯ ಬಳಿಗೆಯ್ತಂದೆನು. ಆ ದೇವಿ ಕನಸಿನಲ್ಲಿ ಕಾಣಿಸಿ ನಿನ್ನ ಬಳಿಗೆ ಹೋಗೆಂದು ನನಗೆ ಆಜ್ಞೆಯಿತ್ತಳು. ಆ ಮೇರೆಯೇ ನಿನ್ನನವಲೋಕಿಸಲು ಘೋರವಾದೀ ವಿಂಧ್ಯವಿಪಿನಕ್ಕೆ ಬಂದೆನು. ಅದೃಷ್ಟ ವಶದಿಂದ ಪುಳಿಂದನೊಬ್ಬನು ನನಗೊಂದು ನಡುವೆ ಬಿಡಾರವಾಗಿಸಿದನು. ಅವನೊಡಗೂಡಿ ಇಲ್ಲಿಗೆ ಬರಲು ಇಲ್ಲಿ ಪಿಶಾಚಗಳನೇಕಗಳು ಕಾಣಿಸಿದುವು. ಅವುಗಳ ಸಂಭಾಷಣೆಗಳನ್ನು ದೂರದಿಂದಲೇ ಕೇಳಿ ಈ ಪಿಶಾಚಭಾಷೆಯನಭ್ಯಾಸ ಮಾಡಿದೆನು. ಅದರಿಂದ ಮೌನವಾಗದೆ ಇರಲಾಯಿತು. ನಾನಿಲ್ಲಿಗೆ ಬಂದರೂ ನೀನಿಲ್ಲಿರದೆ ಉಜ್ಜಯಿನಿಗೆ ಹೋದೆಯೆಂದು ಕೇಳಿ ನೀನು ಬರುವವರೆಗೂ ಇಲ್ಲಿಯೇ ಗುರಿಯಿಟ್ಟುಕೊಂಡಿದ್ದೆನು. ನಿನ್ನನೀಕ್ಷಿಸಿ ನಾಲ್ಕನೆಯದಾದ ಭೂತಭಾಷೆಯಲ್ಲಿ ನಿನ್ನ ಕುಶಲವನ್ನು ಬೆಸಗೊಂಡೆನು. ಅದರಿಂದೊಡನೆಯೇ ಪೂರ್ವ ಜನ್ಮಸ್ಮೃತಿಯುಂಟಾಯಿತು. ಇದೆನ್ನ ಜನ್ಮವೃತ್ತಾಂತವು ಎಂದು ಗುಣಾಢ್ಯನು ಹೇಳಿದ ಬಳಿಕ, ನಿನ್ನಯಾಗಮನವು ನಿನ್ನೆ ರಾತ್ರಿ ನನಗೆ ತಿಳಿದ ಸುದ್ದಿಗೇಳೆಂದು ಕಾಣಭೂತಿ ನಿರೂಪಿಸುತ್ತಿರುವನು.

ಗುಣಾಢ್ಯನಾದ ಗುಣಾಢ್ಯನೇ! ದಿವ್ಯದೃಷ್ಟಿಯುಳ್ಳ ಭೂತವರ್ಮನೆಂಬ ರಾಕ್ಷಸನೊಬ್ಬನು ನನಗೆ ಗೆಳೆಯನಾಗಿರುವನು. ನಾನು ಆತನ ನಿವಾಸಸ್ಥಾನವಾದ ಉಜ್ಜಯನಿಯಲ್ಲಿರುವ ಉದ್ಯಾನಕ್ಕೆ ಹೋಗಿದ್ದು ನನ್ನ ಶಾಪವೆಂದಿಗೆ ಬಗೆಹರಿವುದೆಂದು ಕೇಳಿದೆನು. ಆತನು ತನಗೆ ಹಗಲು ಪ್ರಭಾವವಿಲ್ಲವೆಂದೂ ರಾತ್ರಿಯಿಲ್ಲಿಯಿರೆಂದೂ ನುಡಿಯಲು ನಾನ

ಲ್ಲಿಯೇ ಇದ್ದೆನು. ಮತ್ತೆಯಿರುಳಾಗಲೂ ಅಲ್ಲಿಯೇ ಓಡಾಡುತ್ತಿದ್ದ ಪಿಶಾಚಗಳ ಸಂತೋಷಕ್ಕೆ ಕಾರಣವೇನೆಂದು ಪ್ರಸ್ತಾವವಶದಿಂದ ಕೇಳಿದೆನು. ಅದಕ್ಕೆ ಭೂತಿಶರ್ಮನು "ಈ ಯಕ್ಷರಕ್ಷಃ ಪಿಶಾಚಗಳಿಗೆ ಸೂರ್ಯ ತೇಜಸ್ಸು ಅಟ್ಟುವುದರಿಂದ ಹಗಲಿನಲ್ಲಿ ಪ್ರಭಾವ ವಿಲ್ಲವು. ಅದರಿಂದ ಇವು ಇರುಳಿನಲ್ಲಿ ಆನಂದಿಸುತ್ತಿವೆ. ಎಲ್ಲಿ ದೇವತೆಗಳಿಗೆ ಪೂಜೆ ನಡೆಯದೋ ಬ್ರಾಹ್ಮಣರು ತಮ್ಮ ಉಚಿತಾಚಾರಗಳನ್ನು ನಡೆಯಿಸರೋ ಊಟವು ವಿಧಿಯನ್ನು ಮೀರಿ ನಡೆಯುವುದೋ ಆಯೆಡೆಗಳಲ್ಲಿ ಇವುಗಳಿಗೆ ಸಾಮರ್ಥ್ಯವಧಿಕವು. ಮಾಂಸವನ್ನು ತಿನ್ನದವನಾದರೂ ಪತಿವ್ರತೆಯಾದರೂ ಇರುವ ಕಡೆಗೆ ಇವು ಹೋಗಲಾ ಲಾರವು. ಪರಿಶುದ್ಧರನ್ನೂ ಪರಾಕ್ರಮಿಗಳನ್ನೂ ಪಂಡಿತರನ್ನೂ ಇವು ಮುತ್ತಗೆ ಹಾಕ ರವು. ಈ ವಿಷಯವನ್ನು ಮುನ್ನ ಮುಕ್ಕಣ್ಣನು ಬೊಮ್ಮಗೆ ನುಡಿದು ಸಮ್ಮತಿಗೊಳಿ ಸಿದನು. ಅದು ಹಾಗಿರಲಿ. ಇನ್ನು ನೀನು ಹೋಗು, ಶಾಪ ಮುಕ್ತಿಗೆ ಹೇತುವಾದ ಗುಣಾಢ್ಯನೆಯ್ತಂದಿರುವನು" ಎಂದು ಹೇಳಿ ಕಳುಹಿದನು. ನಾನು ಹಾಗೆಯೇ ತೆರಳ್ದು ನಿನ್ನನೀಕ್ಷಿಸಿದೆನಿಲ್ಲಿ. ಇನ್ನು ಪುಷ್ಪದಂತನು ನನಗೆ ಹೇಳಿದ ಕಥೆಯನ್ನು ಹೇಳುವೆನು. ನನಗಿನ್ನೊಂದು ಕುತೂಹಲವುಂಟು. ಏನೆಂದರೆ :

## ಪುಷ್ಪದಂತನಿಗೆ ಆ ಹೆಸರು ಬರಲು ಕಾರಣವು

ಪುಷ್ಪದಂತನೆಂದು ಆತನಿಗೆ ಹೆಸರೂ, ಮಾಲ್ಯವಂತನೆಂದು ನಿನಗೆ ನಾಮವೂ ಉಂಟಾಗಲು ಕಾರಣವೇನೋ ಕಾರುಣ್ಯದಿಂದ ನಿರೂಪಿಸಬೇಕೆಂದು ಕಾಣಭೂತಿ ಬೆಸ ಗೊಂಡನು. ಗುಣಾಢ್ಯನಿಂತು ಹೇಳಿದನು : ಗಂಗಾತೀರದಲ್ಲಿ ಒಂದು ಅಗ್ರಹಾರವುಂಟು. ಅದರ ಹೆಸರು ಬಹು ಸುವರ್ಣಕವು. ಅಲ್ಲಿ ಗೋವಿಂದ ದತ್ತನೆಂಬ ಘನ ವಿದ್ವಾಂಸನಾದ ಬ್ರಾಹ್ಮಣನಿದ್ದನು. ಆತನ ಸತಿ ಯಜ್ಞದತ್ತೆಯೆಂಬಳು. ಆಕೆ ವೀರಪತಿವ್ರತೆ. ಅವರಿಗೆ ಕ್ರಮವಾಗಿ ಐವರು ಮಕ್ಕಳು ಹುಟ್ಟಿದರು. ಅವರು ನಾವೇ ಸುಂದರ ಪುರುಷರೆಂಬ ಗರ್ವವುಳ್ಳ ಮಹಾ ಮೂರ್ಖರಾಗಿದ್ದರು. ಒಂದು ದಿನದಲ್ಲಿ ಗೋವಿಂದದತ್ತನ ಮನೆಗೆ ಅಪರ ವೈಶ್ವಾನರನೆಂಬಂತೆ ಇರುವ ವೈಶ್ವಾನರನೆಂಬ ಬ್ರಾಹ್ಮಣೋತ್ತಮನು ಅತಿಥಿಯಾಗಿ ಬಂದನು. ಆ ವೇಳೆ ಗೋವಿಂದ ದತ್ತನು ಮನೆಯಲ್ಲಿ ಇಲ್ಲದಿರಲು ಅತಿಥಿ ಬಂದು ಆತನ ಪುತ್ರರಿಗೆ ನಮಸ್ಕಾರ ಮಾಡಿದನು. ಅವರು ಅವನಿಗೆ ಪ್ರತಿ ನಮಸ್ಕಾರವನ್ನೂ ಮಾಡದೆ ಪರಿಹಾಸಕ್ಕಾರಂಭಿಸಿದರು. ಆಗಳಾತನು ಆಗ್ರಹಗೊಂಡು ಆ ಮನೆಯಿಂದ ಹೊರಟು ಹೋದನು. ಆ ಸಮಯದಲ್ಲಿ ಗೋವಿಂದ ದತ್ತನು ಬಂದು ಸಿಟ್ಟು ಮಾಡಿ ಹೋಗುತ್ತಿದ್ದ ಆ ಬ್ರಾಹ್ಮಣನನ್ನು ಬೇಡಿಕೊಂಡು ಬೆಸಗೊಳ್ಳಲು, ಆತನು "ನಿನ್ನ ಮಕ್ಕಳು ಮೂರ್ಖರೂ ಪತಿತರೂ ಆಗಿರುವುದರಿಂದ ನಿನ್ನ ಮನೆಯಲ್ಲಿ ನಾನುಣೆನು. ಉಂಡೆ ನಾದರೆ ನನಗೆ ಪ್ರಾಯಶ್ಚಿತ್ತವಾಗಬೇಕು" ಎಂದು ನಿಷ್ಠುರವಾಡಲು; ಮರಳಿ ಗೋವಿಂದ ದತ್ತನು ಆತನನ್ನು "ಈ ದುಷ್ಟ ಪುತ್ರನನ್ನು ನಾನೆಂದಿಗೂ ಸೋಂಕಲಾರೆನೆಂದು ಪ್ರತಿಜ್ಞೆಗೆಯ್ದು, ತಾವು ಮನೆಗೆ ದಯೆಗೆಯ್ದು ಬನ್ನಿರಿ" ಎಂದು ಬಹಳವಾಗಿ ಬೇಡಿ ಕೊಂಡನು. ಆತನ ಮಡದಿಯೂ ಬಂದು ಅತಿಥಿ ಭಕ್ತಿಯಿಂದ ಆ ಮೇರೆಯೇ ಬೇಡಿ

ದಳು. ಬಳಿಕ ಆ ಅತಿಥಿ ವೈಶ್ವಾನರನು ಕಡೆಗೆ ಹೇಗೆಯೋ ಒಪ್ಪಿ ಆತಿಥ್ಯವಂಗೀಕರಿಸಿದನು. ಆ ಮಕ್ಕಳಲ್ಲೊಬ್ಬನು ದೇವದತ್ತನೆಂಬವನು ಅದನ್ನು ನೋಡಿ, ಗೋವಿಂದದತ್ತನಿಗೆ ತನ್ನ ಮೇಲೆ ಕನಿಕರವಿಲ್ಲವೆಂಬುದನರಿತು ಪಶ್ಚಾತ್ತಾಪಗೊಂಡವನಾಗಿ ತಾಯ್ತಂದೆವಿರ್ಗೆ ಅಸಿಷ್ಟವಾದೀ ಹಾಳು ಬದುಕೇಕೆಂದು ಚಿಂತಿಸಿ ವಿರಕ್ತನಾಗಿ ತಪಸ್ಸಿಗೋಸುಗವೆ ಬದರಿಕಾಶ್ರಮಕ್ಕೆ ನಡೆದನು. ಅಲ್ಲಿ ಶ್ರೀ ಸಾಂಬ ಶಂಕರಸ್ವಾಮಿಯನ್ನು ಕುರಿತು ತಪವನಾಚರಿಸುತ್ತಿದ್ದನು. ಆತನುಗ್ರತಪಕ್ಕೆ ಮೆಚ್ಚಿ ಶಿವನೂ ಪ್ರತ್ಯಕ್ಷನಾದನು. ಆ ದೇವ ದೇವನಿಗೆ ತಾನನುಚರನಾಗಿರಬೇಕೆಂದು ವರವು ಬೇಡಿದನು. ಅದಕ್ಕೆ ವರದನಾದ ಶಂಕರನು "ವಿದ್ಯೆಗಳನ್ನು ಪಡೆದು ಪ್ರೌಢವಿಯಲ್ಲಿ ಸಕಲ ಭೋಗಗಳನ್ನೂ ಅನುಭವಿಸಿದ ಬಳಿಕ ನಿನ್ನ ಇಷ್ಟಾರ್ಥಗಳೆಲ್ಲವೂ ನೆರವೇರುವುವು" ಎಂದೊರೆದು ಮರೆಯಾದನು.

ಬಳಿಕಾತನು ವಿದ್ಯಾರ್ಥಿಯಾಗಿ ಪಾಟಲೀಪುತ್ರಕ್ಕೆ ಹೋಗಿ ಅಲ್ಲಿ ವೇದ ಕುಂಭನೆಂಬ ಉಪಾಧ್ಯಾಯನನ್ನು ಕ್ರಮವಾಗಿ ಶುಶ್ರೂಷೆ ಮಾಡಿದನು. ಅಲ್ಲಿರುವಾಗಳೊಂದು ದಿನದಲ್ಲಿ ಆ ಉಪಾಧ್ಯಾಯನ ಮಡದಿ ಕಾಮಾತುರೆಯಾಗಿ ಕಾಮಕೇಳಿಗೆ ಕರೆದಳು. ಅಚ್ಚರಿಯೇನು ? ಸ್ತ್ರೀ ಬುದ್ಧಿಯತಿಚಪಲವಲ್ಲವೆ ? ದೇವದತ್ತನು ಕಾಮನ ಕಾಟದಿಂದ ಅಲ್ಲಿರಲಾರದೆ ಹೊರಟು ಪ್ರತಿಷ್ಠಾನಕ್ಕೆ ಬಂದನು. ಅಲ್ಲಿ ವೃದ್ಧೆಯಾದ ಸತಿಯೊಡನಿರುವ ಮಂತ್ರಸ್ವಾಮಿಯೆಂಬ ವೃದ್ಧೋಪಾಧ್ಯಾಯನನ್ನು ಆಶ್ರಯಿಸಿ ಚೆನ್ನಾಗಿ ವಿದ್ಯೆಗಳನ್ನೆಲ್ಲವನ್ನೂ ಗ್ರಹಿಸಿಕೊಂಡನು. ಸಂಪೂರ್ಣ ವಿದ್ವಾಂಸನೂ ಸುಂದರಾಂಗನೂ ಆದ ದೇವದತ್ತನು ಅಲ್ಲಿಯೊಂದು ದಿನದೊಳಗೆ ಆ ಪಟ್ಟಣದರಸು ಸುಶರ್ಮನ ಮಗಳು ಶ್ರೀಯೆಂಬಳು ಕರುಮಾಡದ ಕಿಟಕಿಯಿಂದ ಲಕ್ಷ್ಮಿ ನಾರಾಯಣನನ್ನು ಕಾಮಿಸಿ ನೋಡಿದಂತೆ ಕಟಾಕ್ಷಿಸಲು ಕಬ್ಬುವಿಲ್ಲನ ಕಣೆಗೆ ಗುರಿಯಾಗಿ ಗುರಿಯಿಟ್ಟು ಬೆರಗುವಟ್ಟಂತೆ ಕಂಡಲ್ಲಿಯೇ ನಿಂತನು. ವಿಮಾನವೇರಿ ವಿಲಾಸದಿಂದೊಪ್ಪುವ ಚಂದ್ರಾಧಿದೇವತೆಯೋ ಎಂಬಂತೆ ಚಂಚಲಾಕ್ಷಿಯವಳು ಬೆಳಗುತ್ತಿದ್ದಳು. ಬಳಿಕವರಿಬ್ಬರೂ ಅವರ ನೋಟಗಳೆಂಬ ಸರಪಳಿಗಳಿಂದ ಸ್ಮರನೃಪನಿಂದ ಸೆರೆಯಿಡಲ್ಪಟ್ಟವರಾಗಿ ಇದ್ದೆಡೆಯಿಂದ ಮಿಸುಕಲಾರದೆ ಹೋದರು. ಆಗಳಾ ಅರಸುಗುವರಿ ಪ್ರತ್ಯಕ್ಷ ಮನ್ಮಥನಾಜ್ಞೆಯೆಂಬಂತೆ ತನ್ನ ಬೆರಳಿನಿಂದ ಅವನನ್ನು ಬಳಿಗೆ ಬಾರೆಂದು ಕರೆದಳು. ಆತನೂ ಕರುಮಾಡದ ಬಳಿಗೆ ತೆರಳಲು ಆಕೆಯಾತನ ಬಳಿಗೆ ಅಂತಃಪುರದಿಂದ ಒಂದು ಹೂವನ್ನು ದಂತದಿಂದ ಹಾರಿಸಿದಳು. ರಾಯಕನ್ನೆಗೆಯ್ದ ಈ ಗೂಢ ಸಂಕೇತದ ಅಭಿಪ್ರಾಯವನರಿಯದವನಾಗಿ ಆತನೇನೂ ಮಾಡಲಾರದೆ ಉಪಾಧ್ಯಾಯರ ಮನೆಗೆ ಹೋಗಿ ಕಳ್ಳರ ಕೊಳ್ಳಿಗೆ ಸಿಕ್ಕಿ ಹಣ ಕಳಕೊಂಡು ಕಳವಳಿಸುವ ಮೂಗನಂತೆ ಏನೂ ನುಡಿಯಲಾರದೆ ನೆಲದಲ್ಲಿ ಬಿದ್ದು ಉರುಳಾಡುತ್ತಿದ್ದನು. ಆಗಳಾ ಉಪಾಧ್ಯಾಯನು ಕಾಮಚೇಷ್ಟೆಗಳಿಂದ ಊಹಿಸಿಕೊಂಡು ಇವನವಸ್ಥೆಗೆ ಕಾರಣವೇನೆಂದು ಉಪಾಯವಾಗಿ ಕೇಳಲು ಕಡೆಗೆ ದೇವದತ್ತನು ನಡೆದ ವೃತ್ತಾಂತವನ್ನು ಬಿನ್ನವಿಸಿದನು. ಅದನರಿತು ಜಾಣನಾದ ಗುರುಸ್ವಾಮಿ "ಎಲೆ, ವತ್ಸಾ ! ಸಂಕಟವೇಕೆ ?

ಆಕೆ ದಂತದಿಂದ ಹೂವನ್ನು ಹಾಕಿ ಸಂಕೇತವೇರ್ಪಡಿಸಿದಳು. ಇದೋ ದುಂಬಿಗಳಿಲ್ಲವೆ ತುಂಬಿದ ಹೂಗಳುಳ್ಳ ಪುಷ್ಪದಂತವೆಂಬ ದೇವಾಲಯವು. ಅಲ್ಲಿಗೆ ಬಂದು ನನ್ನನವಲೋಕಿಸು ಎಂದವಳ ಅಭಿಪ್ರಾಯವು" ಎಂದು ನುಡಿಯಲು, ದೇವದತ್ತನು ತಾಪವಡಗಿ ಸಮಾಹಿತನಾಗಿ ಆ ದೇವಾಲಯಕ್ಕೆ ಹೋಗಿ ನಿಂತಿದ್ದನು. ಆ ರಾಯಕುವರಿಯೂ ಅಷ್ಟಮಿಯ ನೆವದಿಂದ ಅಲ್ಲಿಗೆ ಬಂದು ದೇವದರ್ಶನಕ್ಕಾಗಿ ಒಬ್ಬಳಾಗಿಯೇ ಗರ್ಭ ಗೃಹಕ್ಕೆ ಪೊಕ್ಕಳು. ಹೋಗುತಲಾ ದ್ವಾರಬಂಧದ ಹಿಂದೆ ನಲ್ಲನು ಕಾಣಿಸಿಕೊಂಡು ಆಕೆಯ ಕೊರಳನಾಲಂಗಿಸಿದನು. "ಅಚ್ಚರಿ! ನನ್ನ ಸನ್ನೆ ನಿನಗೆ ಹೇಗೆ ತಿಳಿಯಿತು?" ಎಂದಾಕೆ ಕೇಳಿದಳು. "ನನಗೆ ತಿಳಿಯಲಿಲ್ಲ, ಉಪಾಧ್ಯಾಯರೊರೆದರು" ಎಂದವನೆಂದನು. ಆದರಿಂದಾಕೆ "ನನ್ನ ಬಿಡು, ನೀನು ಜಾಣನಲ್ಲ" ಎಂದು ಕಸರಿಕೊಂಡು ಅನಲ್ಕೆಯಿಂದಲೂ ಎಲ್ಲಿ ಗುಟ್ಟು ರಟ್ಟಾಗುವುದೋ ಎಂಬ ಕಡು ಭೀತಿಯಿಂದಲೂ ಅಲ್ಲಿಂದ ಹೊರಟು ಹೋದಳು.

ಬಳಿಕ, ಕೈಗೆ ಸಿಕ್ಕಿದ ತುತ್ತು ಬಾಯ್ಗೆ ದೊರೆಯದೆ ಹೋಯಿತೆಂದು ದೇವದತ್ತನು ಏಕಾಂತದಲ್ಲಿ ಆ ಕಾಂತೆಯೊಳಾಕಾಂಕ್ಷೆಯಿಂದ ವಿಲಾಪಿಸುತ ವಿರಹಾಗ್ನಿಯನ್ನು ಭರಿಸಲಾರದೆ ಹರಣ ತೊರೆಯಲುಜ್ಜುಗಿಸಿದನು. ಆತನ ಆ ಅವಸ್ಥೆಯನವಲೋಕಿಸಿ ಮೊದಲೇ ಆತನಿಗೆ ವರವಿತ್ತ ಶಂಕರನು ಆತನ ಬಯಕೆಯನ್ನು ನೆರವೇರಿಸೆಂದು ಪಂಚಶಿಖನೆಂಬ ಪ್ರಮಥನಿಗೆ ಆಜ್ಞೆಯಿತ್ತನು. ಆ ಪ್ರಮಥ ಪತಿಯೆಯ್ತಂದು ದೇವದತ್ತನನ್ನು ಸಮಾಧಾನಗೊಳಿಸಿ ಆತನಿಗೆ ಸ್ತ್ರೀ ವೇಷವನ್ನೂ ತನಗೆ ಮುದಿ ಹಾರುವನ ವೇಷವನ್ನೂ ಜೊತೆಗೊಳಿಸಿಕೊಂಡು ದೇವದತ್ತನೊಡನೆ ಆ ರಾಯಕುವರಿಯ ತಂದೆಯಾದ ಸುಶರ್ಮನ ಬಳಿಗೆ ಹೋಗಿ "ರಾಯನೇ! ನನ್ನ ಕುಮಾರನು ಎಲ್ಲಿಗೋ ದೇಶಾಂತರಕ್ಕೆ ಹೋಗಿರುವನು. ಆತನನ್ನು ಹುಡುಕಿ ಕರತರಲು ನಾನು ಹೋಗುತ್ತಿರುವೆನು. ಈಕೆ ನನ್ನ ಸೊಸೆ. ಇವಳನ್ನು ನಿನ್ನ ಬಳಿ ಭದ್ರಗೊಳಿಸಿರಲು ಬಿಟ್ಟು ಹೋಗುವೆನು. ನೀನಿವಳನ್ನು ಸಲಹಿ ನನಗೊಪ್ಪಿಸುವುದು" ಎಂದು ನಿರೂಪಿಸಿದನು. ಆ ರಾಯನೂ ಶಾಪಭೀತಿಯಿಂ ಬ್ರಾಹ್ಮಣನು ಬಯಸಿದಂತೆ ಮಾಡಲು ಒಪ್ಪಿಕೊಂಡು ಸುರಕ್ಷಿತವಾದ ತನ್ನ ಕನ್ಯಕಾಂತಃಪುರದಲ್ಲಿ ಆ ಸ್ತ್ರೀ ವೇಷ ಪುರುಷನನ್ನು ಇರಿಸಿದನು. ಪಂಚಶಿಖನು ಬಂದ ದಾರಿ ಹಿಡಿದನು. ದೇವದತ್ತನು ತನ್ನ ಪ್ರೇಯಸಿಯ ಅಂತಃಪುರದಲ್ಲಿಯೇ ನಿವಾಸಂಗೆಯ್ದು ಸ್ತ್ರೀ ವೇಷ ಮಹಿಮೆಯಿಂದ ಆಕೆಗೆ ತ್ವರಿತದಲ್ಲಿಯೇ ಅಂತರಂಗ ಚೇಟಿಯಾದಳು. ಒಂದು ದಿನದಿರುಳಿನಲ್ಲಿ ಯಾರೂ ಇಲ್ಲದ ಹೊತ್ತಿನಲ್ಲಿ ದೇವದತ್ತನು ತನ್ನ ಸುದ್ದಿಯನಾಕೆಗೆ ತಿಳಿಸಿ ಉತ್ಕಂಠೆಯಾದಾಕೆಯನ್ನು ಗಾಂಧರ್ವವಿಧಿಯಿಂದ ಮದುವೆಯಾದನು. ಆಕೆ ಕೆಲವು ದಿನಗಳಿಗೆ ಬಸುರಿಯಾದಳು. ಒಡನೆಯೇ ದೇವದತ್ತನು ಸ್ಮರಿಸಿದಷ್ಟರಲ್ಲಿ ಆ ಗಣೋತ್ತಮನು ಬಂದು ಆತನನಾರಿಗೂ ತಿಳಿಯದಂತೆ ಅಂತಃಪುರದಿಂದ ಹೊರಗೆ ಕರೆತಂದು ಸ್ತ್ರೀ ವೇಷವನ್ನು ವಿಸರ್ಜಿಸಿ, ತಾನು ಮುನ್ನಿನ ಮುದುಕನ ವೇಷವನಾಂತು ಬೆಳಗಾಗುತಲೂ ದೇವದತ್ತನನ್ನು ಒಡಗೊಂಡು ಸುಶರ್ಮನ ಬಳಿಗೆ ಹೋಗಿ "ರಾಯನೇ! ನೋಡೈ,

ನನ್ನ ಮಗನಿವನು ಸಿಕ್ಕಿದನು. ಸೊಸೆಯನ್ನು ಕರೆಯಿಸು" ಎಂದು ಕೇಳಿದನು. ಆ ರಾಯನಾಗಲೇ "ಆ ಹಿಂದಣ ರಾತ್ರಿಯೇ ಆಕೆಯಲ್ಲಿಗೋ ಓಡಿ ಹೋದಳೆಂದು" ಅಂತಃಪುರರಕ್ಷಕರಿಂದಲೂ ಕೇಳಿದನು.

## ಶಿಬಿಚಕ್ರವರ್ತಿಯ ದಾತೃತ್ವ ಚರಿತವು

ಆ ಬಳಿಕ ವಿಪ್ರಶಾಪ ಭೀತನಾದ ಸುಶರ್ಮನು ಮಂತ್ರಿಗಳೊಡನೆಯಿಂತೆಂದನು : ಮಂತ್ರಿಗಳಿರಾ ! ಈತನು ಬ್ರಾಹ್ಮಣನಲ್ಲ. ಆರೋ ದೇವರೇ ಸರಿ. ನನ್ನನ್ನು ಮೋಸ ಮಾಡಲು ಈ ರೂಪದಿಂದ ಬಂದಿರುವನು. ನಿರಂತರವೂ ಇಂತಹ ವೃತ್ತಾಂತಗಳಿರಲೇ ಇರುತ್ತಿವೆ. ಇದಕ್ಕೆ ನಿದರ್ಶನವನ್ನು ನುಡಿವೆನಾಲಿಸು ! ಪೂರ್ವದಲ್ಲಿ ತಪಸ್ವಿಯೂ ದಯಾಳುವೂ ದಾತಾರನೂ ಧೀರಾತ್ಮನೂ ಭೀತರಕ್ಷಕನೂ ಅನಾಥವತ್ಸಲನೂ ಆದ ಶಿಬಿಯೆಂಬ ಮಹಾರಾಜನು ಮಹೋನ್ನತನಾಗಿರುತ್ತಿದ್ದನು. ಒಂದು ಸಮಯದಲ್ಲಿ ಆತನನ್ನು ವಂಚಿಸಲು ಇಂದ್ರನು ತಾನೇ ಗಿಡಗನಾಗಿ ಹಾಗೆಯೇ ಮಾಯೆಯಿಂದ ಪಾರಿವನಾಗಿರುವ ಯಮನನ್ನು ಅಟ್ಟಿಕೊಂಡು ಬಂದನು. ಪಾರಿವವು ಗುಂಡಿಗೆಯೊಡೆ ಯುತ್ತ ಒಂದು ಶಿಬಿನೃಪಾಲನ ಮಡಲಲ್ಲಿ ನುರೆಹೊಕ್ಕು ಮಲಗಿತು. ಆಗಳಾ ಗಿಡಗನು ಮನುಷ್ಯ ಭಾಷೆಯಿಂದ ರಾಯನೊಡನೆ "ಅರಸನೇ ! ಹಸಿವಾಗಿದೆ. ನನ್ನಯಾಹಾರ ವಾದ ಈ ಕಪೋತನನ್ನು ಬಿಟ್ಟುಕೊಡು. ಬಿಡದಿದ್ದರೆ ನನ್ನ ಪ್ರಾಣವೀಗಳೇ ಹೋಗು ವುದು. ಅದರಿಂದ ನಿನಗೇನು ಧರ್ಮ ಬರುವುದು?" ಎಂದು ಕೇಳಲು, ಅದಕ್ಕೆ ಶಿಬಿಚಕ್ರವರ್ತಿ "ಇದು ನನ್ನ ಬಳಿ ಶರಣಾಗತವಾಗಿ ಬಂದಿದೆ. ಇದನ್ನು ಬಿಡಲಾಗದು. ಅದರಿಂದ ಇದಕ್ಕೆ ಸಮಾನವಾದ ಬೇರೆ ಮಾಂಸವನ್ನು ನಿನಗೆ ಕೊಡುವೆನು" ಎಂದು ಹೇಳಿದನು. ಶ್ಯೇನನು "ಹಾಗಾದರೆ ನನಗೆ ನಿನ್ನ ಮಾಂಸವನೆ ಕೊಡೈ" ಎನಲು; ಅದಕ್ಕಾತನು ಸಂತಸ ದಿಂದೊಪ್ಪಿಕೊಂಡು ತ್ರಾಸಿನಲ್ಲಿ ತನ್ನಡಗನ್ನು ಎಷ್ಟೆಷ್ಟು ಕುಯ್ದು ಹಾಕಿದರೂ ಕಪೋ ತದ ಕಡೆಯೇ ತಕ್ಕಡಿ ಬಾಗುತ್ತಿರುವುದಾಶ್ಚರ್ಯವಾಯಿತು. ರಾಯನು ತನ್ನ ಮೈಯೆಲ್ಲ ವನ್ನೂ ತುಲೆಯಲ್ಲಿಡಿಸಿದನು. ಆ ವೇಳೆಗಾಕಾಶವಾಣಿ ಮೇಲು ಮೇಲೆಂದು ಮೇಲೆ ಮೇಲಾಗಿ ನುಡಿಯಿತು. ಬಳಿಕ, ಇಂದ್ರಯಮರಿಬ್ಬರೂ ಸಂತುಷ್ಟರಾಗಿ ತಮ್ಮ ಪಕ್ಷಿ ರೂಪಗಳನ್ನು ಬಿಟ್ಟು ಸ್ವಸ್ವರೂಪಗಳಿಂದ ಕಾಣಿಸಿಕೊಂಡು ರಾಜನಿಗೆ ವಜ್ರದೇಹವಿತ್ತು ಉತ್ತಮ ವರಗಳನ್ನೂ ಅನುಗ್ರಹಿಸಿ ಅಂತರ್ಧಾನವೈದಿದರು. ಹಾಗೆಯೇ ನನ್ನನ್ನು ಪರೀಕ್ಷಿಸಲು ಈತನಾವನೋ ಬಂದಿರುವನು. ಇದೊಂದು ದೈವ ಮಹಿಮೆ.

ಸುಶರ್ಮನು ಇಂತೆಂದು ಮಂತ್ರಿಗಳೊಡನೆ ಸಮಾಲೋಚಿಸಿ, ಭಯವಿನಯಂಗ ಳೊಡನೆ ಮಾಯಾವಿಯಾದ ಬ್ರಾಹ್ಮಣನಿಗೆ "ಸ್ವಾಮಿಾ ! ನನಗೆ ಅಭಯದಾನವನ್ನು ಕೊಡಿರಿ. ನಿನ್ನ ಸೊಸೆಯನ್ನು ನಿನ್ನೆಯ ರಾತ್ರಿ ಯಾರೋ ಅಪಹರಿಸಿಕೊಂಡು ಹೋದರು. ಹಗಲಿರುಳು ನಾವು ಎಷ್ಟು ಕಾವಲಿದ್ದು ಕಾಪಾಡಿದರೂ ಕಡೆಗೆ ಕಾಮಿನಿ ಕಾಣದೆ ಹೋದಳು" ಎಂದು ಬಿನ್ನವಿಸಿದನು. ಆಗಳಾ ಬ್ರಾಹ್ಮಣನು ಹೇಗೆಯೋ ಕಡೆಗೆ

ಕರುಣಿಸಿ ಬಿಡುವವನಂತೆ "ಹಾಗಾದರೆ, ಎಲೆ ರಾಯ ! ನನ್ನ ಮಗನಿಗೆ ನಿನ್ನ ಮಗಳನ್ನು ಕೊಡುವವನಾಗು" ಎಂದು ನುಡಿದನು. ಶಾಪಭೀತನಾದ ಭೂಪನು ವಿಧಿಯಿಲ್ಲದೆ ಮಗಳನ್ನು ದೇವದತ್ತನಿಗೆ ಕೊಟ್ಟುಬಿಟ್ಟನು. ಪಂಚಶಿಖನು ಕೈಲಾಸಕ್ಕೆ ಹೋದನು. ದೇವದತ್ತನು ಆ ಬಳಿಕ ತನ್ನ ನಲ್ಲೆಯನ್ನು ಬಹಿರಂಗವಾಗಿ ಪಡೆದು ಪುತ್ರಹೀನನಾದ ಮಾವನ ಸುಶರ್ಮನ ಮಹದೈಶ್ವರ್ಯವೆಲ್ಲವನ್ನೂ ತಾನೇ ಅನುಭವಿಸುತ್ತಿದ್ದನು. ಬಳಿಕ ಬಹುಕಾಲಕ್ಕೆ ತನ್ನ ದೌಹಿತ್ರನಿಗೆ ರಾಜ್ಯಪಟ್ಟಗಟ್ಟಿ ತಾನು ತಪಶ್ಚರ್ಯೆಗೆ ತೆರಳಿದನು. ದೇವದತ್ತನೂ ತನ್ನ ಮಗನ ಮಹೋನ್ನತ ಸ್ಥಿತಿಗಂಡು ಸಂತೋಷಿಸಿ ಆ ರಾಯಕುವರಿ ಯೊಡನೆ ತಪೋವನಕ್ಕೆ ಹೊರಟನು. ಅಲ್ಲಿ ಪರಮೇಶ್ವರನನಾರಾಧಿಸಿ ಮಾನವದೇಹವನ್ನು ತ್ಯಜಿಸಿ ಶಂಕರಾನುಗ್ರಹದಿಂದ ಪ್ರಮಥನಾದನು. ತನ್ನ ಪ್ರಿಯೆ ದಂತದಿಂದ ಹೂವನ್ನು ಹಾರಿಸಿದ ಸಂಕೇತವರಿಯದೆ ಸಂತಪಿಸಿದವನಾದುದರಿಂದ ಆತನು ಗುಣ ಸಮೂಹದಲ್ಲಿ ಪುಷ್ಪದಂತನೆಂದು ಪ್ರಖ್ಯಾತನಾಗಿರುವದನ್ನು ಆತನ ಮಡದಿಯೂ ಜಯೆಯೆಂಬ ಹೆಸರಿ ನಿಂದ ಪಾರ್ವತಿಗೆ ಪ್ರತೀಹಾರಿಯಾಗಿರುವಳು.

ಪುಷ್ಪದಂತನ ಕಥೆಯಾತೆರನಾಗಿರುವುದಲ್ಲವೆ ? ಇನ್ನು ನನ್ನ ಹೆಸರಿನ ಕಥೆಯ ನಾಕರ್ಣಿಸೈ ಕಾಣಭೂತಿಯೇ ! ದೇವದತ್ತನ ತಂದೆ ಗೋವಿಂದ ದತ್ತನಿದ್ದಾನಲ್ಲವೆ ? ನಾನಾತನ ಮಕ್ಕಳಲ್ಲಿ ಮತ್ತೊಬ್ಬನು. ನನ್ನ ಹೆಸರು ಸೋಮದತ್ತನು. ನಾನೂ ನನ್ನ ತಂದೆಯನಾದರ ಮಾಡಿದನಲ್ಲವೇ ಎಂಬ ಮಹಾದುಃಖದಿಂದಲೇ ಹಿಮಾಲಯದಲ್ಲಿ ಸಾಂಬಶಂಕರ ಸ್ವಾಮಿಯನ್ನು ಅನೇಕ ಮಾಲ್ಯಗಳಿಂದ ಪೂಜಿಸುತ್ತ ತಪವನಾಚರಿಸಿದೆನು. ಬಳಿಕ ಚಂದ್ರಮೌಳಿಸ್ವಾಮಿ ಪ್ರಸನ್ನನಾಗಿ ನನಗೆ ದರ್ಶನವಿತ್ತು, ನಾನು ಭೋಗಗಳನ್ನು ಬಯಸದೆ ಗಣತ್ವವನ್ನೇ ಬಯಸಲು ನನಗದನ್ನೇ ಅನುಗ್ರಹಿಸಿದನು. "ಮನುಷ್ಯರಿಗೆ ಪುಗಲಳವಲ್ಲದ ವನಭೂಮಿಗಳಿಂದ ತಂದ ಹೂಗಳಿಂದ ಸರಗಳನ್ನು ಕಟ್ಟಿ ಆ ಮಾಲ್ಯ ಗಳಿಂದ ನಮ್ಮನ್ನು ನೀನು ಪೂಜಿಸಿದವನಾದುದರಿಂದ ನಿನಗೆ ಮಾಲ್ಯವಂತನೆಂದು ಹೆಸರಿಟ್ಟಿರುವೆನು" ಎಂದು ಪಾರ್ವತೀವಲ್ಲಭನು ನನ್ನನ್ನನುಗ್ರಹಿಸಿದನು. ಬಳಿಕ ನಾನು ನರದೇಹವನ್ನು ತೊರೆದು ಒಡನೆಯೇ ಪ್ರಮಥನಾದೆನು. ಇದು ಕಾಣೈ, ಕಾಣಭೂತಿಯೇ! ಮಾದೇವನನುಗ್ರಹದಿಂದ ಬಂದ ಮಾಲ್ಯವಂತನೆಂಬ ನಾಮುವಾಂತ ಕ್ರಮವು. ನಾನು ಮರಳಿ ನನ್ನ ದೌರ್ಭಾಗ್ಯದಿಂದ ಗೌರೀಶಾಪಕ್ಕೆ ಗುರಿಯಾಗಿ ಮಾನವ ಜನ್ಮವೆತ್ತಿ ಬಂದಿರುವೆನು. ಇನ್ನಾದರೂ ಶಿವಪ್ರೋಕ್ತವಾದ ಆ ಕಥೆಯನ್ನು ಕೇಳಿಸೈ, ಅದರಿಂದ ನಮ್ಮಿಬ್ಬರಿಗೂ ಶಾಪಮುಕ್ತಿಯಾಗುವುದಲ್ಲವೆ ?

ನೀತಿ : ಕಂದ || ಮನೆವುಗರತಿಥಿಗಳಾರುಂ |
ತನುಜರಮೂರ್ಖತೆಯಿನೆಂದು ಧಾರ್ಮಿಕರಾವರ್ ||
ತನುಜರುಮಂತೊರೆವರ್ಗ್ಗಡ |
ಮೆನುತ್ತೆ, ಗೋವಿಂದದತ್ತನಂತಾಗಿಸನೇ || * ||

ಕಂದ || ಮೊದಲೆ ಜಿತೇಂದ್ರಿಯನಾದಂ |
ಗೊದವುಗು ಮತಿಭೂತಿ ವೇದಕುಂಭಾಂಗನೆಗೂ ||
ಡದೆ ಬೇರೆ ಸಠಿಸಿ ಬಹುಸಂ |
ಪದಮಾಂತಾದೇವದತ್ತ ನಾನಂದಿಸನೇ || * ||

ಕಂದ || ತ್ರಿಕರಣಶುದ್ಧಿಯಿನಾವಂ |
ಪ್ರಕಾಮಮಿಾಶ್ವರನಸರ್ಚಿಸಂತತ್ಪುಣ್ಯಾ ||
ತ್ಮಕನಾಂಪಂ ಸದ್ಗತಿಯಂ |
ಪ್ರಕೃಷ್ಟನಾಮಾಲ್ಯವಂತನಂತೊಪ್ಪಿರನೇ || ೭ ||

o

# ೮ ನೆಯ ತರಂಗವು

ಇಂತು ಗುಣಾಢ್ಯನು ಕೇಳಲು, ಕಾಣಭೂತಿ ಏಳು ಕಥೆಗಳಾಗಿರುವ ಆ ದಿವ್ಯವಾದ ಮಹಾಕಥೆಯನ್ನು ತನ್ನ ಭಾಷೆಯಲ್ಲಿಯೇ ಹೇಳಿದನು. ಗುಣಾಢ್ಯನೂ ಅದನ್ನು ಪೈಶಾಚಿಭಾಷೆಯಲ್ಲಿಯೇ ೭ ಸಂವತ್ಸರಗಳೊಳಗೆ ಏಳು ಲಕ್ಷ ಗ್ರಂಥವನ್ನಾಗಿ ವಿರಚಿಸಿದನು. ವಿದ್ಯಾಧರರು ಅದನ್ನು ಅಪಹರಿಸದೆ ಇರಬೇಕೆಂದೂ, ಕಾಡಿನಲ್ಲಿ ಮಸಿ ದೊರೆಯದುದರಿಂದಲೂ, ಅದನಾಮಹಾಕವಿ ತನ್ನ ರಕ್ತದಲ್ಲಿಯೇ ಬರೆದನು. ಆದರೂ ಅದನ್ನು ಕೇಳಲು ಬಂದ ಸಿದ್ಧವಿದ್ಯಾಧರಾದಿಗಳಿಂದ ಗಗನದಲ್ಲಿ ಒಂದು ಮೇಲ್ಕಟ್ಟು ಕಟ್ಟಿದಂತೆ ವಿಮಾನಸಮಿತಿ ಕಾಣಿಸಿತು. ಕಾಣಭೂತಿ ಗುಣಾಢ್ಯನಿಂದ ವಿರಚಿಸಲ್ಪಟ್ಟ ಆ ಮಹಾಕಥೆಯನವಲೋಕಿಸಿ ಶಾಪಮುಕ್ತನಾಗಿ ತನ್ನ ದಿವ್ಯಗತಿಗೆಯ್ದಿದನು. ಆತನೊಡನಿದ್ದ ಇತರ ಪಿಶಾಚಗಳು ಕೂಡ ಆ ದಿವ್ಯ ಕಥೆಯನಾಲಿಸಿ ಸ್ವರ್ಗಭೋಗವನಾಂತುವು.

## ಗುಣಾಢ್ಯನು ಬೃಹತ್ಕಥೆಯನ್ನು ಸಾತವಾಹನನಿಗೆ ಕೊಡುವಿಕೆ

ಬಳಿಕ, ಗುಣಾಢ್ಯನು "ನಾನೀಕಥೆಯನ್ನು ಪೊಡವಿಯಲ್ಲಿ ನೆಲೆಗೊಳಿಸಬೇಕಾಗಿದೆ. ಆ ಮೇರೆಯೇ ಗೌರೀದೇವಿಯಿಂದ ನನಗೆ ಶಾಪಾವಸಾನವು ಹೇಳಲ್ಪಟ್ಟಿದೆ. ಇದನ್ನು ನಾನು ಹೇಗೆ ಪ್ರಕಟಿಸುವುದು ? ನಾನಾವ ಮಹಾತ್ಮನಿಗೆ ಕೊಡುವುದು ?" ಎಂದಾ ಕಾಡಿನಲ್ಲಿ ಚಿಂತಿಸುತ್ತಿದ್ದನು. ಆಗಳಾತನೊಡನೆ ಬಂದಿದ್ದ ಶಿಷ್ಯರಾದ ಗಣದೇವ ನಂದಿದೇವರೆಂಬವರು ಆ ಮಹಾ ಕವಿಯೊಡನೆ "ಈ ಮಹಾ ಕಾವ್ಯವನ್ನು ಒಪ್ಪಿಸುವುದಕ್ಕೆ ಯೋಗ್ಯನಾದವನು ಶ್ರೀಸಾತವಾಹನ ಮಹಾರಾಜನೊಬ್ಬನೆ. ಆತನು ರಸಿಕನು. ಹೂಗಳ ಪರಿಮಳವನ್ನು ಗಾಳಿ ಹೊರುವಂತೆ ಆತನೀಕಥಾವಳಿಯನ್ನು ವಹಿಸಲಾಪನು" ಎಂದು ಅರಿಕೆಗೆಯ್ದರು. ಆ ನುಡಿಗೊಪ್ಪಿ ಗುಣಾಢ್ಯ ಕವಿ ಆ ಶಿಷ್ಯರಿಬ್ಬರನ್ನೂ ಆ ಪುಸ್ತಕದೊಡನೆ ಸಾತವಾಹನ ಮಹಾರಾಜನ ಬಳಿಗೆ ಕಳುಹಿಸಿದನು. ತಾನೂ ಹೋಗಿ ಪ್ರತಿಷ್ಠಾನಪುರದ ಹೊರಗಿರುವ ದೇವೀ ಕೃತೋದ್ಯಾನದ ಒಂದು ರಹಸ್ಯ ಸ್ಥಳದಲ್ಲಿ ಕುಳಿತಿದ್ದನು. ಆ ಶಿಷ್ಯರೂ ಸಾತವಾಹಕ್ಷಿತಿಪತಿಯನ್ನು ಕಾಣಿಸಿಕೊಂಡು ಗುಣಾಢ್ಯ ಪ್ರಣೀತವೆಂದು ಆ ಪುಸ್ತಕವನ್ನು ಒಪ್ಪಿಸಿದರು. ಇವರು ಪಿಶಾಚರೂಪವಾಗಿರುವುದನ್ನೂ ಗ್ರಂಥವು ಪಿಶಾಚಭಾಷೆಯಾಗಿರುವುದನ್ನೂ ನಿರುಕಿಸಿ ವಿದ್ಯಾಮದದಿಂದ ಸಾತವಾಹನನು ಸಾಸೂಯನಾಗಿ "ಛೀ, ಗ್ರಂಥ ಸಂಖ್ಯೆಯೇಳು ಲಕ್ಷವಾಗಿದೆ. ಭಾಷೆಯಾದರೋ ನೀರಸವಾದ ಪೈಶಾಚಿ, ಮಸಿಯಾದರೋ ರಕ್ತವು. ಇದೇನು ಹಾಳು ಕಥೆ ? ಗೋಳು ಕೆಲಸವು ?" ಎಂದು ಧಿಕ್ಕರಿಸಿದನು. ಬಳಿಕ ಶಿಷ್ಯರವರು ಪುಸ್ತಕದೊಡನೆ ಬಂದವರು ಬಂದಂತೆಯೇ ಹೋಗಿ ನಡೆದ ಸಂಗತಿಯನ್ನು ನಡೆದಂತೆಯೇ

ಗುಣಾಢ್ಯನಿಗರಿಕೆಗೆಯ್ದರು. ಆ ಮಹಾ ಕವಿಯೂ ಕೇಳಿದೊಡನೆಯೇ ಕಳವಳಪಡ ತೊಡಗಿದನು. ತಿಳಿದವನು ಅವಮಾನಿಸಿದರೆ ಯಾರು ದುಃಖಿಸದಿರುವರು ?

ಆ ಬಳಿಕ ಗುಣಾಢ್ಯನು ಅಲ್ಲಿಗೆ ಸಮಿಾಪದಲ್ಲಿಯೇ ಇರುವ ಬೆಟ್ಟಕ್ಕೆ ಶಿಷ್ಯರೊಡನೆ ಹೋಗಿ ಅಲ್ಲಿ ರಮಣೀಯವೂ ರಹಸ್ಯವೂ ಆದ ಒಂದು ಪ್ರದೇಶದಲ್ಲಿ ತನ್ನ ಮುಂದೆ ಅಗ್ನಿ ಕುಂಡವನ್ನು ಸಂಸ್ಥಾಪಿಸಿಕೊಂಡು ಅಲ್ಲಿ ಶಿಷ್ಯರು ಕಂಬನಿ ತುಂಬಿ ಪರಿತಾಪದಿಂದ ಪರಿವಂತೆ ಶೋಕಿಸುತವಲೋಕಿಸುತಿರಲು, ಒಂದೊಂದೋಲೆಯನ್ನಾಗಿ ಓದಿ ಮೃಗಗಳಿಗೂ ಹಕ್ಕಿ ಗಳಿಗೂ ಶ್ರವಣ ಮಾಡಿಸಿ, ಬೆಂಕಿಯಲ್ಲಿ ಬಿಸುಟು ಸುಡುತ್ತ ಬಂದನು. ಆದರೂ ಶಿಷ್ಯರಿಗಾಗಿ ಅವರಿಗತ್ಯಂತ ಪ್ರಿಯವಾದ ನರವಾಹನದತ್ತ ಚರಿತವೆಂಬ ಲಕ್ಷಗ್ರಂಥ ಸಂಖ್ಯೆಯ ಕಥೆಯೊಂದು ಕಡೆಗೆ ಉಳಿದಿರಲು ಮಿಕ್ಕ ಆರು ಲಕ್ಷ ಗ್ರಂಥವೂ ಅಗ್ನಿಕುಂಡಕ್ಕೆ ಆಹುತಿಯಾಯಿತು. ಆ ಮೇರೆ ಆ ಮಹಾಕವಿ ಆ ದಿವ್ಯ ಕಥೆಯನ್ನು ಓದಿಯೋದಿ ಸುಡುತ್ತಿರುವಲ್ಲಿ ಎರಳೆಯೆಕ್ಕಲನೆಮ್ಮೆ ಕರಡಿ ಮೊದಲಾದ ಎಲ್ಲಾ ಜಂತುಗಳೂ ಉಲ್ಲಾಸದಿಂದಲ್ಲಿಗೆ ಬಂದು ಸುತ್ತಲೂ ಬಳಸಿಕೊಂಡು ಸಾಲುಗಟ್ಟಿ ಕುಳಿತುಕೊಂಡು ತಮ್ಮ ಮೇವು ಮೆಲ್ಲಲೊಲ್ಲದೆ ಕೇಳಿ ಕೇಳಿ, ಸುಡುವುದನವಲೋಕಿಸಿ ತಾವೂ ಶೋಕಿಸಿ ಕಂಬನಿಗಾರುತ್ತ ಅಂತಿಂತು ಮಿಸುಕದೆ ಅವಧಾನದಿಂದ ಆಲೈಸುತ್ತಿರುವುವು. ಅಷ್ಟರಲ್ಲಿ ಸಾತವಾಹನ ಭೂತಳೇಶನಿಗೆ ಆರೋಗ್ಯ ತಪ್ಪಿತು. ವೈದ್ಯರು ಬಂದು ನೋಡಿ ಇದಕ್ಕೆ ಕಾರಣವು ನೀರಸ ಮಾಂಸ ಭೋಜನವೆಂದು ಹೇಳಿದರು. ಆದರಿಂದ ರಾಯನು ಅಡಿಗೆ ಭಟ್ಟರನ್ನು ಕರೆದು ಆಗ್ರಹಗೊಳ್ಳಲು, ಅವರು ತಮಗೆ ಬೇಡರು ತಂದಿತ್ತ ಮಾಂಸ ವನ್ನು ನಾವಟ್ಟಿಟ್ಟೆವೆಂದರು. ಬಳಿಕ ನಾಡೊಡೆಯನು ಬೇಡರನ್ನು ಕರೆಯಿಸಿ ವಿಚಾರಿ ಸಲು ಅವರು “ಮಹಾಪ್ರಭೂ ! ಇಲ್ಲಿಯೇ ಪರ್ವತದಲ್ಲಿ ಬ್ರಾಹ್ಮಣನೊಬ್ಬನು ಒಂದೊಂದೋಲೆಯನ್ನಾಗಿ ಓದಿಯೋದಿ ಬೆಂಕಿಗೆ ಬಿಸುಡುತ್ತಿರುವನು. ಎಲ್ಲಾ ಮೃಗ ಪಕ್ಷಿ ಪ್ರಾಣಿಗಳೂ ಅಲ್ಲಿಗೆ ಬಂದು ಮೇವು ತೊರೆದು ಕೇಳುತ್ತಿವೆ. ಆಚೆಗೆ ಹೋಗವು. ಆದರಿಂದ ಅವುಗಳ ಮಾಂಸವು ಹಸಿವಿನಿಂದ ಬಾಡಿ ಹೋಗಿದೆ” ಎಂದು ಬಿನ್ನವಿ ಸಿದರು. ಆ ನುಡಿ ಕಿವಿಗೆ ಬಂದೊಡನೆಯೇ ಸಾತವಾಹನನು ಆ ಬೇಡರನ್ನೇ ಮುಂದೆ ನಡೆಯಿರೆಂದು ನಿಯಮಿಸಿ, ಕುತೂಹಲದಿಂದ ರಾಯನು ತಾನಾಗಿ ಗುಣಾಢ್ಯನಿದ್ದ ಪ್ರದೇಶಕ್ಕೆ ಹೋಗಿ ಉಪಶಾಂತವಾದ ಶಾಪಾಗ್ನಿಯ ಧೂಮಿಕೆಗಳಿಂದಮೆಂಬಂತೆ ವನ ವಾಸದಿಂದಾದ ಜಡೆಗಳುಳ್ಳವನಾಗಿರುವ ಗುಣಾಢ್ಯ ಮಹಾಕವಿಯನ್ನು ನೋಡಿದರು. ಕಂಬನಿ ತುಂಬಿ ಕರಗುತ್ತಿರುವ ಮೃಗಗಳ ನಡುವೆ ಇದ್ದವನನ್ನು ಗುರುತು ಹಿಡಿದು ನಮಸ್ಕರಿಸಿ, ಈ ವೃತ್ತಾಂತವೇನೆಂದು ಸಾತವಾಹನನು ಬೆಸಗೊಂಡನು. ಗುಣಾಢ್ಯನೂ ರಾಯನಿಗೆ ಪುಷ್ಪದಂತನ ಶಾಪವಾದಿಯಾಗಿ ಕಥಾಪೀಠಿಕೆಯನ್ನೆಲ್ಲವನ್ನೂ ಭೂತಭಾಷೆ ಯಿಂದಲೇ ಹೇಳಿದನು.

ಆ ಬಳಿಕ, ಸಾತವಾಹನನು ಆತನನ್ನು ಪ್ರಮಥಾವತಾರವೆಂದು ಬಲ್ಲವನಾಗಿ ಅಡಿದಾವರೆಗಳಿಗೆ ಪೊಡಮಟ್ಟು, ಹರಮುಖೋದ್ಗತವಾದ ಆ ದಿವ್ಯ ಕಥೆಯನೆನಗೆ

ದಯೆ ಮಾಡಿ ಕೊಡೆಂದು ಬೇಡಿಕೊಂಡನು. ಆಗಳಾ ಗುಣಾಢ್ಯನು ಸಾತವಾಹನ ನೊಡನೆ "ಅರಸನೇ ! ಆರು ಲಕ್ಷ ಗ್ರಂಥವಾದ ಆರು ಕಥೆಗಳನ್ನೂ ಸುಟ್ಟುಬಿಟ್ಟೆನು. ಇದು ಲಕ್ಷಗ್ರಂಥವು. ಆ ಕಥೆಗಳಲ್ಲಿ ಇದೊಂದಾಗಿದೆ. ಉಳಿದಿರುವುದನ್ನು ಕೈಕೊಳ್ಳು; ನನ್ನ ಶಿಷ್ಯರೂ ನಿನ್ನೊಡನೆ ಬಂದು ಅದನ್ನು ವಿವರಿಸಲಾಪರು." ಹೀಗೆಂದು ನುಡಿದು. ರಾಯನ ಬಳಿಯಲ್ಲಿ ಬೀಳ್ಕೊಂಡು ಯೋಗದಿಂದ ಆ ದೇಹವನ್ನು ತ್ಯಜಿಸಿ, ಗುಣಾಢ್ಯನು ಶಾಪ ಮುಕ್ತನಾಗಿ ತನ್ನ ದಿವ್ಯ ಗತಿಯನೆಯ್ದಿದನು. ಬಳಿಕ ಸಾತವಾಹನನು ಪಶ್ಚಾತ್ತಾಪ ಪರಿತಪ್ತಾಂತರಂಗನಾಗಿ ಗುಣಾಢ್ಯನಿತ್ತ ಬೃಹತ್ಕಥೆಯೆಂಬ ಹೆಸರಾಂತ ನರವಾಹನದತ್ತ ಚರಿತ್ರವನ್ನು ಗ್ರಹಿಸಿ, ತನ್ನ ನಗರವನ್ನು ಸೇರಿದನು. ಶತ್ಕಥಾ ಪ್ರಣೇತಾರನಾದ ಮಹಾ ಕವಿಯ ಶಿಷ್ಯರಾದ ಗುಣದೇವ ನಂದಿದೇವರನ್ನು ಧನಕನಕ ವಸ್ತ್ರವಾಹನಾದಿಕ ಸಮಸ್ತ ಸಂಪದವನಿತ್ತು ಸತ್ಕರಿಸಿದನು. ಆ ಶಿಷ್ಯರೊಡನೆ ಕೂಡಿ ಆ ಕಥೆಯನ್ನು ವಿಂಗಡಿಸಿ ಆ ಭಾಷೆಯಲ್ಲಿಯೇ ಕಥಾವತರಣವನರುಹಿಸಲು ಈ ಕಥಾಪೀಠವನ್ನು ರಚಿಸಿ ಗ್ರಂಥಕ್ಕೆ ಸೇರಿಸಿದನು. ಆಹಾ ! ಆ ಕಥೆ ಚಿತ್ರರಸವನ್ನು ತುಳ್ಕಾಡಿಸುತ ದೇವತಾಚರಿತ್ರಗಳನ್ನೂ ಮರೆಯಿಸಿ ಆ ನಗರದಲ್ಲಿ ಮಾತ್ರವಲ್ಲದೆ ಮೂರು ಲೋಕಗಳಲ್ಲಿಯೂ ಪ್ರಖ್ಯಾತವಾಗಿ ಪ್ರಕಾಶಿಸಿತು.

ನೀತಿ : ಕಂದ || ಉತ್ತಮ ಕವಿ ಕಳುಹಿಸಿದವ
ರಿತ್ತುದನಾದರಿಸದಾತ ನಳಲ್ವಂಕಡೆಯೊಳ್ ।
ಮತ್ತ ಮತಿ ಸಾತವಾಹನ
ನತ್ತ ಬೃಹತ್ಕಥೆಯ ಕಳೆದು ಕಳವಳಿಸಿದವೋಲ್ || * ||

ಕಂದ || ಗುಣಮಂ ಗ್ರಹಿಸುವವರಿಲ್ಲದೊ
ಡಣಮುಂ ನಿಜ ಕೃತಿಗೆ ನಿಷ್ಫಲತ್ವಂಬರ್ಕುಂ ।
ಕ್ಷಣದೊಳಗಾರುಂ ಕಥೆಗಳ್
ಗುಣಾಢ್ಯನಿಂಬೆಂಕಿ ಬಾಯ್ಗೆ ಬೀಳ್ಪಾ ತೆರದಿಂ || ೮ || ( ೨೩ ) ||

ಇಂತೆಂಬಲ್ಲಿಗೆ ಸಿದ್ಧಾಂತಿ ಶಿವಶಂಕರಶಾಸ್ತ್ರಿ ಪ್ರಣೀತಮಾದ ಕರ್ಣಾಟ ಕಥಾ ಸರಿತ್ಸಾಗರವೆಂಬ ವಚನ ರಚನೆಯಲ್ಲಿ ಎಂಟು ತರಂಗಂಗಳುಳ್ಳ ಕಥಾಪೀಠಲಂಬಹವೆಂಬ ಪ್ರಥಮ ಭಾಗವು.

# ಮುಗಿದುದು.

# ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡ

## ೧೫ ಪುಷ್ಪಗಳ ಪ್ರಕಟಣೆ

| | | | |
|---|---|---|---|
| ೧ | ಪಂಡಿತರಾಜ ಜಗನ್ನಾಥ | ... | ೫-೦೦ |
| ೨ | ಕನ್ನಡಿಗರ ಜನ್ಮಸಾರ್ಥಕತೆ | ... | ೫-೦೦ |
| ೩ | ಕರ್ಣಾಟಕ ನರಕಾಸುರ ವಿಜಯಃ ವ್ಯಾಯೋಗಂ | ... | ೪-೦೦ |
| ೪ | ಕರ್ನಾಟಕ ಕಥಾಸರಿತ್ಸಾಗರ | ... | ೬-೦೦ |
| ೫ | ಶೌರ್ಯಸಾಗರ | ... | ೬-೦೦ |
| ೬ | ಕನ್ನಡವಮಾತು ತಲೆಯೆತ್ತುವ ಬಗೆ | ... | ೩-೦೦ |
| ೭ | ಕಾಲಿದಾಸ ಚರಿತ್ರ | ... | ೬-೦೦ |
| ೮ | ಕರ್ಣಾಟಕ ಯಯಾತಿ ನಾಟಕಂ | ... | ೮-೦೦ |
| ೯ | ಮೋಹಿನೀ ಅಥವಾ ನಿಂದಕರ ನಡವಳಿ | ... | ೧೦-೦೦ |
| ೧೦ | ಭಾರತೀಯ ವಿದುಷಿಯರು | ... | ೮-೦೦ |
| ೧೧ | ಶ್ರೇಯಃಸಾಧನ | ... | ೮-೦೦ |
| ೧೨ | ಗೃಹವೈದ್ಯಕವು | ... | ೮-೦೦ |
| ೧೩ | ಇಸೋಪನ ಚರಿತ್ರ | ... | ೩-೦೦ |
| ೧೪ | ವಿದ್ಯಾರಣ್ಯ ಸ್ವಾಮಿಗಳು | ... | ೧೦-೦೦ |
| ೧೫ | ನರಗುಂದದ ಬಂಡಾಯ | ... | ೧೦-೦೦ |

